Now I would like to say something about factoties. There is power cut to the extent of 25 to 30 per cent. Last year there were proportionate monthy minimum charges to the extent of the power cut but is not continued this year I submit that this could be considered.

Coming to Leather and Industries Board, I am glad this Board is doing good work. But once I had expressed to the Hon. Minister that this Board should take care of the tanners at the village level. I am sure that many people here are aware that the tanners live in a most unhygenic condition and the skins that are not cured are kept in every house and there is a horrible Stink which makes it impossible even to go near it. and people live in suchs conctitions. So, if the Leather Board can provide sheds slightly away from the villages to store their hides and give them water facilities to clean the hides I am sure we will be Seeing to the real welfare of these people.

I must thank the Government for having released garnts to the Mahila Mandals taking into account that this year is the International Women Year but I hope they won't stop with this because this International Women Year is just one step put forth and this will be a continuous process. So, I request the Industries Department not to forget the women next year.

There is one more request. When the loans are sanctioned to these enterperneurs, there is considerable delay. I am sure there is some sort of system in the office which brings forth this delay, if it can be simplified I think we would also be saving some money. Because when the project reports are prepared and sent to the Industries

Department, before they are sanctioned the prices of machinery go up. As members are aware, a machinery which costs Rs 30,000 now will go up to Rs. 60,000 within a month. I think this is a loss to the Government and the entrepreneurs too. Therefore, if quick decision and quick action is taken, it would really help the entrepreneurs to progress in industry.

I have a little request regarding the Class III and Class IV employeees of the Legislature Secretariat. According to existing Government Order, Class III and Class IV employees are entitled to overtime allowance at the following rates :—

Class III Re. 1/ for every two extra hours after 5-30 P. M. (subject to a maximum of Rs. 75/-).

Class IV 37 paise for every hour after 5-30 P. M. whereas Class III Class IV servants working at the Legislators home and those who are posted by G.A.D. during the sessions are getting overtime allowance as follows :

Class III Rs. 3/- per day

Class IV Rs. 2/- per day

Lift Attender Rs. 3/- per day (Class IV)

No time limit is prescribed in their case. The officers and officials working in the Budget Branch of Government Secretariat are entitled to one month's salary during budget preparation.

The above mentioned facts clearly show that there is disparity in granting overtime allowance and I wish this would be removed, and the employees of the Legislature Secretariat should be granted overtime allowance at Rs. 3/ and Rs. /- o Class III and Class IV officials

(Smt. Sumati Madiman)

respectively on par with the officials of the Legislators Home and other officials of the Government Secretariat in view of the some nature of work.

4-30 P. M.

†ಶ್ರೀ ಹೆಚ್. ಡಿ. ದೇವೇಗೌಡ :—ಮಾನ್ಯ ಸಭಾಧ್ಯಕ್ಷರೇ, ಈಗ ಸಭೆಯ ಮುಂದೆ ಮಾನ್ಯ ಕೈಗಾರಿಕಾ ಮಂತ್ರಿಗಳು ಮಂಡಿಸಿರತಕ್ಕ ಕೈಗಾರಿಕಾ ಇಲಾಖೆ ಮತ್ತು ಲೆಜಿಸ್ಲೇಚರ್ ಶಾಸಕಾಂಗಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ಏನು ಮಂಡಿಸಿದ್ದಾರೆ ಈ ಒಂದು ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡತಕ್ಕ ಸಂದರ್ಭದ ಪ್ರಥಮವಾಗಿ ಶಾಸಕಾಂಗದ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಿ ಆ ವೇಳೆ ಕೈಗಾರಿಕಾ ಇಲಾಖೆಯ ಮೇಲೆ ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ ಕಳೆದ ಸಾರಿ ಈ ಮನೆಯಲ್ಲಿ ಶಾಸಕಾಂಗದ ಒಂದು ಸ್ವಾತಂತ್ರ್ಯ ಮತ್ತು ಕಾರ್ಯಾಂಗದ ಅಧೀನದಲ್ಲಿ ಕೆಲಸ ಮಾಡಬಾರದು ಎನ್ನತಕ್ಕ ಬಗ್ಗೆ ನಾವು ಏನು ಮನವಿಯನ್ನು ಮಾಡಿದ್ದೆವು ಅದನ್ನು ಪರಿಶೀಲಿಸುತ್ತೇನೆ ಎಂನು ಮಾನ್ಯ ಕೈಗಾರಿಕಾ ಸಚಿವರು ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾನು ಅವರ ಅಶ್ವಾಸನೆಯನ್ನು ಈ ಸಂದರ್ಭದಲ್ಲಿ ಓದಬೇಕಾದ್ದು ಇಲ್ಲ. ಅದರ ಆವಶ್ಯಕತೆ ಇಲ್ಲ. ಆದರೂ ಕೂಡ ಅವರು ಕೊಟ್ಟಂತಹ ಆಶ್ವಾಸನೆಯನ್ನು ಅವರ ನೆನಪಿಗೆ ತಂದುಕೊಡುತ್ತೇನೆ ನಮ್ಮ ರಾಷ್ಟ್ರದ ಎಲ್ಲಾ ರಾಜ್ಯದ ವಿಧಾನ ಮಂಡಲಗಳಲ್ಲಿಯೂ ಇವೊತ್ತು ಸ್ವತಂತ್ರವಾಗಿ ಕೆಲಸ ಮಾಡತಕ್ಕ ಒಂದು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲ. ಈ ಒಂದು ನಿರ್ಣಯ ಬಹಳ ದಿವಸಗಳ ಹಿಂದೆಯೇ ಆಗಿದ್ದರೂ ಕೂಡ ಅದು ಕಾರ್ಯ ರೂಪಕ್ಕೆ ಬರತಕ್ಕದ್ದರಲ್ಲಿ ವಿಳಂಬವಾಗಿದೆ. ಇದನ್ನು ಅತಿ ಜರೂರಾಗಿ ಕಾರ್ಯರೂಪಕ್ಕೆ ತರಬೇಕು ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಕಾರಣ ಇಷ್ಟೇ ಮಾನ್ಯ ಕೃಷ್ಣಾ ಅವರು ಈ ವಿಚಾರವನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ ಎಂಬುದು ಅವರ ಭಾಷಣದಲ್ಲಿವ್ಯಕ್ತವಾಗುತ್ತದೆ. ನಾವು ಅನೇಕ ಶಾಸನ ಸಭಾ ಸಮಿತಿಗಳಲ್ಲಿ ಕೆಲಸ ಮಾಡತಕ್ಕ ಕಾಲದಲ್ಲಿ ಹಲವಾರು ಸಾರಿ ನೋಡಿದ್ದೇವೆ. ನಮ್ಮ ಕಾರ್ಯದರ್ಶಿಗಳು ಕೆಲವು ಸರ್ಕಾರದ ವತಿಯಿಂದ ಮಾಹಿತಿ ದೊರೆಯಬೇಕಾದರೆ ಕಾರ್ಯಾಂಗ ಎಗ್ಜಿಕ್ಯುಟೀವ್ ಅಥಾರಿಟಿಯ ಅಂಡರ್ ಸೆಕ್ರೆಟರಿಗಳ ಹತ್ತಿರ ಹೋಗಿ ನಿಂತುಕೊಳ್ಳತಕ್ಕ ಪರಿಸ್ಥಿತಿಯನ್ನು ನಾನು ಕೇಳಿದ್ದೇನೆ. ಇದಕ್ಕೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಲೆಜಿಸ್ಲೇಚರ್ ಸೆಕ್ರೆಟರಿ, ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ಯಾರ ಅಧೀನದಲ್ಲೂ ಕೆಲಸ ಮಾಡತಕ್ಕದ್ದು ಯೋಗ್ಯವಲ್ಲ. ಅದು ಶೋಭಾಯಮಾನವಾಗಿ ಕಾಣುವುದಿಲ್ಲ.

ಯ್ಯಾರಿಗೂ ಕೂಡ ಗೌರವ ಕೂಡ ತರುವುದಿಲ್ಲ. ಒಬ್ಬ ಲೆಜಿಸ್ಲೇಚರ್ ಅಂಡರ್ ಸೆಕ್ರೆಟರಿ ಕಾರ್ಯಾಂಗದ ಅಂಡರ್ ಸೆಕ್ರೆಟರಿಯವರಿಗೆ ಪತ್ರ ಬರೆದು ಅವರ ಹತ್ತಿರ ಯೋಚನೆ ಮಾಡತಕ್ಕ ಪರಿಸ್ಥಿತಿ ಇಲ್ಲ. ಶಾಸಕಾಂಗ ಕೆಲಸ ಮಾಡುವುದಕ್ಕೆ ಅವಕಾಶ ಕೊಡತಕ್ಕಂಥಾದ್ದು ಅದು ಶಾಸಕಾಂಗಕ್ಕೆ ಇರತಕ್ಕಂಥಾ ಒಂದು ಘನತೆ ಒಂದು ಗೌರವವನ್ನು ಇವೊತ್ತು ನಾವೆಲ್ಲರೂ ಎತ್ತಿ ಹಿಡಿಯಬೇಕು. ಇಂಥಾ ಒಂದು ಅವಕಾಶವನ್ನು ಕೊಡತಕ್ಕದ್ದನ್ನು ಮಾನ್ಯ ಪಾರ್ಲಿಮೆಂಟರಿ ಶಾಖೆಯ ಸಚಿವರಾದ ಮಾನ್ಯ ಕೃಷ್ಣ ಅವರು ಒಪ್ಪುತ್ತಾರೆ ಮತ್ತು ಅವರು ಈ ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಈ ಒಂದು ನಿರ್ಣಯವನ್ನು ಜಾರಿಗೆ ಕೊಡುತ್ತೇವೆ ಎನ್ನತಕ್ಕದ್ದನ್ನು ಘೋಷಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಪರಿಶೀಲನೆ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುವುದಕ್ಕೆ ಬದಲಾಗಿ ಏನು ಹಿಂದೆ ಇದನ್ನು ಸಚಿವ ಸಂಪುಟ ನಿರ್ಣಯವನ್ನು ತೆಗೆದುಕೊಂಡಿದಾರೆ ಆ ನಿರ್ಣಯವನ್ನು ಕಾರ್ಯರೂಪಕ್ಕೆ ತರುತ್ತೇವೆ ಎನ್ನತಕ್ಕಂಥಾದ್ದನ್ನು ಇವೊತ್ತು ಉತ್ತರ ಕೊಡುವಾಗ ಘೋಷಣೆ ಮಾಡಬೇಕು. ಇದಕ್ಕೆ ಯಾವುದೇ ಸಬೂಬು ಒಡ್ಡಬಾರದು ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಶಾಸಕಾಂಗಕ್ಕಾಗಲೀ ಅದಕ್ಕೆ ಸಂಬಂಧಪಟ್ಟ ಸಮಿತಿಗಳು ಕೆಲಸ ಮಾಡತಕ್ಕ ಕಾಲದಲ್ಲಿ ಯಾರದೇ ಹಂಗಿಗೆ ಒಳಗಾಗಿ ಕೆಲಸ ಮಾಡಬೇಕಾಗಿಲ್ಲ. ಕಾರ್ಯಾಂಗದ ಮರ್ಜಿಗೆ ಅನುಸರಿಸಿಕೊಂಡು ಕೆಲಸ ಮಾಡುತ್ತಾ ಹೋದರೆ ಶಾಸಕಾಂಗಕ್ಕೆ ಇರತಕ್ಕ ಒಂದು ಘನತೆ ಕುಗ್ಗುತ್ತದೆ. ಇದರ ಒಂದು ಘನತೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಡೀ ರಾಷ್ಟ್ರದಲ್ಲಿ ಎಲ್ಲಾ ವಿಧಾನ ಮಂಡಲಗಳೂ ಯಾವ ರೀತಿಯಾಗಿ ಸ್ವತಂತ್ರವಾಗಿ ಕೆಲಸ ಮಾಡುತ್ತವೆ ಅದರ ಹಿನ್ನಲೆಯಲ್ಲಿ ನಾನು ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ. ಮಾನ್ಯ ಸಂಸದೀಯ ಶಾಖೆಯ ಸಚಿವರು ವಿದೇಶದಲ್ಲಿ ಪ್ರವಾಸ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಅನುಭವ ಇದೆ. ಅವರು ಈ ಒಂದು ನಿರ್ಣಯವನ್ನು ಜಾರಿಗೆ ಕೊಡುತ್ತೇವೆ ಎನ್ನುವುದನ್ನು ಈ ಶಾಸನಸಭೆಯಲ್ಲಿ ತಿಳಿಸಬೇಕು ಎಂದು ನಾನು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ

ಮತ್ತೊಂದು ವಿಷಯ. ಶ್ರೀಮತಿ ಸುಮತಿ ಮಡಿಮನ್ ಅವರು ಈ ಒಂದು ಶಾಸನ ಸಭೆಯಲ್ಲಿ ಕೆಲಸ ಮಾಡತಕ್ಕ ಮತ್ತು ಶಾಸನಸಭಾ ಕಾರ್ಯಾಲಯದಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಬಹುಷಃ ಮತ್ತೆ ನಾನು ಅದನ್ನು ಪ್ರತಿಪಾದನೆ ಮಾಡಬೇಕಾಗಿಲ್ಲ. ಈ ಬಗ್ಗೆ ನಾನು ಪದೇ ಪದೇ ಹೇಳಿದ್ದೇನೆ. ಶಾಸನಸಭಾ ಕಾರ್ಯಾಲಯದಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗದವರಿಗೆ ಓವರ್‌ಟೈಮ್ ಅಲೋಯನ್ಸ್ ಕೊಡಬೇಕಾಗುತ್ತದೆ. ಅವರಿಗೆ ಕೊಡತಕ್ಕ ಸಂಬಳ ಸಾರಿಗೆ ಬಹಳ ಕಡಿಮೆ ಇದೆ. ಅದರಲ್ಲೂ ನಾಲ್ಕನೇ ದರ್ಜೆಯ ನೌಕರರು ಮತ್ತು ಈ ಸಭೆಯಲ್ಲಿ ಕೆಲಸ

(ಶ್ರೀ ಹೆಚ್. ಡಿ. ದೇವೇಗೌಡ)

ಮಾಡತಕ್ಕ ಅಟೆಂಡರುಗಳು ಏನಿದ್ದಾರೆ ಅವರಿಗೆ ಕೊಡತಕ್ಕ ವೇತನ ಬಹಳ ಕಡಿಮೆ ಇದೆ ಎನ್ನುವುದು ತಮಗೆ ಗೊತ್ತಿದೆ. ಸಮಿತಿಗಳು ನಡೆಯತಕ್ಕ ಕಾಲ ದಲ್ಲಿ ಮತ್ತು ಈ ಸಭೆಯ ಅಧಿವೇಶನ ನಡೆಯುತಕ್ಕ ಕಾಲದಲ್ಲಿ ಕಾಲ ನಿಗದಿ ಇರು ವುದಿಲ್ಲ ಈ ಸಭೆ ಬೆಳಿಗ್ಗೆ 8½ ಗಂಟೆಗೆ ಪ್ರಾರಂಭವಾಗಿ ಸಂಜೆ 7 ಗಂಟೆಯುವರೆಗೂ ನಡೆಯುತ್ತದೆ. ಆದ್ದರಿಂದ ಇಲ್ಲಿ ಕೆಲಸ ಮಾಡತಕ್ಕ, ವಿಧಾನಸಭಾ ಕಾರ್ಯಾ ಲಯದಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗದವರಿಗೆ ಒಂದು ಓವರ್‌ಟೈಮ್ ಅಲೋಯನ್ಸ್ ಕೊಡುವ ಬಗ್ಗೆ ಸರ್ಕಾರದವರು ಹಿಂದೂ ಮುಂದೂ ನೋಡ ಬಾರದು ಇದರಿಂದ ಸರ್ಕಾರಕ್ಕೆ ಅತಿ ವೆಚ್ಚ ಆಗುವುದಕ್ಕೆ ಸಾಧ್ಯವಿಲ್ಲ. ಇದು ಬಹಳ ಗಣನೀಯವಾದ ವೆಚ್ಚ ಆಗುವುದಿಲ್ಲ. ಇವತ್ತು ನಮ್ಮ ಶಾಸನ ಸಭಾ ಕಾರ್ಯಾಲಯದಲ್ಲಿ ಕೆಲಸ ಮಾಡತಕ್ಕ ಎಲ್ಲಾ ಅಧಿಕಾರವರ್ಗದವರಿಗೂ ಹೆಚ್ಚು ವೇತನ ಕೊಡತಕ್ಕದ್ದು ಮತ್ತು ಓವರ್‌ಟೈಮ್ ಅಲೋಯನ್ಸ್ ಕೊಡತಕ್ಕದ್ದರ ಬಗ್ಗೆ ಸರ್ಕಾರ ಅತಿ ಶೀಘ್ರವಾಗಿ ನಿರ್ಣಯವನ್ನು ತಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ನಾನು ಇದನ್ನು ಮಾನವೀಯತೆಯ ದೃಷ್ಟಿಯಿಂದ ಹೇಳು ತ್ತಿದ್ದೇನೆ. ಅವರು ಇಲ್ಲಿ ಕೆಲಸ ಮಾಡತಕ್ಕ ದೃಷ್ಟಿಯಿಂದ ನಾನು ಹೇಳುತ್ತಿ ದ್ದೇನೆ, ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕದ್ದು ಉಚಿತ ಯೋಗ್ಯ ಎನ್ನ ತಕ್ಕಂಥಾದ್ದನ್ನು ತಿಳಿಸಿ ನಾನು ಮೊದಲು ಸ್ಪಷ್ಟಪಡಿಸಿದ ರೀತಿಯಲ್ಲಿ ಈ ಒಂದು ಶಾಸಕಾಂಗ ಯಾವುದೇ ಹಂಗಿನಲ್ಲಿ ಕೆಲಸ ಮಾಡತಕ್ಕ ಪರಿಸ್ಥಿತಿ ಏನಿದೆ ಅದಕ್ಕೆ ತಿಲಾಂಜಲಿಯನ್ನು ಅರ್ಪಿಸುವುದಕ್ಕೆ ಅವಕಾಶವನ್ನು ಕಲ್ಪಿಸಿ ಎಂದು ನಾನು ಮಾನ್ಯ ಪಾರ್ಲಿಮೆಂಟರಿ ಸಚಿವರಲ್ಲಿ ಮನವಿ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೈಗಾರಿಕೆ ಇಲಾಖೆಗಳ ಬೇಡಿಕೆಗಳ ಬಗ್ಗೆ ಕಳೆದ 3 ವರ್ಷಗಳಲ್ಲಿ ಹಲ ವಾರು ಸಲಹೆಗಳನ್ನು ಕೊಟ್ಟಿದ್ದೇವೆ, ಮಾನ್ಯ ಸಚಿವರು ಈ ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ನಾವು ವಿರೋಧ ಪಕ್ಷದ ವತಿಯಿಂದ ಕೊಟ್ಟಿರತಕ್ಕ ಸಲಹೆ ಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಆಶ್ವಾ ಸನೆಯನ್ನು ಕೊಟ್ಟಿದ್ದಾರೆ. ಅವರ ಉತ್ತರವನ್ನು ನಾನು ನೋಡಿದ್ದೇನೆ. ಅವರು ಉತ್ತರ ಕೊಡತಕ್ಕ ಕಾಲದಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವುಗಳನ್ನು ಎಷ್ಟರ ಮಟ್ಟಿಗೆ ಇವೊತ್ತು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ವಿಮರ್ಶೆ ಮಾಡಿದರೆ ಬಹುಶಃ ಅವುಗಳನ್ನು ಅವರು ಕಾರ್ಯರೂಪಕ್ಕೆ ತರತಕ್ಕಂಥಾದ್ದರಲ್ಲಿ ಮತ್ತು ಕೊಟ್ಟ ಭರವಸೆಗಳನ್ನು ಈಡೇರಿಸುವ ಬಗ್ಗೆ ಶ್ರಮವಹಿಸಿಲ್ಲ ಎನ್ನತಕ್ಕಂಥಾದ್ದನ್ನು ತಿಳಿಸಿದರೆ ಅವರು ಅನ್ಯಥಾ ತಪ್ಪು ತಿಳಿದುಕೊಳ್ಳಬಾರದು. ಶ್ರೀಮಾನ್ ಎಸ್. ಎಂ. ಕೃಷ್ಣಾ ಅವರು ಮೊನ್ನೆ ಮೈಸೂರಿನಲ್ಲಿ ಭಾಷಣ ಮಾಡುತ್ತಾ ಹೇಳಿದ್ದಾರೆ. ಸರ್ಕಾರ ಸಾಧಿಸಿರತಕ್ಕ ಕೆಲಸ

ಗಳಪಟ್ಟಿಯನ್ನು ಮಾಡಿ ದೇಶದ ಜನತೆಯ ಮುಂದೆ ಇಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ನನ್ನ ಮಿತ್ರರು ಹೇಳುತ್ತಾರೆ. ಅಂಥಾ ಒಂದು ಪುಸ್ತಕವನ್ನು ಮಾಡಿ ಇಟ್ಟಿದ್ದಾರೆ ಎಂದು. ಅದನ್ನು ನಾನು ನೋಡಿದಮೇಲೆ ನಾನು ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತೇನೆ. ಇವೊತ್ತು ಪ್ರಪ್ರಥಮವಾಗಿ ಶ್ರೀಮಾನ್ ಕೃಷ್ಣ ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಇಲಾಖೆಯನ್ನು ರಿಆರ್ಗನೈಜೇಷನ್ ಮಾಡಬೇಕು ಎಂದು ಕಳೆದ ಸಾರಿ ಹೇಳಿದ್ದಾರೆ. ಅದನ್ನು ಮಾಡತಕ್ಕದ್ದು ಬಹಳ ಅವಶ್ಯಕತೆ ಇದೆಯೆಂದು ಹೇಳಿದರು. ಆದರೆ ಇವತ್ತು ಅವರು ಕೊಟ್ಟಂಥ ಆಶ್ವಾಸನೆಯನ್ನು ಎಷ್ಟರ ಮಟ್ಟಿಗೆ ಈಡೇರಿಸಿದ್ದಾರೆಂದು ಹೇಳುವುದಕ್ಕೆ ಅವರಲ್ಲಿ ಉತ್ತರವಿಲ್ಲ. ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರು ಕಳೆದ ಒಂದು ವರ್ಷದಲ್ಲಿ ಈ ಇಲಾಖೆಯನ್ನು ರಿಆರ್ಗನೈಜೇಷನ್ ಮಾಡತಕ್ಕ ಬಗ್ಗೆ ಯಾವ ಪ್ರಯತ್ನವನ್ನೂ ಮಾಡಲಿಲ್ಲವೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಪ್ರತಿಯೊಂದು ಡಿವಿಷನ್ನಿಗೂ ಜಾಯಿಂಟ್ ಡೈರೆಕ್ಟರನ್ನು ನೇಮಕ ಮಾಡುತ್ತಾರೆ. ಇವತ್ತು ಷುಗರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡುತ್ತಾರೆ. ಈ ಇಲಾಖೆಯಲ್ಲಿ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವ ವ್ಯವಸ್ಥೆಯನ್ನು ಮಾಡುವುದ ಕ್ಕೋಸ್ಕರ ಈ ಒಂದು ಇಲಾಖೆಗೆ ಸಂಬಂಧಪಟ್ಟ ಒಂದು ಕೇಡರನ್ನು ತಯಾರು ಮಾಡುತ್ತಾರೆ. ರೆವಿನ್ಯೂ ಇಲಾಖೆಯಿಂದ ಬೇರೆಬೇರೆ ಇಲಾಖೆಯ ಅಧಿಕಾರಿ ಗಳನ್ನು ನೇಮಕ ಮಾಡುವ ಪದ್ಧತಿ ಏನಿದೆಯೋ ಅದನ್ನು ರದ್ದುಮಾಡಿ ಒಂದು ಇಂಡಸ್ಟ್ರಿಯಲ್ ಕೇಡರ್ ತಯಾರು ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಈ ಸಭೆಗೆ ಹಿಂದೆ ಏನು ಆಶ್ವಾಸನೆಯನ್ನು ಇವರು ಕೊಟ್ಟರೋ ಅದನ್ನು ಇನ್ನೂ ಕಾರ್ಯರೂಪಕ್ಕೆ ತರುವುದರಲ್ಲಿ ಬಹುಶಃ ಇವರ ಸಿಸ್ಟಂ ಎತ್ತಕಡೆಯೂ ಸಾಗಿಲ್ಲ ವೆಂದು ನಾನು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಅವರು ಏನು ಮಾಡಿದ್ದಾರೆಂಬುದನ್ನು ಮತ್ತು ಅವರು ಕೊಟ್ಟಂಥ ಆಶ್ವಾಸನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಯಾವ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆಂಬುದನ್ನು ಈ ಸಭೆಯಲ್ಲಿ ಅವರು ತಿಳಿಸಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಈ ಒಂದು ರಾಷ್ಟ್ರದ ಮತ್ತು ರಾಜ್ಯದ ಕೈಗಾರಿಕೆಯ ಬೆಳವಣಿಗೆ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ರಾಷ್ಟ್ರದ ಕೈಗಾರಿಕೆಯ ನೀತಿಯನ್ನು ಕುರಿತು ಕಳೆದಸಾರಿ ಈ ಸಭೆಯಲ್ಲಿಯೇ ಸಾಕಷ್ಟು ಚರ್ಚೆಮಾಡಿದ್ದೇನೆ. ಅದಕ್ಕೆ ಇರತಕ್ಕ ಮೂರು ದೋಷಗಳನ್ನೂ ಕೂಡ ಅಂಕಿ ಅಂಶಗಳೊಂದಿಗೆ ಈ ಸಭೆಯಲ್ಲಿಯೇ ನಾನು ಚರ್ಚೆಮಾಡಿದ್ದೇನೆ. ಕೈಗಾರಿಕೆಯ ನೀತಿಯಲ್ಲಿದ್ದಂಥ ದೋಷದ ಪರಿಣಾಮವಾಗಿ ಈ ರಾಷ್ಟ್ರದಲ್ಲಿ ಬಂಡವಾಳ ಹೂಡಿಕೆ ಮತ್ತು ಈ ಉತ್ಪತ್ತಿ ಅಥವಾ ಉತ್ಪಾದನೆ ಇವೆರಡೂ ಕಳೆದ ಮೂರು ವರ್ಷಗಳಿಂದ ಕಡಿತವಾಗಿದೆಯೆಂದೂ ಕೂಡ ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟು ಮಾತನಾಡಿ ದ್ದೇನೆ. ಪುನಃ ಅದನ್ನು ಪುನರುಚ್ಚಾರ ಮಾಡುವ ಅವಶ್ಯಕತೆ ಇಲ್ಲ. ಮಾನ್ಯ

(ಶ್ರೀ ಹೆಚ್. ಡಿ. ದೇವೇಗೌಡ)

ಶ್ರೀ ಕೃಷ್ಣ ಅವರು ಒಂದು ಕಡೆ ಮಾತನಾಡುತ್ತಾ ಇವತ್ತು ನಾವು ಈ ಒಂದು ಬಂಡವಾಳ ಹೂಡಿಕೆಯನ್ನು ಸ್ಥಗಿತಗೊಳಿಸಬೇಕು, ಇನ್‌ವೆಸ್ಟ್‌ಮೆಂಟ್ ಕೂಡಿಸಿ ಕೊಂಡು ಹೋಗಬೇಕೆಂದು ಕೇಂದ್ರ ಸರ್ಕಾರ ನಿರ್ಣಯಮಾಡಿದರೆ ಇದರಿಂದ ಇವತ್ತು ಕೈಗಾರಿಕೆಯ ಬೆಳವಣಿಗೆ ಸಾಕಷ್ಟು ಷೋಕ ಆಗುತ್ತದೆಂದು ಅವರೇ ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಅವರೇ ಆ ರೀತಿಯಾದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆಂದು ನಾನೇ ಪತ್ರಿಕೆಗಳಲ್ಲಿ ಓದಿದ್ದೇನೆ. ಇಂತಹ ಸಂದರ್ಭದಲ್ಲಿ ಕೇಂದ್ರದ ಮುಖಂಡರಿಗೆ ಕಣ್ಣು ತೆರೆಸುವುದು ಅವಶ್ಯಕವೆಂಬ ಮಾತನ್ನು ನಾನು ತಮಗೆ ಪೂರ್ವಭಾವಿಯಾಗಿ ತಿಳಿಸಲಿಚ್ಛಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ರಾಷ್ಟ್ರ ದಲ್ಲಿ ಇವತ್ತು ಹೆಚ್ಚು ಉತ್ಪಾದನೆಯನ್ನು ಮಾಡುವ ಆವಶ್ಯಕತೆ ಇದ್ದರೂ ನಮ್ಮ ಒಂದು ನೀತಿ ದೋಷದಿಂದ ಇವತ್ತು ರಾಷ್ಟ್ರವನ್ನು ಹೆಚ್ಚು ಸಂಪದ್ಯುಕ್ತ ವಾಗಿ ಬೆಳೆಸುವುದಕ್ಕೆ ಅವಕಾಶವಾಗಲಿಲ್ಲವೆಂಬ ವಾದವನ್ನು ಮುಂದೂಡುವುದಕ್ಕೆ ಹೊರಟಿದ್ದಾರೆ. ಬಳಕೆ ನಾವು ಕಡಿತ ಮಾಡಬಹುದು. ಇದನ್ನು ಹೆಚ್ಚು ಪ್ರಚಾರ ಮಾಡುವ ಅವಶ್ಯಕತೆ ಇದೆಯೆಂದು ರಾಷ್ಟ್ರದ ನಾಯಕರು ಹೇಳುತ್ತಾರೆ. ನಾವು ನಮ್ಮ ಬಳಕೆಯನ್ನು ಕಡಿಮೆ ಮಾಡುವ ಮುಖೇನ ಇವತ್ತು ವಿಧಿನಿಯಮಗಳನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತಿದ್ದೆ. ರಾಷ್ಟ್ರ ಇವತ್ತು ಆರ್ಥಿಕ ಪರಿಸ್ಥಿತಿಯ ಕಷ್ಟವನ್ನು ಅನುಭವಿಸುವ ಸಂದರ್ಭ ಬಂದಿದೆ. ಇವತ್ತು ಫಾರೆನ್ ಎಕ್ಸ್‌ಚೇಂಜ್ ಹೆಚ್ಚು ಬೇಕಾಗಿದೆ ಎಂಬ ವಾದವನ್ನು ಮುಂದೂಡಿ ನಮ್ಮಲ್ಲಿ ಇವತ್ತು ಅವಶ್ಯಕ ವಾದಂಥ ಎಲ್ಲ ಪದಾರ್ಥಗಳ ಬಳಕೆಯನ್ನು ಕಡಿತ ಮಾಡಬೇಕೆಂಬ ಸರ್ಕಾರದ ವಾತಾವರಣವನ್ನು ಸೃಷ್ಟಿ ಮಾಡಬೇಕಾಗಿದೆ. ರಾಷ್ಟ್ರದ ನಾಯಕರು ಇವತ್ತು ಜನತೆಯ ಮುಂದೆ ಅಂತಹ ಒಂದು ವಾದವನ್ನು ಮುಂದೂಡುವುದಕ್ಕೆ ಹೊರಟಿ ದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸು ತ್ತೇನೆ. ಇವತ್ತು ಯಾವುದು ಅವಶ್ಯಕವಾದಂಥ ಉದ್ಯಮವೋ ಅದನ್ನು ಬೆಳೆಸು ವುದಕ್ಕೆ ನಮಗೆ ಹೆಚ್ಚಿನ ಅವಕಾಶವಿದೆ. ರಾಷ್ಟ್ರದಲ್ಲಿ ಇವತ್ತು ಯಾವುದೇ ಯೋಜನೆ ಮಾಡಿ ವಿಧಾನಸೌಧದಿಂದ ಸಹಾಯ ಪಡೆದು ಅದರ ಒಂದು ಆಧಾರದ ಮೇಲೆ ಅದನ್ನು ಬೆಳೆಸುವ ಅವಕಾಶವಿಲ್ಲ. ಅಂತಹ ಕೈಗಾರಿಕೆಗಳನ್ನು ನಮ್ಮ ರಾಷ್ಟ್ರದಲ್ಲಿ ಬೆಳೆಸುವುದು ಆಗಿದೆ ಉದಾಹರಣೆಗೆ ಹೇಳುವುದಾದರೆ ಸಕ್ಕರೆ ಕಾರ್ಖಾನೆ ಬೆಳೆಸುವುದಕ್ಕೆ, ಸಿಮೆಂಟ್ ಕಾರ್ಖಾನೆಯನ್ನು ಬೆಳೆಸುವುದಕ್ಕೆ ಯಾವ ನೆರವೂ ಸಹ ಬೇಕಾಗಿಲ್ಲ. ನಾವೇ ಅದನ್ನು ಬೆಳೆಸಲು ಸಾಕಷ್ಟು ಶಕ್ತರಾಗಿದ್ದೇವೆ. ಹೆಚ್ಚು ಹೆಚಾಗಿ ನಾವು ಅದನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ. ಆದರೆ ನಮ್ಮ ಒಂದು ಕೈಗಾರಿಕೆಯ ನಿತ್ಯ ಮೂಲದೋಷ ಈ ರಾಜ್ಯಾಂಗದಲ್ಲಿ ಹೆಚ್ಚಿಗೆ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕಳೆದ ಬಾರಿ ಎಲ್ಲ ವಿಷಯ ಗಳ ಬಗ್ಗೆಯೂ ನಾನು ವಿವರವಾಗಿ ಪ್ರಸ್ತಾಪಮಾಡಿದ್ದೇನೆ ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಒಂದು ಉದಾಹರಣೆಯನ್ನು ಕೊಡುವುದಾದರೆ, ಕರ್ನಾಟಕದಲ್ಲಿ

ಇನ್ನೂ ನಾಲ್ಕಾರು ಸಿಮೆಂಟ್ ಫ್ಯಾಕ್ಟರಿಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ದುರ್ದೈವದಿಂದ ಇವತ್ತು ನಾವು ಒಂದು ದಿಶೆಯಲ್ಲಿಯೂ ಅವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಇವತ್ತು ಕೆಲವು ಲೈಸೆನ್ಸ್ ಕೊಟ್ಟು ಲೆಟರ್ ಆಫ್ ಇಂಟೆಂಟ್ ಕೊಟ್ಟು ಅವುಗಳ ಕೆಲಸ ನಾಲ್ಕಾರು ವರ್ಷಗಳು ಹಾಗೂ ಹತ್ತಾರು ವರ್ಷಗಳು ಸ್ಥಗಿತವಾಗಿದ್ದರೂ ಕೂಡ ಅವುಗಳನ್ನು ರದ್ದುಮಾಡಿ ಅಲ್ಲಿ ಬೇರೆಯವರು ಕೆಲಸ ಮಾಡುವುದಕ್ಕೆ ಇವತ್ತು ಮುಂದೆ ಬರುವ ಸನ್ನಿವೇಶಗಳು ಇದ್ದರೂ ಕೂಡ ಅವರುಗಳಿಗೆ ಇವತ್ತು ಲೈಸೆನ್ಸ್ ಕೊಟ್ಟು ಕೆಲಸ ಮಾಡಿ ಎಂದು ಹೇಳುವುದಕ್ಕೆ ಈ ಸರ್ಕಾರ ಇನ್ನೂ ಪ್ರಯತ್ನ ಮಾಡಲಿಲ್ಲವೆಂದು ಒಂದು ಆರೋಪಣೆಯನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಮೇಲೆ ಮಾಡ ಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ನಾಗರಹಳ್ಳಿಯಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿ ಹಾಕುವುದಕ್ಕೆ 8-10 ವರ್ಷಗಳ ಹಿಂದೆಯೇ ಪರವಾನೆಯನ್ನು ಕೊಟ್ಟಿದ್ದರು. ಅದಕ್ಕೆ ಅಲ್ಲಿ ಒಳ್ಳೆಯ ವಾತಾವರಣವಿದೆ. ಎಲ್ಲ ರೀತಿಯ ಸೌಲಭ್ಯಗಳಿವೆಯೆಂದು ನಾನು ಕೇಳಿದ್ದೇನೆ. ಸಿಮೆಂಟ್ ಫ್ಯಾಕ್ಟರಿ ಮಾಡುವು ದಕ್ಕೆ ಒಳ್ಳೆಯ ಅವಕಾಶವಿದೆಯೆಂದೂ ಸಹ ಕೇಳಿದ್ದೇನೆ. ಅವೇ ಕಡಿಮೆದರ ದಲ್ಲಿ ಇವತ್ತು ಆ ಒಂದು ಫ್ಯಾಕ್ಟರಿಯನ್ನು ಮಾಡಲು ಸಾಕಷ್ಟು ಉತ್ಪಾದನೆ ಸಿದ್ಧವಾಗಿದೆ ಅದನ್ನು ಅಲ್ಲಿ ಮಾಡುವುದಕ್ಕೆ ಎಲ್ಲ ಅನುಕೂಲತೆಗಳಿದ್ದರೂ ಅದನ್ನು ಇನ್ನೂ ಏಕೆ ಕಾರ್ಯರೂಪಕ್ಕೆ ತರಲಿಲ್ಲವೋ ಗೊತ್ತಿಲ್ಲ ಅದಕ್ಕೆ ಯಾರು ಲೆಟರ್ ಆಫ್ ಇಂಟೆಂಟ್ ತೆಗೆದುಕೊಂಡಿದ್ದರೋ ಅವರು ಮಾಡುವುದಿಲ್ಲ. ಬೇರೆ ಯವರೂ ಸಹ ಅದನ್ನು ಮಾಡುವುದಕ್ಕೆ ಇವರು ಬಿಡುವುದಿಲ್ಲ ಇದಕ್ಕೆ ಸರ ಕಾರ ಮೊಂಡುತನದಿಂದ ಕೂತಿರಬೇಕೆಂದು ನನಗೆ ಗೊತ್ತಾಗುತ್ತದೆ. ಕೈಗಾ ರಿಕೆಯ ಮಂತ್ರಿಗಳು ಸ್ಪಷ್ಟವಾದ ವಿವರಣೆಗಳನ್ನು ಇದರ ಬಗ್ಗೆ ಕೊಡಬೇಕು. ಯಾವ ಪ್ರಭಾವ ಶಕ್ತಿಯುಳ್ಳ ಜನರಾಗಿರಲಿ, ಯಾರೇ ಆಗಿರಲಿ, ಕಳೆದ 10 ವರುಷ ಗಳಿಂದ ಈ ಕೆಲಸವಾಗದೇ ಇರುವುದರಿಂದ, ಅವರ ಬಗ್ಗೆ ಕೂಡಲೇ ತನಿಖೆ ಮಾಡಿ ಇದಕ್ಕೆ ಕಾರಣಕರ್ತರು ಯಾರೆಂಬುದನ್ನು ಕಂಡುಹಿಡಿದು ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಈಗಿನ ಸನ್ನಿವೇಶದಲ್ಲಿ ನಮ್ಮ ಕೈಗಾ ರಿಕೆಗಳ ಬೆಳವಣಿಗೆ ಹೆಚ್ಚು ಆಗಬೇಕು. ರಾಜ್ಯದ ಬೆಳವಣಿಗೆಗೆ ಕೈಗಾರಿಕೆಯ ಬೆಳವಣಿಗೆಯೇ ಮೂಲ. ಅದನ್ನು ಬೆಳೆಸುವುದಕ್ಕೆ ನೀವು ಪ್ರಯತ್ನ ಮಾಡುತ್ತಿ ದ್ದೀರಾ ಎಂದು ಮೊನ್ನೆ ಪ್ರಶ್ನೆ ಹಾಕಿದಾಗ, ಅದಕ್ಕೆ ಉತ್ತರ ಶೂನ್ಯವೆಂದು ನಾನು ಹೇಳಬೇಕಾಗುತ್ತದೆ. ಕಾಳೀನದಿಯ ಪ್ರಾಜೆಕ್ಟ್ ಬಗ್ಗೆ ತನ್ನದೇ ಆದಂಥ ಒಂದು ಸಿಮೆಂಟ್ ಫ್ಯಾಕ್ಟರಿ ಮೊದಲು ಪ್ರಾರಂಭ ಮಾಡಬೇಕೆಂದು ಒಂದು ತೀರ್ಮಾನ ವನ್ನು ಈಗಾಗಲೇ ಸರ್ಕಾರದವರು ಕಾರ್ಪೊರೇಶನ್ ವತಿಯಿಂದ ಪಡೆದಿರುವ ವಿಷಯವನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಪವರ್ ಕಾರ್ಪೊರೇಷನ್‌ನಿಂದ 5 ಕೋಟಿ ರೂಪಾಯಿಗಳು, ಲೋಕೋಪಯೋಗಿ ಶಾಖೆಯಿಂದ 5 ಕೋಟಿ ರೂಪಾ ಯಿಗಳನ್ನು ಹೀಗೆ ಒಟ್ಟು 10 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಾಗರ

(ಶ್ರೀ ಹೆಚ್. ಡಿ. ದೇವೇಗೌಡ)

ಬಾವಿಯಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇನೆ. ಮುಂದೆ ಅದು ಏನಾಯಿತೋ ಗೊತ್ತಿಲ್ಲ. ಇವತ್ತು ಸರ್ಕಾರಕ್ಕೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಾರ್ಪೋರೇಷನ್ನಿಗೆ ಹಣದ ಕೊರತೆ ಇರಬಹುದೆಂದು ನನಗೆ ಗೊತ್ತಿದೆ. ಇವತ್ತು ಅಲ್ಲಿ ಸಿಮೆಂಟು ಫ್ಯಾಕ್ಟರಿ ಮಾಡಬೇಕಾದರೆ ಹತ್ತಾರು ಕೋಟಿ ರೂಪಾಯಿಗಳು ಬೇಕಾಗಬಹುದು. ಆದರೆ ಎಂದು ಪೂರ್ಣವಾಗಿ ಮಾಡುತ್ತಾರೋ ಗೊತ್ತಿಲ್ಲ. ಅಲ್ಲಿಗೆ ಇನ್ನೂ ಎಷ್ಟು ಸಿಮೆಂಟ್ ಬೇಕಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ನನಗೆ ಗೊತ್ತಿರುವ ಹಾಗೆ ಇವೆರಡರ ಇಲಾಖೆಗಳ ಬೆಳವಣಿಗೆಗಾಗಿ ಬೇಕಾದಂಥ ಸಿಮೆಂಟ್ ಉತ್ಪಾದನೆ ಮಾಡುವುದಕ್ಕೆ ನಾಗರಳ್ಳಿ ಫ್ಯಾಕ್ಟರಿಯಲ್ಲಿ ಮಾತ್ರ ಸಾಧ್ಯವಿದೆಯೆಂದು ತಜ್ಞರು ಹೇಳಿದ್ದಾರೆ. ಅದ್ದರಿಂದ ಇದು ಟೆಕ್ನಿಕಲ್ ಹಾಗೂ ಫೈನಾನ್ಸಿಯಲಿ ಎಲ್ಲಾ ಫೀಜಬಲ್ ಆಗಿ ಇರತಕ್ಕ ಒಂದು ಪ್ರಾಜೆಕ್ಟ್. ಇಂತಹ ಒಂದು ಪ್ರಾಜೆಕ್ಟನ್ನು ನೆಲದಡಿಯಲ್ಲಿ ಬಿಡುವುದು ಯೋಗ್ಯವಲ್ಲವೆಂದು ನಾನು ಹೇಳುತ್ತೇನೆ.

ಮಾನ್ಯ ಮುಖ್ಯ ಮಂತ್ರಿಗಳು ಸಕ್ಕರೆ ತಿನ್ನುವುದನ್ನು ಕಡಿಮೆ ಮಾಡಬಹುದು. ವಿದೇಶಿ ವಿನಿಮಯವನ್ನು ನಾವು ಪಡೆಯುವುದಕ್ಕೆ ಇದರ ಮುಖಾಂತರ ಅನುಕೂಲವಾಗುತ್ತದೆ ಎಂದು. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದೇಶ ಆರ್ಥಿಕವಾಗಿ ಕಷ್ಟವನ್ನು ಅನುಭವಿಸುತ್ತದೆ. ಆದರೆ ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಅವಕಾಶಗಳನ್ನು ಬೆಳಸಿಕೊಳ್ಳದೆ ಬರೀ ವಿದೇಶಿ ವಿನಿಮಯದ ಬಗ್ಗೆ ನಾವು ನೋಡುತ್ತಾ ಹೋದರೆ ನಮ್ಮ ದೇಶದ ಉತ್ಪಾದನೆಯನ್ನು ಮಾಡುವುದನ್ನು ಹೆಚ್ಚಿಸುವುದು ಬಿಟ್ಟು ಬಳಕೆಯನ್ನು ಕಡಿಮೆ ಮಾಡಬೇಕೆಂದು ಹೇಳುವುದು ಸರಿಯಲ್ಲ. ಇವೊತ್ತು ಕನ್ಸೂಮರ್ ಉತ್ಪಾದನೆ ಬಗ್ಗೆ ಹೇಳಬೇಕಾದರೆ ಸರಿಯಾದ ರೀತಿಯಲ್ಲಿ ಉತ್ಪಾದನೆಯ ಭೂಮಿಕೆಯಲ್ಲಿ ಮಾಡಬೇಕು ಅದನ್ನು ಬಿಟ್ಟು ಬೇರೆ ವಾದವನ್ನು ಮುಂದೂಡುವುದು ಸಕಾರಣವಲ್ಲ ಅನ್ನತಕ್ಕಂಥಾದ್ದನ್ನು ಪ್ರಪ್ರಥಮವಾಗಿ ಸರ್ಕಾರಕ್ಕೆ ಸೂಚನೆ ಕೊಡಲು ಇಚ್ಛೆಪಡುತ್ತೇನೆ. ಇವೊತ್ತು ಸಕ್ಕರೆ ಕಾರ್ಖಾನೆಗಳನ್ನು ನಮ್ಮ ರಾಜ್ಯದಲ್ಲಿ ಕಳೆದಸಾರಿ ನಾನು ಹೇಳಿದ್ದೇನೆ ಜೊತೆಗೆ ಅಂಕಿ ಅಂಶಗಳನ್ನು ಕೊಟ್ಟು 25 ಸಕ್ಕರೆ ಕಾರ್ಖಾನೆಗಳನ್ನು ಮಾಡುವುದಕ್ಕೆ ಕರ್ನಾಟಕದಲ್ಲಿ ಅವಕಾಶವಿದೆ. ಇವೊತ್ತು ಮಹಾರಾಷ್ಟ್ರದಲ್ಲಿ 30 ಸಕ್ಕರೆ ಕಾರ್ಖಾನೆಗಳನ್ನು ತಮಿಳು ನಾಡಿನಲ್ಲಿ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಭಾವ ಬೀರುವ ಮುಖಾಂತರ ಕೇಂದ್ರ ಸರಕಾರದಿಂದ ಪಡೆದಿದೆ. ಬಹುಶಃ ನಮ್ಮ ಕರ್ನಾಟಕದ ಬಗ್ಗೆ ಯಾಕೆ ಮಲತಾಯಿ ಮನೋಭಾವನೆ ತಳೆದಿದೆ ಎಂದು ಗೊತ್ತಾಗಲಿಲ್ಲ. ನಮ್ಮ

ಕರ್ನಾಟಕದಲ್ಲಿ ಇನ್ನು 5 ಕಾರ್ಖಾನೆಗಳನ್ನು ಇವೊತ್ತು ಮಾಡುವುದು ದುರ್ಲಭವಾಗಿದೆಯೆಂದು ಹೇಳಬೇಕಾಗುತ್ತದೆ. ಕಳೆದ ಸಾರಿ ಈ ಸಭೆಯಲ್ಲಿ ಮಾನ್ಯ ಕೈಗಾರಿಕೆ ಸಚಿವರು ಶುಗರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದ್ದರು. ಇವೊತ್ತು ಅದರ ಬಗ್ಗೆ ಚಕಾರ ಶಬ್ದವಿಲ್ಲ. ಮನಸ್ಸಿಗೆ ಬಂದಂತೆ ಮಾಡಿದ್ದಾರೆ. ಬರೀ ಇವರ ಅನುಯಾಯಿಗಳಿಗೆ ಸ್ಥಾನಮಾನಗಳನ್ನು ಕಲ್ಪಿಸಿಕೊಡುವುದಕ್ಕೆ ಮಾಡುತ್ತಿದ್ದಾರೆ. ರಾಜ್ಯದ ಅಭ್ಯುದಯಕ್ಕೆ ವಿರೋಧ ಪಕ್ಷದವರಿಂದ ಏನಾದರೂ ಸಲಹೆಗಳನ್ನು ಒಪ್ಪಿಕೊಂಡರೂ ಮುಂದುವರಿಸತಕ್ಕಂಥದ್ದರಲ್ಲಿ ಅನಾದರಣೀಯವಾದ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ಮತ್ತೊಂದು ವಿಷಯ ಶುಗರ್ ಇಂಡಸ್ಟ್ರೀಸ್ ನ್ಯಾಷನಲೈಸ್ ಮಾಡುತ್ತೇವೆಂದು ಹೇಳಿದರು. ಇದರ ಬಗ್ಗೆ ಅದು ಮರೆತು ಹೋದಂತಹ ವಿಷಯವಾಗಿದೆ. ನಮ್ಮಲ್ಲಿ ಎಲ್ಲಾ ಸೌಕರ್ಯಗಳು ಇದ್ದಾಗ್ಯೂ ಆದರಲ್ಲಿ ರಾಜಕೀಯ ಬಂದುಬಿಡುತ್ತದೆ. ಸರ್ಕಾರ ಹೀಗೆ ಜನತೆ ಮುಂದೆ ಹೇಳತಕ್ಕಂಥಾದ್ದು ಒಂದು ಅವರು ಮಾಡತಕ್ಕಂಥಾದ್ದು ಒಂದು. 1969 ರಲ್ಲಿ ಅದನ್ನು ಹೇಳಿ ಈಗ ಇದು ಈಗಾಗಲೇ ಜನತೆಯಿಂದ ಮುಂದಕ್ಕೆ ಸರಿದಿದೆ. ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ಮಂಡ್ಯ ನ್ಯಾಷನಲ್ ಪೇಪರ್‌ಮಿಲ್ಸ್ ಏನು ಇದೆ ಅಲ್ಲಿ, ಹೆಚ್ಚು ಉತ್ಪಾದನೆ ಮಾಡತಕ್ಕಂಥಾದ್ದಕ್ಕೆ ಸರ್ಕಾರ ಸರಿಯಾದ ರೀತಿಯಲ್ಲಿ ಆಸಕ್ತಿ ವಹಿಸುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಇದರಲ್ಲಿ ಮಾನ್ಯ ಒಬ್ಬ ಸದಸ್ಯರು ಇದ್ದಾರೆ. ಖಾಸಗಿಯವರು ನಂಜನಗೂಡಿನಲ್ಲಿ ಒಂದು ಕಾರ್ಖಾನೆಯನ್ನು ಮಾಡಲು ಹೊರಟಿದ್ದಾರೆ. ನಾನು ಕೇಳುತ್ತೇನೆ ಈ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್‌ಗೆ ಆಧುನಿಕವಾದ ಕಚ್ಚಾ ಪದಾರ್ಥಗಳನ್ನು ಒದಗಿಸುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ತಿಳಿಸಬೇಕೆಂದು ಕೇಳುತ್ತೇನೆ. ಖಾಸಗಿಯವರ ಮುಖಾಂತರ ಖಾಸಗಿ ಉದ್ಯಮಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಮುಂಚೆ ನಮ್ಮ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಬಹಳ ಲಾಭದಾಯಕವಾಗಿ ಹೆಚ್ಚು ಉತ್ಪಾದನೆ ಕೆಲಸ ಮಾಡತಕ್ಕಂಥಾದ್ದಕ್ಕೆ ಸರ್ಕಾರದ ಹೊಣೆ. ಅದನ್ನು ಅರಿತು ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇನ್ನು ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ತಾವು ಏನು ಘೋಷಣೆ ಮಾಡಿದ್ದು ಇನ್ನು 10 ವರ್ಷಗಳಾದರೂ ಅದನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲ. ಕಾರಣವಾದರೂ ಇಷ್ಟೆ ಹೀಗೆ ಏನು ನಡೆಯುತ್ತಿದೆ ಈ ಒಂದು ವೇಗದಲ್ಲಿ ಮುಂದುವರಿದರೆ ನಮ್ಮ ಕಾಲದಲ್ಲಿ ಇದನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ವರ್ಷಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡುತಾ ಹೋದರೆ ಇದು ಸಾಧ್ಯವಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಕೇವಲ ರಾಜಕೀಯದ ಒಂದು ಜಾಲದ ಮಾತೇ ಪರಂತು ಬೇರೆ ಏನು ಇಲ್ಲವೆಂದು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಅದಕ್ಕೆ ಬದಲಾಗಿ ಇವೊತ್ತು ನಮ್ಮ 6ನೇ

(ಶ್ರೀ ಹೆಚ್. ಡಿ. ದೇವೇಗೌಡ)

ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರದ ಸ್ಟೀಲ್ ಪ್ಲಾಂಟ್ ನಾವು ಕಾಣುತ್ತೇವೆಂದು ತಾವು ಏನು ಆಶೆ ತೋರಿಸುತ್ತಿದ್ದೀರಿ ಅದು ಬರೀ ಆಶೆಯಾಗಿಯೇ ಉಳಿಯುತ್ತದೆ. ಇದರ ಬಗ್ಗೆ ತಜ್ಞರು ಅಭಿಪ್ರಾಯ ಪಡುತ್ತಾರೆ 15-20 ಕೋಟಿ ರೂಪಾಯಿಗಳು ಖರ್ಚು ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡಿ ಇದರ ಬಗ್ಗೆ ಇವೊತ್ತು ಈ ಒಂದು ದಿಶೆಯಲ್ಲಿ ಕೆಲಸ ಮಾಡತಕ್ಕಂಥಾದ್ದು ಸೂಕ್ತ ಎಂದು ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಇನ್ನು ಮಂಗಳೂರು ಫರ್ಟಿಲೈಸರ್ ನಾನು ಆಪಾದನೆ ಮಾಡಿದ್ದೇನೆ. ಕಳೆದಸಾರಿ ಶ್ರೀಮಾನ್ ಕೃಷ್ಣಾರವರು ಬಹಳ ಶಕ್ತಿಯುತವಾದಂತ ದೃಷ್ಟಿಯಿಂದ ಪ್ರತಿಪಾದನೆ ಮಾಡಿದರು ಅವರಿಗೆ ನಾನು ಒಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಕೃಷ್ಣಾರವರಿಗೆ ಮಂಗಳೂರು ಫರ್ಟಿಲೈಸರ್ ಮತ್ತು ಕೆಮಿಕಲ್ಸ್ ಫ್ಯಾಕ್ಟರಿ ಏನು ಇದೆ ಅದು ಎಲ್ಲಿ ಹೋಗಿ ನಿಲ್ಲುತ್ತದೆ ಗೊತ್ತಾಗುವುದಿಲ್ಲ. ಅದೇ ಗುಜರಾತ್ ಮತು ಮದ್ರಾಸ್‌ನಲ್ಲಿ ಫರ್ಟಿಲೈಸರ್ ಫ್ಯಾಕ್ಟರಿ ಏನು ಇದೆ ಅದು ಎಷ್ಟು ಉತ್ಪಾದನೆಯನ್ನು ಮಾಡುತ್ತಿದೆ ಅದಕ್ಕೆ ಎಷ್ಟು ವೆಚ್ಚ ಮಾಡಿದ್ದಾರೆಂದು ಪರಿಶೀಲನೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ ಮತ್ತು ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವೆಲ್ಲದರ ಬಗ್ಗೆ ಒಂದು ಹೈಪವರ್ ಕಮಿಟಿ ಮಾಡಿ ಏನು ಅವ್ಯವಹಾರಗಳು ನಡೆದಿವೆ ಎನ್ನುವ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಈ ವಿಷಯದಲ್ಲಿ ಯಾರಿಗೂ ಜಿಜ್ಞಾಸೆ ಬೇಡ. ಸುಮಾರು 54 ಕೋಟಿ ರೂಪಾಯಿ ಒಂದು ಯೋಜನೆಗೆ ಈಗ ಅದು 60 ಕೋಟಿ ರೂಪಾಯಿಗೆ ಬಂದು ತಿರುಗಿ ಪುನರ್‌ವಿಮರ್ಶಿತ ಅಂದಾಜು ಮುಂದೆ 80 ಕೋಟಿ ರೂಪಾಯಿ ಆಗಬಹುದು ಎಂದು ನಾನು ಕೇಳಿದ್ದೇನೆ. ಒಂದೇ ಒಂದು ಐಟಮ್‌ನಲ್ಲಿ ಅಂದರೆ ಡ್ರೆಡ್ಜಿಂಗ್‌ನಲ್ಲಿ 2 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆಯೆಂದು ನನ್ನ ದೃಷ್ಟಿಗೆ ಬಂದಿದೆ ಏನು ಒಂದು ಭೂಮಿಯನ್ನು ಲೋ ಲೆಯಿಂಗ್ ಮಾಡತಕ್ಕಂಥಾದ್ದಕ್ಕೆ 2 ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಈ ಒಂದು ಪ್ರಕರಣದಲ್ಲಿ ಇಷ್ಟು ಹಣ ಅಪವ್ಯಯ ಮಾಡಿದ್ದಾರೆಂದು ಕೇಳಿದ್ದೇನೆ ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಇದು ಒಂದು ದೊಡ್ಡ ಕರ್ಮಕಾಂಡ ಇದಕ್ಕೆ ಲಂಗು ಲಗಾಮು ಇಲ್ಲ. ಅಲ್ಲಿನ ಪದಾಧಿಕಾರಿಗಳು ಏನು ಕೆಲಸ ಮಾಡುತಿದ್ದಾರೆ ಅದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದೇನೆ. ಇದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋದರೆ ಈ ಎಲ್ಲಾ ವಿಷಯಗಳನ್ನು ಹೇಳಬೇಕಾಗುತ್ತದೆ ಆದರೆ ಕಾಲಾವಕಾಶವಿಲ್ಲದ್ದರಿಂದ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ.

ಒಂದು ವರ್ಷದಲ್ಲಿ 295 ದಿವಸ ಹೊರಗಡೆ ಪ್ರವಾಸ. ಒಂದು ತಿಂಗಳಿಗೆ 8 ಸಾವಿರ ರೂಪಾಯಿ ಬರೀ ಟಿ. ಎ. ಮತ್ತು ಡಿ. ಎ. ಸಿಗುತ್ತದೆ ಮತ್ತು ಜಿಲ್ಲೆಯಲ್ಲಿ ಕಾರು ಮತ್ತು ಸರ್ಕಾರಿ ಬಂಗಲೆ. ಸೌಲಭ್ಯಗಳು ಅವರಿಗೆ ಸಿಗುತ್ತವೆ ಈ ಬಗ್ಗೆ ಎಲ್ಲಾ ವಿವರಗಳನ್ನೂ ಕೊಟ್ಟು ಮಾತನಾಡುವುದಕ್ಕೆ ಹೆಚ್ಚು ಕಾಲ ಇಲ್ಲವಾದ್ದರಿಂದ ನಾನು ಒಂದೇ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಅದೇನೆಂದರೆ ಅಲ್ಲಿ ನಡೆದಿರತಕ್ಕಂಥಾ ಎಲ್ಲಾ ವ್ಯವಹಾರಗಳನ್ನೂ ಕೂಡ ಪರಿಶೀಲನೆ ಮಾಡುವುದಕ್ಕೆ ಒಂದು ಹೈಪವರ್ ಕಮಿಟಿ ಮಾಡಿ. ಇದನ್ನು ಪತ್ತೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡದೇ ಹೋದರೆ ಸರ್ಕಾರ ಇದಕ್ಕೆ ಪರೋಕ್ಷವಾಗಿ ಬೆಂಬಲ ಕೊಡುತ್ತಾರೆ ಎನ್ನುವುದನ್ನು ತಿಳಿಯಬೇಕಾಗುತ್ತದೆ ಅಲ್ಲದೇ ಈ ಆಪಾದನೆಗೆ ಸರ್ಕಾರವೇ ಗುರಿಯಾಗಬೇಕಾಗುತ್ತದೆ ಎನ್ನುವ ಒಂದು ಎಚ್ಚರಿಕೆಯ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಡ್ರೆಡ್ಜಿಂಗ್ ಒಂದು ವ್ಯವಹಾರದಲ್ಲೇ 2 ಕೋಟಿ ರೂಪಾಯಿ ದುರ್ವ್ಯವಹಾರ ನಡೆದಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಎಚ್ಚರಿಕೆ ವಹಿಸಿ ಈ ಬಗ್ಗೆ ಒಂದು ಹೈಪವರ್ ಕಮಿಟಿ ಮಾಡಬೇಕು ಎಂದು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಇದು ಬಹಳ ಗಹನವಾದ ಇಲಾಖೆ. ಈ ಬಗೆ ಕಳೆದ ಸಾರಿ ಒತ್ತಡ ತಂದಿದ್ದರೂ ಮತ್ತೆ ಅದರ ಬಗ್ಗೆ ಕೆಲವು ವಿಷಯಗಳನ್ನು ಹೇಳದೇ ಗತ್ಯಂತರವಿಲ್ಲ. ಅದಕ್ಕಾಗಿ ತಮ್ಮ ಅನುಮತಿಯನ್ನು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಸಭೆಯಲ್ಲಿದ್ದಾರೆ. ಅಲ್ಲದೆ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಈ ಸಭೆಯಲ್ಲಿರುವುದರಿಂದ ಅವರ ಗಮನಕ್ಕೂ ಈ ಒಂದು ವಿಷಯವನ್ನು ತರಲಿಕ್ಕೆ ಇಚ್ಛಿಪಡುತ್ತೇನೆ. ಹಿಂದೂಸ್ತಾನ್ ಟೈಮ್ಸ್ ಎನ್ನುವ ಒಂದು ಪತ್ರಿಕೆಯಲ್ಲಿ ಬಂದಿರುವುದನ್ನು ಓದುತ್ತೇನೆ ಅದು ಈ ರೀತಿ ಇದೆ :—
"Cement Black-marketing for Rs. 12 crores - unaccounted money last year. - Nearly Rs. 38 Crores loss according to the Study conducted by the Indian Institute of Management, Bangalore." ಈಗ ಕೈಗಾರಿಕಾ ಮಂತ್ರಿಗಳ ಮೇಲೆ ಒಂದು ಆಪಾದನೆ ಇದೆ. ಅದನ್ನು ಶ್ರೀಮಾನ್ ಬಂಗಾರಪ್ಪನವರು ಹೇಳಿದರು. ಈವೊತ್ತು ಮೈಸೂರು ಪೇಪರ್ ಮಿಲ್ಸ್‌ನ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಅದಕ್ಕೆ ಈವೊತ್ತಿನವರೆಗೂ ಉತ್ತರ ಇಲ್ಲ. ಆ ಮಿಲ್‌ನಲ್ಲಿ ಎಷ್ಟು ಪ್ರೊಡಕ್ಷನ್ ಆಗುತ್ತದೆ, ಹೇಗೆ ವಿತರಣೆ ಮಾಡುತ್ತಾರೆ, ಅದರಲ್ಲಿ ಸಬ್ ಡೀಲರ್ಸ್ ಮತ್ತು ಡೀಲರ್ಸ್ ಯಾರು ಇದ್ದಾರೆ ಅದರ ಬಗ್ಗೆ ವಿವರಣೆ ಕೊಡಿ ಎಂದು ಕೇಳಿದ್ದೇನೆ. ಸರ್ಕಾರದವರು

(ಶ್ರೀ ಹೆಚ್. ಡಿ. ದೇವೇಗೌಡ)

ಇನ್ನೂ ಅದರ ಬಗ್ಗೆ ವಿವರಣೆ ಕೊಟ್ಟಿಲ್ಲ. ನಾನು ಒಂದು ಮಾತು ಹೇಳುತ್ತೇನೆ. ಇದು ಯಾವುದೇ ಸರ್ಕಾರಕ್ಕೂ ಗೌರವ ತರತಕ್ಕಂಥಾದ್ದಲ್ಲ. ಬಹುಶಃ ಸರ್ಕಾರ ಗೌರವವನ್ನು ಉಳಿಸಿಕೊಳ್ಳಬೇಕಾದರೆ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಅದಕ್ಕೆ ತಕ್ಕಂತೆ ಗೌರವವನ್ನು ಉಳಿಸಿಕೊಳ್ಳಬೇಕು. ಈವೊತ್ತು ಆ ಒಂದು ಸನ್ನಿವೇಶ ರಾಜ್ಯದಲ್ಲಿ ಇಲ್ಲ. ಹೇಗೆಂದರೆ ಒಂದು ಸಾಮಾನ್ಯ ಎಕ್ಸ್‌ರ್‌ಸೈಜ್ ಬುಕ್ ಹಿಂದೆ 4 ಆಣೆ 8 ಆಣೆ ಇದ್ದುದು 2-2½ ರೂಪಾಯಿಗೆ ಈವೊತ್ತು ಮಾರಾಟ ಮಾಡುವ ಕಾಲ ಬಂದಿದೆ. ಒಂದು ಟನ್ 2500 ರೂಪಾಯಿ ಇದ್ದುದು ಇಂದು 9500 ರೂಪಾಯಿಗೆ ಡೀಲರ್ಸ್ ಮಾರಾಟ ಮಾಡುತ್ತಿದ್ದಾರೆ. ಮತ್ತು ನಾನ್ ಡೀಲರ್ಸ್ ಕೂಡ ಈ ಭದ್ರಾವತಿ ಪೇಪರ್ ಮಿಲ್‌ನ ಪುಸ್ತಕವನ್ನು ಮಾರಾಟ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಇದು ಯಾರಿಗೂ ಗೌರವ ತರತಕ್ಕಂಥಾದ್ದಲ್ಲ ಎಂದು ಹೇಳುತ್ತೇನೆ. ಆದುದರಿಂದ ಇದರ ಬಗ್ಗೆ ಪೂರ್ಣ ವಿವರ ಈ ಸಭೆಯ ಮುಂದೆ ಇಡಬೇಕು ಎಂದು ಹೇಳುತ್ತೇನೆ ಅದಕ್ಕೆ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಹಿಂತೆಗದರೆ ಅದಕ್ಕೆ ಅವರೇ ಜವಾಬ್ದಾರರಾಗಬೇಕಾಗುತ್ತದೆ. ಇದು ಒಂದು ಪ್ರೈವೇಟ್ ಲಿಮಿಟೆಡ್ ಕಂಪೆನಿ ಅಂತ ಒಂದು ವಾದ ಮುಂದೊಡ್ಡಿದರೆ ಈವೊತ್ತು Chairman and other officers have been appointed by Government. They are the Government officers. They are the subordinates to Government. They are mainly responsible for this. They are the real culprits. ಈವೊತ್ತು ಎಂ, ಎಲ್. ಎ. ಮಕ್ಕಳಾಗಲಿ ಅಥವಾ ಪಾರ್ಲಿಮೆಂಟ್ ಮೆಂಬರ್ ಸಂಬಂಧಿಕರಾಗಲಿ ಇದರಲ್ಲಿ ವಸೂಲಿಬಾಜಿ ಕೆಲಸಮಾಡಿದ್ದರೆ ಅವರು ತಮ್ಮ ತಪ್ಪನು ಈ ಅಕ್ಷಮ್ಯ ಅಪರಾಧವನ್ನು ಒಪ್ಪಿಕೊಳ್ಳಬೇಕು. ಒಬ್ಬೊಬ್ಬರಿಗೆ 50 ಟನ್ 80 ಟನ್ 100 ಟನ್ ಕೊಟ್ಟು ಲಕ್ಷಾಂತರ ರೂಪಾಯಿ ಹಣ ಗಳಿಸಿಕೊಂಡಂಥ ಜನ ಇದ್ದಾರೆ. ಇದನ್ನು ಜನ ಕೇಳುತ್ತಿದ್ದಾರೆ. ಇದಕ್ಕಿಂತ ಹೇಯವಾದದ್ದು ಮತ್ತೊಂದು ಇಲ್ಲ. ಈವೊತ್ತು ಸಿಮೆಂಟ್ ವ್ಯವಹಾರದಲ್ಲಿ ನೋಡಿದರೆ ಕೋಟ್ಯಾಂತರ ರೂಪಾಯಿ ದುರ್ವ್ಯವಹಾರ ನಡೆದಿದೆ. ಅದುದರಿಂದ ಈ ಸಭೆ ಆ ಬಗ್ಗೆ ಒಂದು ಸಮಿತಿ ನೇಮಕ ಮಾಡಿ ಅದರ ಬಗ್ಗೆ ಕೂಲಂಕಷವಾಗಿ ತನಿಖೆ ಆಗಬೇಕು ಎಂದು ಹೇಳುತ್ತೇನೆ. ಇದಕ್ಕೆ ಸರ್ಕಾರ ಹಿಂದುಮುಂದು ನೋಡಬಾರದು ಸರ್ಕಾರ ತನ್ನ ಗೌರವವನ್ನು ಉಳಿಸಿ ಕೊಳ್ಳಬೇಕಾದರೆ, ಕೀರ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಇದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೇಲ್ಸ್ ಇಂಟರ್‌ನ್ಯಾಷನಲ್ ವಿಷಯದ ಬಗ್ಗೆ ಕಳೆದ ಸಾರಿ ಮಾನ್ಯ ಕೃಷ್ಣ ಅವರು ಪ್ರಸ್ತಾಪ ಮಾಡಿದಾಗ ಅವರು ಇದನ್ನು ಸಮರ್ಥನೆ ಮಾಡಿದರು.

ನಾನು ಈ ಬಗ್ಗೆ ಒಂದು ಮಾತು ಹೇಳುತ್ತೇನೆ. ಈ ಸೇಲ್ಸ್ ಇಂಟರ್‌ನ್ಯಾಷನಲ್‌ಗೆ ಹೂಡಿರತಕ್ಕಂಥ ಬಂಡವಾಳ ಯಾರು ಮನೆಯ ಸ್ವತ್ತೂ ಅಲ್ಲ ಕೆಲವು ಸಂಸ್ಥೆಗಳು ಇವರಿಗೇನೇ ಹದ್ದು ಬಸ್ಕಿಲ್ಲಿಲ್ಲ ಈ ಬಗ್ಗೆ ಸರ್ಕಾರದ ಹಣವನ್ನು ಇಲ್ಲಸಲ್ಲದೇ ಇರುವ ರೀತಿಯಲ್ಲಿ ವೆಚ್ಚಮಾಡುತ್ತಿದ್ದಾರೆ. ಆದುದರಿಂದ ಇನ್ನು ಮುಂದಾದರೂ ಇದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಅವಕಾಶ ಕೊಡಬಾರದು. ಮುಖ್ಯಮಂತ್ರಿಗಳು ಇದನ್ನು ಒಪ್ಪಬೇಕು. ಅವರು ಅಭಿವೃದ್ಧಿ ಕಾರ್ಯಗಳ ಬಗ್ಗೆ ವೆಚ್ಚ ಮಾಡಬೇಕಾದರೆ ಹಣ ಇಲ್ಲ ಎಂದು ಹೇಳುತ್ತಾರೆ. ಮತ್ತು ತೆರಿಗೆಗಳನ್ನು ಹಾಕುವುದಕ್ಕೆ ನಮ್ಮ ಸಹಕಾರ ಬೇಕು ಎಂದು ಕೇಳುತ್ತಾರೆ. ಆದುದರಿಂದ ನಾನು ಮುಖ್ಯಮಂತ್ರಿಗಳನ್ನು ಕೇಳುತ್ತೇನೆ ಈ ಸೇಲ್ಸ್ ಇಂಟರ್‌ನ್ಯಾಷನಲ್‌ಗೆ 60 ಲಕ್ಷ ರೂಪಾಯಿ ಏನು ಬಡ್ಜೆಟ್ ಕೊಟ್ಟಿತ್ತೋ ಅದರಲ್ಲಿ ಸುಮಾರು 8 ಲಕ್ಷ ರೂಪಾಯಿಯಷ್ಟು ಹಣವನ್ನು ಅಧಿಕಾರಿಗಳು ಡೆಕೋರೇಷನ್‌ಗೆ ಖರ್ಚು ಮಾಡಿದ್ದಾರೆ. ಇದು ಯಾರ ಮನೆ ಗಂಟು. ಒಂದು ಸ್ಕೂಲ್ ಕಟ್ಟಡವನ್ನು ಕಟ್ಟುವುದಕ್ಕೆ 2500 ರೂಪಾಯಿ ಕೊಡುವುದಕ್ಕೆ ಯೋಗ್ಯತೆ ಇಲ್ಲ. ಅಂಥಾದ್ದರಲ್ಲಿ ಈ ಅಧಿಕಾರಿಗಳು ಅವರು ಕೂತುಕೊಳ್ಳುವ ಕೊಠಡಿಗಳನ್ನು ಸುಂದರವನ್ನಾಗಿ ಮಾಡಿಕೊಳ್ಳುವುದಕ್ಕೆ ಇದು ಯಾರ ಹಣ ? ಶ್ರೀಮತಿ ವಿಮಲಾ ರಂಗಚಾರ್ ಅವರು ಸಹ ಅವರ ಏಜಂಟರಾಗಿ ಸಹ ಕೆಲಸ ಮಾಡಿದ್ದಾರೆ. ಇದು ಸರ್ಕಾರಕ್ಕೆ ಗೌರವ ತರತಕ್ಕಂಥಾದ್ದೇ ? ಮತ್ತು ಇದು ಸರ್ಕಾರಕ್ಕೆ ಭೂಷಣ ತರತಕ್ಕಂಥಾದ್ದೆ ? ಇದನ್ನು ಕೂಲಂಕುಷವಾಗಿ ವಿಚಾರ ಮಾಡಬೇಕು; ಇದರ ಬಗ್ಗೆ ನನ್ನಲ್ಲಿ ಸಾಕಷ್ಟು ವಿಷಯಗಳನ್ನು ಸಂಗ್ರಹಮಾಡಿಟ್ಟುಕೊಂಡಿದ್ದೇನೆ. ಆದರೆ ನನಗೆ ದೇಹದ ಪ್ರಕೃತಿ ಸರಿಯಿಲ್ಲದೇ ಇರುವುದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಮಾನ್ಯ ಕೃಷ್ಣ ಅವರು ಸ್ಯಾಂಡಲ್ ಸೋಪ್ ಮಾರಾಟದ ಬಗ್ಗೆ ಅವರಿಗೆ 5 ಪರ್ಸೆಂಟ್ ಮಾತ್ರ ಕಮೀಷನ್ ಹೋಗುತ್ತದೆ ಎನ್ನುವುದನ್ನು ಹೇಳಿದರು. ನನ್ನ ಹತ್ತಿರವೂ ಅದರ ವಿವರಣೆ ಇದೆ. 5 ಪರ್ಸೆಂಟ್ ಅಲೋಡ್ ಬೈ ದಿ ಫ್ಯಾಕ್ಟರಿ, ಅಡ್ವಟೈಸ್‌ಮೆಂಟ್ ಛಾರ್ಜಸ್ 2 ಪರ್ಸೆಂಟ್, ಫ್ರೈಟ್ ಛಾರ್ಜಸ್ 6 ಪರ್ಸೆಂಟ್ ಡಿಸ್ಟ್ರಿಬ್ಯೂಷನ್ ಛಾರ್ಜಸ್ 3 ಪರ್ಸೆಂಟ್, ಸ್ಟಾಕ್ ಕಮೀಷನ್ 3 ಪರ್ಸೆಂಟ್ ಈ ರೀತಿಯಾಗಿ ಒಟ್ಟು 19 ಪರ್ಸೆಂಟ್ ಬೀಳುತ್ತದೆ. ಮೊದಲು ಫ್ಯಾಕ್ಟರಿಯವರು 5 ಪರ್ಸೆಂಟ್ ಕಮೀಷನ್ ಇಟ್ಟುಕೊಂಡು ಸೇಲ್ಸ್ ಮಾಡುತ್ತಿದ್ದರು. ಈಗ ಒಂದು ಕೇಕ್‌ಗೆ 2-10 ಪೈಸೇ ಮಾರಾಟ ಮಾಡುತ್ತಿದ್ದಾರೆ. ಈವೊತ್ತು ಕೆಲವು ಬಂಡವಾಳಶಾಹಿಗಳನ್ನು ತೆಗೆಯಬೇಕು ಎನ್ನುವುದನ್ನು ಒಪ್ಪಿಕೊಳ್ಳಬೇಕು. ಏತಕ್ಕೆಂದರೆ ನಿಮ್ಮದೇ ಆದಂಥ ಸಂಸ್ಥೆಗೆ ಹೆಚ್ಚು ಭಾರ ಬೀಳತಕ್ಕಂಥಾದ್ದು ಸರಿಯಲ್ಲ. ಇದರಿಂದ ಏನಾಗುತ್ತದೆ ಎಂದರೆ ಆ ಕನ್‌ಸ್ಯೂಮರ್ ತನ್ನ ಕಮೀಷನ್ ಸೇರಿಸಿ ಮಾರಾಟ ಮಾಡುವುದರಿಂದ ಬಳಕೆದಾರರಿಗೆ ಕಷ್ಟವಾಗುತ್ತದೆ. ಸರ್ಕಾರ ಇದನ್ನು

(ಶ್ರೀ ಹೆಚ್. ಡಿ. ದೇವೇಗೌಡ)

ಯೋಚನೆ ಮಾಡಬೇಕು. ಇದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯುವರು ಇದರ ಪೂರ್ಣ ಮಾಹಿತಿಯನ್ನು ತರಿಸಿ ಈ ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಈ ಅಡ್ವೈರ್ಟೈಸ್‌ಮೆಂಟ್ ಒಂದಕ್ಕೇನೇ 12 ಲಕ್ಷ ರೂಪಾಯಿ ಖರ್ಚುಮಾಡಿದ್ದಾರೆ. ಹೇಗೆ ಖರ್ಚಾಗಿದೆ ಎಂದರೆ ಸಮಾಜವಾದ ಎಂದು ಹೇಳತಕ್ಕಂಥಾವರು ಸಮಾಜವಾದದ ಹೆಸರಿನಲ್ಲಿ ಹಗಲು ವೇಳೆ ಇಲ್ಲ ರಾತ್ರಿ ಹೊತ್ತು ಅಶೋಕ್ ಹೋಟೆಲ್‌ನಲ್ಲಿ ಖರ್ಚು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಹೇಳುತ್ತೇನೆ ಇನ್ನು ಎರಡು ವರ್ಷವಾದರೂ ಒಳ್ಳೆಯ ಆಡಳಿತ ನಡೆಸಿ ಎಂದು ಹೇಳುತ್ತೇನೆ. ಆದರೆ ಒಬ್ಬ ಮನುಷ್ಯ ಒಂದು ಸಾರಿ ಎಡವಿದರೆ ಮತ್ತೊಂದು ಸಾರಿ ಅವನು ತಿದ್ದಿಕೊಳ್ಳುವುದಕ್ಕೆ ಸಾಧ್ಯ ಇದೆ. ಅದರಂತೆ ಇನ್ನು ಮುಂದಾದರೂ ಒಳ್ಳೆಯ ಆಡಳಿತ ಮಾಡಿ ಎಂದು ಈವೊತ್ತೂ ಕೂಡ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಆದರೆ ಇವತ್ತು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಘನತೆಯಿಂದ ನಡೆದುಕೊಳ್ಳದೇ ಹೋದರೆ, ಇನ್ನಾದರೂ ಅವರ ತಪ್ಪುಗಳನ್ನು ತಿದ್ದಿಕೊಳ್ಳದಿದ್ದರೆ, ಅವರು ಒಂದು ಪ್ರತಿಷ್ಟೆತೆಗೆ ಒಳಗಾದರೆ ಅವರಿಗೆ ದೊಡ್ಡ ಕಳಂಕ ಬರುತ್ತದೆ ಎನ್ನತಕ್ಕಂಥದ್ದನ್ನು ಅವರು ಅರ್ಥ ಮಾಡಿಕೊಳ್ಳದೇ ಹೋದರೆ ಅವರಿಗೆ ಜೀವನದಲ್ಲಿ ಒಂದಂಥ ಅವಕಾಶವನ್ನು ಅವರು ಉಪಯೋಗಿಸಿಕೊಳ್ಳದಿದ್ದರೆ, ನಿರ್ಣಾಮವಾಗುವುದಕ್ಕೆ ಇದು ಒಂದು ಅಭಿಪ್ರಾಯವಾಗುತ್ತದೆಂಬುದನ್ನು ನಾನು ನೊಂದ ಹೃದಯದಿಂದ ಹೇಳಬೇಕಾಗುತ್ತದೆ. ಮಾನ್ಯ ಸಭಾಪತಿಗಳೇ, ಫಿನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್ ಏನಿದೆ, ಇವತ್ತು ಕರ್ನಾಟಕ ಸ್ಮಾಲ್‌ಸ್ಕೇಲ್ ಕಾರ್ಪೋರೇಷನ್ ಕೈಗಾರಿಕಾ ಬೆಳವಣಿಗೆಗೆ ಕೊಡತಕ್ಕಂಥ ಒಂದು ವಿವೇಕ, ವಿವೇಚನೆ ಮತ್ತು ಎಷ್ಟರಮಟ್ಟಿಗೆ ತಿಳುವಳಿಕೆಯನ್ನು ಜನತೆಗೆ ಒದಗಿಸುತ್ತಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಶ್ರೀಮತಿ ಸುಮತಿ ಮಡಿಮನ್‌ರವರು ಹೇಳಿದರು ಇವತ್ತು ಹೊಸಬರು ಕೈಗಾರಿಕೆಯನ್ನು ಉತ್ತಮ ಪಡಿಸಬೇಕೆಂದು ಎಂದು ಮುಂದೆ ಬಂದರೆ ಅವರಿಗೆ ಸಾಕಷ್ಟು ವಿವರಣೆಗಳನ್ನು ಕೊಡಲು ಹಾಗೂ ಹೇಗೆ ಮಾಡಬೇಕು ಎಂಬ ತಕ್ಕಂಥದ್ದಕ್ಕೆ ಮಾರ್ಗವನ್ನು ತೋರಿಸಲಿಕ್ಕೆ ನಮ್ಮಲ್ಲಿ ಸಾಕಷ್ಟು ಮಾಹಿತಿ ಇಲ್ಲ. ತಮಗೆ ಒಂದು ಮಾತನ್ನು ತಿಳಿಸುತ್ತೇನೆ. ಇವತ್ತು ಮಾನ್ಯ ಕೃಷ್ಣರವರು ಮಾನ್ಯ ಚಿಕ್ಕೇಗೌಡರವರು ಹಾಸನ ಜಿಲ್ಲೆಯಲ್ಲಿ ಒಂದು ಗುಡಸಾರಿ ಶುಗರ್ ಫ್ಯಾಕ್ಟರಿಗೆ ಹೋಗಿದ್ದಂಥ ಕಾಲದಲ್ಲಿ ಮಂತ್ರಿಗಳು ತಮ್ಮ ಅಧಿಕಾರಿಗಳನ್ನು ತೊಡಗಿಸಿ ಇವತ್ತು ಕರ್ನಾಟಕ ಫಿನಾನ್ಸ್ ಕಾರ್ಪೋರೇಷನ್‌ನಿಂದ ಹಣವನ್ನು ಕೊಡಿಸತಕ್ಕಂಥದ್ದಕ್ಕೆ ನಮಗ ಯೋಗ್ಯತೆ ಇಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿಕೊಂಡಿದ್ದಾರೆ.

ನಾನು ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ ; ಇವತ್ತು ನಮ್ಮ ರಾಜ್ಯದಲ್ಲಿ ಮಂತ್ರಿಗಳಿಗೆ ಆಡಳಿತವನ್ನು ನಡೆಸತಕ್ಕಂಥದ್ದಕ್ಕೆ ಯೋಗ್ಯತೆ ಇದೆಯೋ ಇಲ್ಲವೋ ಅಥವಾ ಅಧಿಕಾರಿಗಳ ಒಂದು ಹಿಡಿತದಲ್ಲಿ ಸಿಕ್ಕಿ ತೊಳಲಾಡತಕ್ಕಂಥ ಪರಿಸ್ಥಿತಿಗೆ ಕಾರಣವಾದರೂ ಏನು ಎಂಬುದನ್ನು ದಯಪಿಟ್ಟು ತಾವು ಈ ಸಭೆಗೆ ತ್ರಿಳಿಸಬೇಕು. ಇವತ್ತು ಕರ್ನಾಟಕ ಫಿನಾನ್ಸ್ ಕಾರ್ಪೋರೇಷನ್‌ರವರು ಬೆಂಗಳೂರು ನಗರದಲ್ಲಿ ಹೂಡಿರತಕ್ಕಂಥ ಬಂಡವಾಳವೆಷ್ಟು ? ಹಿಂದುಳಿದ ಪ್ರದೇಶಗಳಲ್ಲಿ ಹೂಡಿರತಕ್ಕಂಥ ಬಂಡವಾಳವೆಷ್ಟು ? ಒಟ್ಟು ಇರತಕ್ಕಂಥ ಬಂಡವಾಳವೆಷ್ಟು ? ಯಾವಯಾವ ಮಟ್ಟದಲ್ಲಿ ವಿತರಣೆ ಮಾಡಿದ್ದೀರಿ ಎನ್ನತಕ್ಕಂಥ ವಿವರಣೆಯನ್ನು ತಾವು ಇವತ್ತು ಕೊಡಬೇಕಾಗುತ್ತದೆ. ಇವತ್ತು ನೀವು ಸಂಸ್ಥೆಗಳಿಗೆ ಬಂಡವಾಳವನ್ನು ಹೂಡತಕ್ಕಂಥ ಕಾಲದಲ್ಲಿ ನಾನು ಕೇಳುತ್ತೇನೆ ಈ ವಿಕ್ರಮ ಟೈರ್ಸ್, ನೀವು ಬಡ್ಜೆಟ್‌ನಲ್ಲಿಯು ಪ್ರಾವಿಜನ್ ಪ್ರಕಾರ ಒಂದೂವರೆ ಕೋಟಿ ಆದರೆ ಇವತ್ತು ವಿಕ್ರಮ್ ಟೈರ್ಸ್ ಎಷ್ಟು ಅವಶ್ಯಕತೆ ಇರತಕ್ಕಂಥ ಇಂಡಸ್ಟ್ರಿ ಆಗಿದೆಯೇ ? ಪ್ರೈವೇಟ್‌ನವರಿಗೆ ಇದು ಸಾಧ್ಯವಿರಲಿಲ್ಲವೇ ? ಈ ಇಂಡಸ್ಟ್ರೀಸ್‌ಗೋಸ್ಕರ ನಮ್ಮಲ್ಲಿಗುವಂಥ ಒಂದೂವರೆ ಕೋಟಿ ರೂ. ಗಳನ್ನು ಇದರಲ್ಲಿ ತೊಡಗಿಸಬೇಕಾಗಿತ್ತೇ ? ಎಂದು ಕೇಳುತ್ತೇನೆ. ಇವತ್ತು ಯಾವುದು ಅತ್ಯಾವಶ್ಯಕವಾದಂಥ ಇಂಡಸ್ಟ್ರಿ ಹಿಂದುಳಿದ ಪ್ರದೇಶಗಳಲ್ಲಿ ತೆಗದುಕೊಳ್ಳತಕ್ಕಂಥ ಅಗತ್ಯವೋ ಅದನ್ನು ಅಲ್ಲಿ ತೆಗೆದುಕೊಂಡು, ಅಲ್ಲಿಗೆ ಅಲ್ಪಸ್ವಲ್ಪ ಬಂಡವಾಳನ್ನು ಹೂಡತಕ್ಕಂಥದರಲ್ಲಿ ವಿವೇಚನೆಯನ್ನು ಉಪಯೋಗ ಮಾಡತಕ್ಕಂಥದ್ದು ಸರ್ಕಾರದ ಯೋಗ್ಯತೆ ಇಲ್ಲವೇ ಎಂದು ಹೇಳುತ್ತೇನೆ. ಈ ವಿಕ್ರಮ್ ಇಂಡಸ್ಟ್ರಿ ಮಾಜಿ ಗೌರ್ನರ್‌ರವರ ಆಳಿಯರಾದ ಶ್ರೀ ಚಾರಿಯನ್‌ರವರಿಗೆ ಸಂಬಂಧಿಸಿದ್ದು ಆಗಿದೆ ಅದಕ್ಕೋಸ್ಕರ ಈ ವಿಕ್ರಮ್ ಇಂಡಸ್ಟ್ರೀಸ್‌ಗ ಹಣವನ್ನು ನೀಡಿದ್ದೀರಿ. ಇವತ್ತು ಟೈಯರ್‌ನ ಕೊರತೆ ಕೂಡ ಇಲ್ಲ. ಯಾವುದೋ ಒಂದು ಕಾಲದಲ್ಲಿ ಟೈರ್‌ಗಳನ್ನು ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರತಕ್ಕಂಥ ಕಾಲವಿತ್ತು, ಇವತ್ತು ಟೈರಿಗೆ ಅಷ್ಟು ಹೆಚ್ಚಿನ ಬೇಡಿಕೆ ಇಲ್ಲ. ಆದುದರಿಂದ ಸರ್ಕಾರದವರು ಈ ಒಂದು ಇಂಡಸ್ಟ್ರೀಸ್‌ನಲ್ಲಿ ಹಣವನ್ನು ತೊಡಗಿಸತಕ್ಕಂಥದ್ದು ಯೋಗ್ಯವಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ರಾಜ್ಯಕ್ಕೆ ಸೆಕ್ಯೂರಿಟಿ ಪೇಪರ್ ಮಿಲ್ ಬರತಕ್ಕಂಥದ್ದು ಒಬ್ಬ ಅಧಿಕಾರಿಯವರ ಅಲಕ್ಷ್ಯ, ಮನೋಭಾವನೆಯಿಂದ ನಮ್ಮ ರಾಜ್ಯಕ್ಕೆ ಬರತಕ್ಕಂಥದ್ದು ತಪ್ಪಿ ಬೇರೆ ರಾಜ್ಯಕ್ಕೆ ಹೋಗಿದೆ. ನಾನು ಕೇಳುತ್ತೇನೆ, ಇಂಥ ಅಧಿಕಾರಿಗಳ ಬಗ್ಗೆ ನೀವು ಏತಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಿಲ್ಲ ? ಇಂಥ ಅಧಿಕಾರಿಗಳ ಬಗ್ಗೆ ಏಕೆ ಅಷ್ಟು ಮುತುವರ್ಜಿಯನ್ನು ವಹಿಸುತ್ತೀರಿ ಎನ್ನತಕ್ಕಂಥದ್ದನ್ನು ಕೇಳುತ್ತೇನೆ. ಇವತ್ತು ಯಾವುದೇ ಅಧಿಕಾರಿಯಾಗಿರಲಿ ಇವತ್ತು ಕೇಂದ್ರ ಸರ್ಕಾರದಿಂದ ಒಂದು ಟೀಮ್ ಇಲ್ಲಿ ಸರ್ವೆ ಮಾಡಲಿಕ್ಕೆ ಬಂದಂಥ ಕಾಲದಲ್ಲಿ ಸರಿಯಾಗಿ ನಡೆದು

(ಶ್ರೀ ಹೆಚ್. ಡಿ. ದೇವೇಗೌಡ)

ಕೊಳ್ಳಲಿಲ್ಲವೆಂದು ಹೇಳಿ ಒಂದು ಕೈಗಾರಿಕೆ ಇಲ್ಲಿಗೆ ಬರತಕ್ಕಂಥದ್ದು ತಪ್ಪಿ ಹೋಗುವಂಥ ಪರಿಸ್ಥಿತಿ ಬರುವುದಾದರೆ ನಾನು ಹೇಳುತ್ತೇನೆ, it is dam disgraceful for our administration. ಮುಖ್ಯಮಂತ್ರಿಗಳಿಗೆ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂಥ ಅಧಿಕಾರಿಗಳು ಇವತ್ತು ರಾಜ್ಯದ ಹಿತ ರಕ್ಷಣೆಯನ್ನು ಕಾಪಾಡದಿದ್ದರೆ ಅಂಥವರ ಮೇಲೆ ಉಗ್ರವಾದ ಶಿಕ್ಷೆಯನ್ನು ಕೊಡಲಿಕ್ಕೆ ತಾವು ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗದೆ ಶಿಕ್ಷೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ ಈ ಸ್ಟೋರ್ ಪರ್ಚೇಸ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ದೊಡ್ಡ ರಾಕೆಟ್ ಇದೆ. ಇವತ್ತು ಹೇಳುವುದಾದರೆ ಸ್ಟೋರ್ ಪರ್ಚೇಸಿನ ಒಂದೇ ಒಂದು ಪ್ರಕರಣವನ್ನು ಹೇಳುವುದಾದರೆ ನಮ್ಮ ಪೋಲಿಸ್: ಇಲಾಖೆಯಲ್ಲಿ ಸುಮಾರು 24 ಲಕ್ಷ ರೂಪಾಯಿಗಳ ಬಟ್ಟೆಯನ್ನು ಕೊಂಡುಕೊಂಡಿದ್ದಾರೆ. ಇದು ಒಂದೇ ಪ್ರಕರಣದಲ್ಲಿ ಸುಮಾರು 6 ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ ಎನ್ನತಕ್ಕಂಥ ಅಂಕಿಅಂಶಗಳನ್ನು ನಾನು ದೊರಕಿಸಿಕೊಂಡಿದ್ದೇನೆ. ಇಂಥ 10-6 ಪ್ರಕರಣಗಳು ಗೊತ್ತಾಗಿದೆ ದಯಮಾಡಿ ಹೇಳುತ್ತೇನೆ ನಾವು ಕಳೆದ ಸಾರಿ ಕೂಡ ಈ ಸಭೆಯಲ್ಲಿ ಚರ್ಚೆ ಮಾಡಿದ್ದೆವು, ತಾವು ಈ ಒಂದು ಸ್ಟೋರ್ಸ್ ಪರ್ಚೇಜ್ ಇಲಾಖೆಯ ಮೇಲೆ ಒಂದು ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳ ಬೇಕೆಂದು ಹೇಳುತ್ತೇನೆ. ಆ ಇಲಾಖೆಯ ಮೇಲೆ ಏನು ಕ್ರಮವನ್ನು ತೆಗೆದು ಕೊಳ್ಳುತ್ತೀರಿ ಎಂಬುದನ್ನು ತಮ್ಮ ಭಾಷಣದಲ್ಲಿ ತಿಳಿಸಬೇಕೆಂದು ಈ ಸಂದರ್ಭ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಸಾರಿ ನಾವು ಉಗ್ರವಾಗಿ ಹೋರಾಟ ಮಾಡಿದೆವು, ಈ ಸ್ಟೇನ್ ಲೆಸ್ ಸ್ಟೀಲ್‌ನ ಹಂಚಿಕೆಯ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಶ್ರೀಮಾನ್ ಪಾರಿಯರ್‌ರವರು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ ಅವರು ವರದಿಯನ್ನು ಕೊಡುತ್ತಾರೆಂದು ಹೇಳಿದ್ದರು. ಇಲ್ಲಿಯ ವರೆಗೆ ಅವರು ಏನು ತನಿಖೆಯನ್ನು ಮಾಡಿದ್ದಾರೆ ಎನ್ನುವ ಬಗ್ಗೆ ನಮಗೆ ವಿವರಣೆ ಯನ್ನು ಕೊಡಬೇಕೆಂದು ಕೇಳುತ್ತೇನೆ. ಸರ್ಕಾರದವರು ಈ ವಿಷಯದ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಆ ಶ್ವಾಸನೆಯನ್ನು ಕಾರ್ಯರೂಪಕ್ಕೆ ತರತಕ್ಕಂಥ ಸ್ಥಿತಿಯಲ್ಲಿ ಇಲ್ಲ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಹಲವಾರು ವಿಷಯಗಳ ಬಗ್ಗೆ ಮಾತನಾಡಬೇಕಿದ್ದು ಕಾಲದ ಒತ್ತಡವಿರುವುದರಿಂದ ಇನ್ನು ಹೆಚ್ಚು ಮಾತನಾಡುವುದಕ್ಕೆ ಹೋಗದೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಜೆ ವೆಂಕಟಪ್ಪ (ಶಿಡ್ಲಘಟ್ಟ) :—ಸ್ವಾಮಿ, ಈ ದಿನ ನಮ್ಮ ಮುಂದಿರ್ಮ ತಕ್ಕಂಥ ರಾಜ್ಯದ ಲೆಜಿಸ್ಲೇಚರ್, ಕೈಗಾರಿಕಾ ಇಲಾಖೆ ಹಾಗೂ ರೇಷ್ಮೆ ಇಲಾಖೆಗಳ ಸಂಬಂದಪಟ್ಟಹಾಗೆ ಈ ಬೇಡಿಕೆಗಳನ್ನು ಅನುಮೋದಿಸುತಾತಿ ಈಗಾಗಲೇ ನನ್ನ ಮೊದಲು ಮಾತನಾಡಿದಂಥ ಹಿರಿಯ ಸದಸ್ಯರಾದ ಶ್ರೀಮದ ಸುಮತಿ ಮಡಿಮನ್‌ರವರು ಮತ್ತು ವಿರೋಧ ಪಕ್ಷದ ನಾಯಕರು ಆಲ್ಲಿ ಶ್ರೀಮಾನ್ ಡಿ ದೇವೆಗೌಡರು ಹೇಳಿದ್ದಾರೆ, ಈ ಶಾಸನ ಸಭೆಯ ಸಮಯದಲ್ಲಿ ಹೆಚ್ಚಿನ ಕಾಲ ಯಾರ ಸೇವೆಯನ್ನು ಉಪಯೋಗಿಸುತ್ತೇವೆಯೋ ಅಂಥವರಲ್ಲಿ ಓವರ್‌ಟೈಮಿನ ತಾರತಮ್ಯವಿದೆ, ಇಂಥದ್ದನ್ನು ಹೋಗಲಾಡಿಸತಕ್ಕಂಥದ್ದು ಅತ್ಯಾವಶ್ಯಕ. ಜಿ. ಎ. ಡಿ ಯಿಂದ ಬರತಕ್ಕಂಥ ನೌಕರರು ಹಾಗೂ ಲೆಜಿಸ್ಲೇಚರ್ ನಲ್ಲಿರತಕ್ಕಂಥ ಕ್ಲಾಸ್ 3_4 ನೌಕರರಲ್ಲಿ ನೀವು ಕೊಡತಕ್ಕಂಥ ವೇತನದಲ್ಲಿ ತಾರತಮ್ಯವಿದೆ, ಅದುದರಿಂದ ಯಾರೇ ಆಗಲೀ ಹೆಚ್ಚು ಕಾಲ ಈ ತಾರತಮ್ಯವನ್ನು ಸಹಿಸುವುದಕ್ಕೆ ಆಗುವುದಿಲ್ಲ ಅದು ತೀವ್ರವಾಗಿ ಕೊನೆಗಾಣುತ್ತದೆಂದು ನಂಬಿದ್ದೇನೆ. ಇನ್ನು ನಮ್ಮ ಹೌಸ್ ಕಮಿಟಿ ಎಂದು ನಮ್ಮಿಂದನೇ ರಚಿತವಾದಂಥ ಒಂದು ಕಮಿಟಿ ಇದೆ. ಕೆಲವು ವೇಳೆ ನಮಗೆ ಗೊತ್ತಿಲ್ಲದೇನೆ ಕೆಲಸ ನಡೆದುಹೋಗುತ್ತಿದೆಂದು ಎಂದು ಸದಸ್ಯರಲ್ಲಿ ಒಂದು ಮನೋಭಾವನೆ ಬಂದಿದೆ ಅದು ಇನ್ನು ಮುಂದಾದರೂ, ಶಾಸನ ಸಭಾಗಳಲ್ಲಿ ವಸತಿ ಗೃಹ ಹಾಗೂ ಅವರಿಗಿರತಕ್ಕಂಥ ವ್ಯವಸ್ಥೆಯ ಬಗ್ಗೆ ನಮ್ಮಿಂದ ರಚಿತವಾದಂಥ ಒಂದು ಕಮಿಟಿ ಇದೆ ಅದರ ತೀರ್ಮಾನದಂತೆ, ಅದರ ಅಭಿಪ್ರಾಯದಂತೆ ಸರ್ಕಾರ ಮುಂದುವರಿಯತಕ್ಕಂಥದ್ದು ಸೂಕ್ತವೆಂದು ಈ ಮಾತನ್ನು ಹೇಳಬಯಸುತ್ತಿದ್ದೇನೆ. 2-3 ವರ್ಷದ ಅವಧಿಯಲ್ಲಿ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕೈಗಾರಿಕೆಗಳು ಉತ್ತಮಗೊಂಡು ಮುಂದುವರಿಯುತ್ತಿರತಕ್ಕಂಥದ್ದು ಹೆಮ್ಮೆಯ ಸುದ್ಧಿ ಅದಕ್ಕಾಗಿ ಮಾನ್ಯ ಶ್ರೀ ಕೃಷ್ಣ ರವರನ್ನು ಅಭಿನಂದಿಸುತ್ತೇನೆ. ಅವರ ಕಾಲದಲ್ಲಿಯೇ ಈ ವಿಜಯ ನಗರದ ಕಬ್ಬಿಣದ ಕಾರ್ಖಾನೆಯೂ ಸಾಕಷ್ಟು ಪ್ರಗತಿದಾಯಕವಾಗಿ ಮುಂದುವರಿಯ ತಕ್ಕಂಥದ್ದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಅವರು ಮಾಡುತ್ತಾರೆಂದು ನಂಬುತ್ತೇನೆ. ಇನ್ನು ನನಗಿರತಕ್ಕಂಥ ಸ್ವಲ್ಪ ಕಾಲದಲ್ಲಿ ನಮ್ಮ ರಾಜ್ಯದಲ್ಲಿರತಕ್ಕಂಥ ಸುಮಾರು 20 ಲಕ್ಷಕ್ಕೂ ಹೆಚ್ಚಿಗೆ ಜನಕ್ಕೆ ಉದ್ಯೋಗ ಒದಗಿಸುವ ರೇಷ್ಮೆ ಕೈಗಾರಿಕೆ ಬಗ್ಗೆ 4 ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ 1960ರಲ್ಲಿಯೇ ಈ ಉದ್ಧಿಮೆಯನ್ನು ಅಭಿವೃದ್ಧಿ ಪಡಿಸಬೇಕೆಂದು, ಇನ್ನು ಬೆಳಸಬೇಕೆಂದು, ಈ 20 ಲಕ್ಷ ಜನರಿಗೆ ಹೆಚ್ಚು ಉದ್ಯೋಗವನ್ನು ಒದಗಿಸಿಕೊಡುವ ಅವರ ಈ ಕಸಬು ಲಾಭ ದಾಯಕವಾಗಿ ಪರಿವರ್ತಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಮೊಟ್ಟೆ ತಯಾರಿಕೆ ಮತ್ತು ಹಂಚಿಕೆ ಸಂಬಂಧಪಟ್ಟಂತೆ ಒಂದು ಕಾಯಿದೆಯನ್ನು ಸೀಡ್ಸ್ ಲೆಜಿಸ್ಲೇಷನ್ ತಂದು 10-11 ವರ್ಷಗಳಾದರೂ ನಮಗೆ ಎಷ್ಟು ಬಿಳಿ ಮೊಟ್ಟೆಗಳು ಬೇಕೋ ಅಷ್ಟನ್ನು ನಾವೇ ತಯಾರು ಮಾಡಿಕೊಳ್ಳುವುದಕ್ಕೆ ಆಗದೇ ಅನೇಕ ಖಾಸಗಿಯವ

(ಶ್ರೀ ಜೆ. ವೆಂಕಟಪ್ಪ)

ರಿಂದಲೇ ಇಲಾಖೆಯವರು ಪರ್ಚೇಜ್ ಮಾಡತಕ್ಕಂಥದ್ದು ಬೇಕಾದಷ್ಟು ಇದೆ. ಮತ್ತೆ ಮೈಸೂರು ತಳಿ ಎನ್ನತಕ್ಕಂಥದು ಮೊದಲಿನಿಂದಲೂ ನಮ್ಮಲ್ಲಿ ಬೆಳೆದು ಬಂದಿದೆ. ಈ ತಳಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ, ಉತ್ತಮವಾದದ್ದನ್ನಾಗಿ ಪರಿವರ್ತಿಸತಕ್ಕಂಥದಕ್ಕೆ ಪ್ರಯೋಗ ನಡೆಸುತ್ತಿದ್ದಾರೆ. ಹಾಗೆಯೇ ಇವತ್ತು ಮೈಸೂರು ಪ್ರಿನ್ಸ್, ಕೊಳ್ಳೆಗಾಲಜವಾನ್, ಮತ್ತು ಕೋಲಾರ ಗೋಲ್ಡ್ ಈ ರೀತಿಯ 3-4 ಹೆಸರುಗಳುಳ್ಳ ಹೊಸ ತಳಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾ ಬಂದಿದ್ದಾರೆ. ಅದರ ಉಪಯೋಗ ಅಥವಾ ಅವನ್ನು ಬೆಳೆಯತಕ್ಕಂಥದ್ದಕ್ಕೆ ಒಂದು ಅವಕಾಶವಾಗಿರುವುದು ನನಗಂತೂ ಕಂಡು ಬಂದಿಲ್ಲ. ಇವತ್ತು ನಮ್ಮಲ್ಲಿ ಉತ್ಪಾದನೆ ಮಾಡತಕ್ಕಂಥ ರೇಷ್ಮೆ ಉತ್ತಮದರ್ಜೆಯ ರೇಷ್ಮೆಯನ್ನಾಗಿ ಮಾಡಬೇಕು ನಮಗಿರತಕ್ಕಂಥ ಪೈಪೋಟಿ ಎಂದರೆ ಹೊರ ದೇಶಗಳ ಪೈಪೋಟಿ ಅಷ್ಟೆ. ಅದಕ್ಕೆ ನಾವು ಬೆಲೆಯು ಹೋರದೇಶಗಳ ಬೆಲೆಗಳ ಆಧಾರದ ಮೇಲೆಯೇ ಇರುತ್ತದೆಯೇ ಹೊರತು ಬೇರೆ ಇನ್ನು ಯಾವುದೇ ಆಧಾರವಿಲ್ಲ. ಇಂಟರ್‌ನ್ಯಾಶನಲ್ ಮಾರ್ಕೆಟಿನ ಬೆಲೆಯ ಮೇಲೆ ನಮ್ಮ ರೇಷ್ಮೆಯ ಬೆಲೆಯು ಆಧಾರ ಪಟ್ಟಿರುವುದರಿಂದ ನಮ್ಮ ಕ್ವಾಲಿಟಿಯನ್ನು ಉತ್ತಮ ಪಡಿಸಿಕೊಳ್ಳ ಬೇಕೆಂದು ತೀರ್ಮಾನ ಮಾಡಿ ಅದಕ್ಕಾಗಿ ಪ್ರಯೋಗಗಳನ್ನು ನಡೆಸಿ ಬೈಓಲ ಟೈನ್ ಜಾತಿಯ ಬಿತ್ತನೆಯನ್ನು ಒದಗಿಸಲು ಪ್ರಯತ್ನ 4-5 ವರ್ಷಗಳಿಂದ ನಡೆದಿದೆ. ಆ ಪ್ರಯತ್ನದಿಂದ ಬೈ ಓಲ್ಟೇಜ್ ಎಷ್ಟರಮಟ್ಟಿಗೆ ಪ್ರತಿಫಲ ದೊರಕಿಸಿಕೊಟ್ಟಿದೆಂದರೆ ಇವತ್ತು ಅದರಿಂದ ಬರತಕ್ಕಂಥ ಗೂಡು ಬಹಳ ತೀಕ್ಷ್ಣವಾದಂಥ split ಬಹಳ ಬರುತ್ತದೆ. ಇದಕ್ಕೆ ಹವಾಗುಣ ಬಹಳ ಮುಖ್ಯ. ಈ ಬೈ ಓಲ್ಟೇಜ್, ನಮ್ಮಲ್ಲಿರುವ ಹೆಚ್ಚಿನ ಉಷ್ಣಾಂಶದಿಂದ ಇದನ್ನು ಬಹಳಷ್ಟು ಕಾಲ ತಡೆಹಿಡಿಯುವುದಕ್ಕೆ ಆಗುವುದಿಲ್ಲ. ನಮಗೆ ಇದರಿಂದ ಹೆಚ್ಚಿನ ಪ್ರತಿಫಲ ಬರಬೇಕಾದರೆ ಎಂಟರ್ ಸೀಜನ್‌ನಲ್ಲಿ, ಚಳಿಗಾಲದಲ್ಲಿ ಆದರೆ ಆ ಸಮಯದಲ್ಲಿ ಮುಸ್ಕಾರಡಿನ್ ಎಂಬತಕ್ಕಂಥ ವ್ಯಾಧಿ ಬಹಳಷ್ಟು ವ್ಯಾಪಕವಾಗಿ ಹರಡಿ ಶೇಕಡ 60ರಷ್ಟು ಬೆಳೆ ಈಗಾಗಲೇ ನಷ್ಟವಾಗಿದೆ ಅದುದರಿಂದ ಇದನ್ನು ತಡೆಗಟ್ಟಬೇಕು. ಬಾಕಿ 40 ಪರ್ಸೆಂಟ್‌ನಷ್ಟು ಉತ್ಪಾದನೆಯಾಗಿರತಕ್ಕಂಥ ರೇಷ್ಮೆಗೆ ಇಂಟರ್‌ನ್ಯಾಶನಲ್ ಮಾರ್ಕೆಟ್‌ನಲ್ಲಿ ನಮ್ಮ ರೇಷ್ಮೆಯನ್ನು ಕೇಳುವವರೇ ಇಲ್ಲದ ಹಾಗಾಗಿ ಇವತ್ತು ಕೊಳೆಯುತ್ತಾಇದೆ. ಕಾರಣ, ದರ್ಜೆಯಲ್ಲಿರುವ ನ್ಯೂನತೆಯಿಂದ ಸರ್ಕಾರದವರು ಉತ್ಪಾದಿಸಿರತಕ್ಕಂಥ ಸುಮಾರು 4ನೂರು ರೇಷ್ಮೆ ಒಳ್ಳೆಯ ಕ್ವಾಲಿಟಿ ಇಲ್ಲದಿದ್ದುದರಿಂದ ಮತ್ತು ಇಂಟರ್‌ನ್ಯಾಶನಲ್ ಮಾರ್ಕೆಟ್‌ನಲ್ಲಿ ರೇಷ್ಮೆ ಬೆಲೆ ಕುಸಿದು ಬಿದ್ದು ಇದರಿಂದ ನಮ್ಮ ರೇಷ್ಮೆ ಮಾರಾಟವಾಗುತ್ತಿಲ್ಲ. ಆದ ಕಾರಣ ನಮ್ಮ ರೇಷ್ಮೆಯ ಕ್ವಾಲಿಟಿಯನ್ನು ಮೊದಲು ಉತ್ತಮ ಪಡಿಸಬೇಕು.

ಕ್ವಾಲಿಟಿಯನ್ನು ಸ್ಟ್ಯಾಂಡರ್ಡ್ ಮಾಡದೇ ಇದ್ದರೆ ಇದರ ರಿಸಲ್ಟು ಕೂಡ ಚೆನ್ನಾಗಿ ಬರುವುದಿಲ್ಲ. ಇತ್ತೀಚೆಗೆ 20 ಹಾಗೂ 22ರ ಸೈಜು ರೇಷ್ಮೆ ಸಪ್ಲೈ ಮಾಡಿರುತ್ತಾರೆ. ಆದರೆ ಅದು 32-34 ಸೈಜು ಆಗಿರುತ್ತೆ. ಹೀಗಾಗಿ ಇದರ ಹಿನ್ನೆಲೆ ನೋಡಿದರೆ ನಾವು ಎಷ್ಟುಮಟ್ಟಿಗೆ ಒಳ್ಳೆಯ ರೇಷ್ಮೆಯ ಉತ್ಪಾದನೆಯನ್ನು ಮಾಡಲು ಸಾಧ್ಯವಾಗುತ್ತದೆ ಎನ್ನುವುದನ್ನು ತಿಳಿಯಬಹುದು. ಇದರಲ್ಲಿರುವ ನ್ಯೂನತೆಗಳನ್ನು ಆದಷ್ಟು ಜಾಗ್ರತೆಯಾಗಿ ಸರಿಪಡಿಸುವುದಕ್ಕೆ ಸಾಧ್ಯ ಎನ್ನುವುದನ್ನು ಈ ಇಲಾಖೆಯವರು ವಿಚಾರ ಮಾಡುವುದು ಅಗತ್ಯ, ರೇಷ್ಮೆ ಬೆಳೆ ಮಾಡುವವರು ಶಕ್ತಿ ಮೀರಿ ಒಳ್ಳೆಯ ಬೆಳೆಯನ್ನು ತರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ಬಿ ಆರ್ ಹಿಲ್ಸ್ ಹಾಗೂ ಇನ್ನಿತರ ಹಿಲ್ಲಿ ಟ್ರ್ಯಾಕ್‌ಗಳು ಎಲ್ಲಿರುತ್ತವೋ ಅಂತಹ ಪ್ರದೇಶಗಳಲ್ಲಿ ಒಳ್ಳೆಯ ಬೀಜಗಳನ್ನು ಶೇಖರಣೆ ಮಾಡಿ ಅವನ್ನು ರಕ್ಷಣೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಉಷ್ಣಾಂಶ ಶಿಡ್ಲಘಟ್ಟದಲ್ಲಿ ಸುಮಾರು 98ರಿಂದ 100 ಡಿಗ್ರಿಯವರೆಗೆ ಹೋಗುತ್ತದೆ. ಇದರ ಬೆಳೆ ಮಾಡಬೇಕಾದರೆ ಸುಮಾರು 70-75 ಡಿಗ್ರಿ ಇರುವಂತಹ ಕಡೆಗಳಲ್ಲಿ ಬೆಳೆ ಮಾಡಬಹುದು ಆದ ಕಾರಣ ideal rearing ಗೃಹಗಳು ಬೇಕು ಮತ್ತು ಇದಕ್ಕೆ ತಕ್ಕ ಶಕ್ತಿಯುಳ್ಳ ಉತ್ತಮವಾದ ಬೀಜಗಳನ್ನು ಹಂಚಬೇಕು ಮತ್ತು ರೋಗರಹಿತವಾದ ಬೀಜಗಳನ್ನು ಹಂಚಿದರೆ ಇದರಲ್ಲಿ ಕಡಿಮೆ ಮಾಡಬಹುದು. ಇಂದು ರೇಷ್ಮೆಗೆ ಸರಿಯಾದ ಬೆಲೆ ನಿಗದಿ ಮಾಡದೇ ಇರುವುದರಿಂದ ರೇಷ್ಮೆ ಬೆಲೆ ಕಡಿಮೆಯಾಗುತ್ತ ಇದೆ. ನಮ್ಮಲ್ಲಿ ಆಗತಕ್ಕ ನಷ್ಟವನ್ನು ಯಾವ ರೀತಿ ಕಡಿಮೆ ಮಾಡಬಹುದು ಎನ್ನುವುದನ್ನು ಪರಿಶೀಲಿಸಬೇಕು. ಒಳ್ಳೆಯ ಹಿಪ್ಪುನೇರಳೆ ಸೀಡ್ಲಿಂಗ್ಸ್‌ಗಳನ್ನು ರೈತರಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಇರುವ ರೀಸರ್ಚ್ ಸೆಂಟರುಗಳು ಸರಕಾರಕ್ಕೆ ಕೆಲವು ರಿಪೋರ್ಟುಗಳನ್ನು ಕೊಟ್ಟಿದೆ. ಇದರಲ್ಲಿ ಅವರು ಹೇಳಿರುವುದು ಒಂದು ಹೆಕ್ಟೇರು ಎಕರೆಗೆ 26 ಸಾವಿರದಷ್ಟು ಆದಾಯ ಪಡೆಯಬಹುದು ಎಂದು. ಇನ್ನೊಂದು ಇವರೇ ಹೇಳಿರುವ ಒಂದು ರಿಪೋರ್ಟ್‌ನಲ್ಲಿ ಲಾಲಗೊಂಡನಹಳ್ಳಿ ಫಾರಂನಲ್ಲಿ ಮೂರು ಎಕರೆಗಳು ಇವರಿಗೆ ಇವೆ, ಅದರಲ್ಲಿ ಉತ್ಪಾದನೆ 12000 ಕೆಜಿ ಎಂದು ಇದೆ. ಇನ್ನೊಂದು ಕಡೆ 30 ಸಾವಿರ ಕೆಜಿ ಬೆಳೆಯಬಹುದು ಎಂದು ಹೇಳುತ್ತಾರೆ. ರೀಸರ್ಚ್ ಸಂಸ್ಥೆಗಳೇ ಹೀಗೆ ಹೇಳಿದರೆ ಇದು ಸರಿಯಲ್ಲ. ಇದರಲ್ಲಿ ಶೇಕಡಾ ನಲವತ್ತರಷ್ಟು ಸುಳ್ಳಾಗುತ್ತದೆ. ಈ ಸಂಸ್ಥೆಗಳು ಕೊಡುವ ಅಂಕೆ ಸಂಖ್ಯೆಗಳು ಬರೀ ಮೋಸ ಎಂದು ಹೇಳಬೇಕಾಗಿದೆ. ಸಂಸ್ಥೆಗಳು ಇಂತಹ ತಪ್ಪು ತಿಳುವಳಿಕೆ ಕೊಡುವ ಪ್ರವೃತ್ತಿ ಇನ್ನಾದರೂ ಬಿಡಬೇಕು. ಇದರಿಂದ ನಾನು ಸಲಹೆ ಮಾಡುವುದು ಒಂದು ಎಕರೆಗೆ ಎಷ್ಟು ಉತ್ಪತ್ತಿ ಮಾಡಬಹುದು ಎನ್ನುವುದನ್ನು ಸರಿಯಾಗಿ ವಿಚಾರ ಮಾಡಿ ತಿಳಿಸಬೇಕು. ಸಂಸ್ಥೆಗಳು ಇಂತಹ ತಾರತಮ್ಯ ಮಾಡುವುದು ಸರಿಯಲ್ಲ. ಇನ್ನು ಮಾರ್ಕೆಟ್ಟುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ

(ಶ್ರೀ ಜೆ ವೆಂಕಟಪ್ಪ)

5-30 P. M.

ರೇಷ್ಮೆ ಬೆಲೆಯಲ್ಲಿ ಏರುಪೇರು 10–5 ಪರ್ಸೆಂಟ್ ಮಿತಿಯೊಳಗೆ ಇರಬೇಕು ಎನ್ನುವ ಉದ್ದೇಶದಿಂದ ಸರ್ಕಾರದವರು ಮಾರುಕಟ್ಟೆಗಳನ್ನು ಮಾಡಿದ್ದಾರೆ. ಮಾಧ್ಯವರ್ತಿಗಾರರ ಹಿತದಿಂದ ತಪ್ಪಿಸಲು ಮಾರುಕಟ್ಟೆಯನ್ನು ಮಾಡಿದ್ದಾರೆ. ಇವು ಯಾವರೀತಿ ಕೆಲಸ ಮಾಡುತ್ತಿವೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. 1973 ನೇ ಇಸವಿಯಲ್ಲಿ ರೇಷ್ಮೆ ಬಿಚ್ಚುವವರಿಗೆ ಹಣದ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಬ್ಯಾಂಕಿಗೆ ಸರ್ಕಾರದವರು ಗ್ಯಾರೆಂಟಿಯನ್ನು ಕೊಟ್ಟು ಸೊಸೈಟಿಗಳಿಗೆ 50 ಲಕ್ಷ ಹಣವನ್ನು ಒದಗಿಸಿ ಅವುಗಳ ಮುಖಾಂತರ ರೇಷ್ಮೆ ಬಿಚ್ಚುವವರಿಗೆ ಸಾಲವನ್ನು ಒದಗಿಸುವ ಒಂದು ಯೋಜನೆಯನ್ನು ಜಾರಿಗೆ ತಂದರು. ಬ್ಯಾಂಕಿನಿಂದ ಸೊಸೈಟಿಯವರು ಸಾಲ ಪಡಿದು ರೀಲರ್ಸ್‌ಗೆ ಸುಮಾರು 50 ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಟ್ಟರು. ಆ ಸಂದರ್ಭದಲ್ಲಿ ಬಹಳವಾಗಿ ಕುಸಿದಿದ್ದ ರೇಷ್ಮೆ ಬೆಲೆಯು ಒಂದು ಕೆ ಜಿ ಗೆ 30 ರೂಪಾಯಿಗಳು ಜಾಸ್ತಿ ಆಯಿತು. ಒಂದೇ ದಿವಸದಲ್ಲಿ ಒಂದು ಕೆ. ಜಿ. ರೇಷ್ಮೆಗೆ 30 ರೂಪಾಯಿ ಜಾಸ್ತಿಯಾಗಬೇಕಾದರೆ ವರ್ತಕರು ಎಷ್ಟರಮಟ್ಟಿಗೆ ಲಾಭವನ್ನು ಗಳಿಸಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಮತ್ತು ಒಂದು ವಾರದಲ್ಲಿ ಒಂದು ಕೆ. ಜಿ ರೇಷ್ಮೆಗೆ 100 ರೂಪಾಯಿಗಳ ವ್ಯತ್ಯಾಸ ಆಯಿತು. ಇಷ್ಟೊಂದು ಆದಾಯ ಬಂದರೂ ಕೂಡ ಮಧ್ಯವರ್ತಿಗಳು ರೇಷ್ಮೆ ಕೈಗಾರಿಕೆಯಲ್ಲಿ ನಿರತರಾಗಿರತಕ್ಕ ರೀಲರ್ಸ್ ಅನ್ನು ಮತ್ತು ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಇದನ್ನು ಕೊನೆಗಾಣಿಸಬೇಕೆಂದು, ರೀಲರ್ಸ್ ಮತ್ತು ರೈತರಿಗೆ ಸಹಾಯ ಮಾಡಬೇಕೆಂಬ ಸೊಸೈಟಿಗಳನ್ನು ಸ್ಥಾಪನೆ ಮಾಡಿ ಅವುಗಳ ಮುಖಾಂತರ ಅವರಿಗೆ ಸಹಾಯ ಮಾಡಬೇಕೆಂದು ಬ್ಯಾಂಕ್ ಗ್ಯಾರೆಂಟ್ ಕೊಟ್ಟು ಒಂದು ಕೋಟಿ ರೂಪಾಯಿಗಳನ್ನು ಈ ಸೊಸೈಟಿಗಳಿಗೆ ಕೊಟ್ಟರೂ ಕೂಡ ಈ ಒಂದು ಕೋಟಿ ರೂಪಾಯಿಗಳಲ್ಲಿ ಸುಮಾರು 90 ಲಕ್ಷ ರೂಪಾಯಿಗಳು ವರ್ತಕರಿಗೆ ಅಡ್ವಾನ್ಸ್ ಕೊಡುವುದರ ಮೂಲಕ ಹೋಗಿದೆ. ಇದನ್ನು ಪರಿಶೀಲನೆ ಮಾಡಬೇಕು. 1974-75 ನೇ ಒಂದೇ ಸಾಲಿನಲ್ಲಿ 93 ಲಕ್ಷ ರೂಪಾಯಿ ಔಟ್‌ಸ್ಟ್ಯಾಂಡಿಂಗ್ ಡ್ಯೂಸ್ ಹೊರಗಡೆ ನಿಂತುಹೋದಾಗ ಈ ಉದಮವನ್ನು ನಡೆಸತಕ್ಕವರಿಗೆ ಬಹಳ ತೊಂದರೆಯಾಯಿತು. ಕ್ರಾಷ್ ಸ್ಕೀಮಿನಲ್ಲಿ 80 ಕೋಟಿ ರೂಪಾಯಿಗಳನ್ನು ಒದಗಿಸಿ 10 ವರ್ಷಗಳ ಅವಧಿಯಲ್ಲಿ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಬೇಕೆಂದು ಸರ್ಕಾರದವರು ಷೆಡ್ಯೂಲ್ ಬ್ಯಾಂಕಿನಿಂದ ಸೊಸೈಟಿಗಳಿಗೆ ಹಣವನ್ನು ಒದಗಿಸಿ ಆ ಸೊಸೈಟಿಗಳ ಮುಖಾಂತರ ಈ ರೇಷ್ಮೆ ಬೆಳೆಗಾರರಿಗೆ ಹಣದ ಸೌಲಭ್ಯ ಒದಗಿಸಬೇಕೆಂದು ಈ ಒಂದು ಯೋಜನೆಯನ್ನು ಸರ್ಕಾರದವರು ಜಾರಿಗೆ ತಂದರು. ಆದರೆ ಈ ಹಣದ ಸೌಲಭ್ಯ ಕೇವಲ 4-5 ರೀಲರ್ಸ್ ಸೊಸೈಟಿಗಳಿಗೆ ಮಾತ್ರ

ದೊರೆಯಿತು. ಮತ್ತು ಯಾರೋ ಕೆಲವೇ ಜನಗಳಿಗೆ ಮಾತ್ರ ಇದರ ಅನುಕೂಲ ದೊರೆಯಿತು. ಎಲ್ಲರಿಗೂ ಅದರ ಸೌಲಭ್ಯ ದೊರೆಯಲಿಲ್ಲ. ಆದ್ದರಿಂದ ಈ ಒಂದು ಕ್ರಾಷ್ ಪ್ರೋಗ್ರಾಮ್ ಯೋಜನೆಯಲ್ಲಿ ರೇಷ್ಮೆ ಬೆಳೆಗಾರರಿಗೆ ನಿರೀಕ್ಷಿಸಿದಷ್ಟು ಸಹಾಯ ದೊರೆಯಲಿಲ್ಲ. ಈ ದಿಶೆಯಲ್ಲೇ ಮುಂದುವರಿದರೆ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುತ್ತೇವೆಂದು ಹೇಳತಕ್ಕಂಥಾ ಮಾತು ಕೃತಿಯಲ್ಲಿ ಬರುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ ಮಾನ್ಯ ಮಂತ್ರಿಗಳು ಈ ಒಂದು ಇಲಾಖೆಯನ್ನು ವಹಿಸಿಕೊಂಡು ಒಂದೆರಡು ವರ್ಷಗಳಾದರೂ ಕೂಡ ಇದರಲ್ಲಿ ನಾವು ನಿರೀಕ್ಷಣೆ ಮಾಡಿದಷ್ಟು ಅಭಿವೃದ್ಧಿಯಾಗಲಿಲ್ಲ. ಈ ರೇಷ್ಮೆ ಕೈಗಾರಿಕೆ 1957 ನೇ ಇಸವಿಯಿಂದಲೂ ಕೂಡ ಕುಸಿದು ಬೀಳುತ್ತಿದೆ. ಬೆಲೆಗಳು ಏರು ಪೇರಾಗುತ್ತಿವೆ. ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ಪೈಪೋಟಿ ಮಾಡತಕ್ಕ ಮಟ್ಟಕ್ಕೆ ನಾವು ರೇಷ್ಮೆಯನ್ನು ಉತ್ಪಾದನೆ ಮಾಡತಕ್ಕ, ಬೆಳೆಸತಕ್ಕ ಶಕ್ತಿ ನಮಗೆ ಸಾಲದು. ಈಗಾಗಲೇ ಬೈವೋಲ್ಟೀನ್ ತರಗತಿಯ ರೇಷ್ಮೆಯನ್ನು ನಮ್ಮಲ್ಲಿ ಉತ್ಪಾದನೆ ಮಾಡಿ ಅದು ಹಾಗೆಯೇ ಉಳಿದಿದೆ. ಆದ್ದರಿಂದ ಇನ್ನೂ ಹೆಚ್ಚು ಸಂಶೋಧನೆ ಮಾಡುವುದಕ್ಕೆ ಪ್ರೋತ್ಸಾಹ ಕೊಟ್ಟರೆ ನಮ್ಮ ರೇಷ್ಮೆಯ ಕ್ವಾಲಿಟಿಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ ಈ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ಇಲಾಖೆಯಿಂದ ಡೈರೆಕ್ಟರ್ ಒಂದು ಸರ್‌ಕ್ಯುಲರ್ ಹೊರಡಿಸಿದ್ದಾರೆ ಅದರಲ್ಲಿ ಬೈವೋಲ್ಟೀನ್ 2 ಪರ್ಸೆಂಟ್ ಫೆಬ್ರಿಕ್ ಇರುವ ರೇಷ್ಮೆ ಮೊಟ್ಟೆಯನ್ನು ಬಿತ್ತನೆಗೆ ಉಪಯೋಗಿಸಿ ಎಂದು ಸರ್‌ಕ್ಯುಲರ್ ಕಳುಹಿಸಿದ್ದಾರೆ ಇದು ಅತ್ತಿ ಬೆಲೆಯಲ್ಲಿ ಬೆಳೆದಂತಹ ಗೂಡು. ಇದು ಅಷ್ಟು ಉತ್ತಮವಾದ ಬಿತ್ತನೆ ಮೊಟ್ಟೆ ಯಲ್ಲ. ರೇಷ್ಮೆ ಬೆಳೆಗಾರರಿಗೆ ಒಳ್ಳೆಯ ಉತ್ತಮವಾದ ಬಿತ್ತನೆ ಗೂಡನ್ನು ಒದಗಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿಲ್ಲ. ಮತ್ತು ಈ ರೇಷ್ಮೆ ಉದ್ಯಮಕ್ಕೆ ಎಷ್ಟರಮಟ್ಟಿನ ಪ್ರೋತ್ಸಾಹವನ್ನು ಕೊಡಬೇಕಾಗಿತ್ತೋ ಅಷ್ಟರಮಟ್ಟಿನ ಪ್ರೋತ್ಸಾಹವನ್ನು ಕೊಟ್ಟಿಲ್ಲ ಆದ್ದರಿಂದ ಇದಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಮುಂದುವರಿದ ರಾಷ್ಟ್ರವಾದ ಜಪಾನ್‌ನಲ್ಲಿ 0.01 ಪರ್ಸೆಂಟ್‌ನಷ್ಟು ಫೆಬ್ರಿಕ್ ಇರುವ ಬಿತ್ತನೆ ಸುಟ್ಟು ಹಾಕುತ್ತಾರೆ ಎಂದು ಹೇಳುವಾಗ 2 ಪರ್ಸೆಂಟ್ ಫೆಬ್ರಿಕ್ ಇರುವ ಬೈವೋಲ್ಟೀನ್ ಬಿತ್ತನೆಯನ್ನು ಉಪಯೋಗಿಸಿ ಎಂದು ಡೈರೆಕ್ಟರು ಹೇಳತಕ್ಕ ಮಾತಿಗೆ ವಿರಾಮವನ್ನು ಹಾಕುವುದು ಒಳ್ಳೆಯದು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ :—ಈ ಡಿಮಾಂಡ್ ಇವೊತ್ತೇ ಮುಗಿಸಬೇಕೆಂಬ ಕಾರ್ಯಕ್ರಮ ಇದೆಯೇ ?

ಉಪಾಧ್ಯಕ್ಷರು :—ಇವೊತ್ತು ಚರ್ಚೆ ಮುಗಿಸೋಣ. ನಾಳೆ ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡಲಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :—ಸ್ವಾಮಿ ಈ ಬೇಡಿಕೆಯ ಮೇಲೆ ಮಾತನಾಡಲೇ ಬೇಕು. ಆದ್ದರಿಂದ ನನಗೆ ಅವಕಾಶ ಕೊಡಬೇಕು.

Mr. DEPUTY SPEAKER :—Even then, I request the Hon. Member to speak in a restrained manner; the best thing is to go on speaking in a restrained manner, as otherwise there will be interruptions.

That being the position, I will seek the co-operation of all the members to complete the debate on these Demands today. I am prepared to sit even two hours more; and make our office to work overtime. That is why I seek the co-operation of all members and good will from all the sections of the House to see that we complete the discussion today itself.

ಶ್ರೀ ಕಾಗೋಡು ತಿಮ್ಮಪ್ಪ :—ನಾಳೆಯೂ ಪ್ರಶ್ನೋತ್ತರಗಳ ಕಾಲವನ್ನು ಕೈಬಿಟ್ಟೆವು. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ನಾಳೆ ಉತ್ತರ ಹೇಳಿದರೆ ಈಗ ಇಲ್ಲಿರತಕ್ಕ ಇನ್ನೂ ಕೆಲವು ಮೆಂಬರುಗಳು ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಹೋದ ವರ್ಷ ಡಿಮ್ಯಾಂಡ್ ಮೇಲೆ ಎಷ್ಟು ದಿನಗಳನ್ನು ಚರ್ಚೆಗೆ ತೆಗೆದುಕೊಂಡಿದ್ದೇವೆ? ಬಡ್ಜೆಟ್ ಚರ್ಚೆಗೆ ಎಷ್ಟು ದಿವಸ ತೆಗೆದುಕೊಂಡಿದ್ದೇವೆಂಬುದನ್ನು ನೋಡಿ. ಈಗ ಖಾಸಗೀ ನಿರ್ಣಯವನ್ನು ಕೈಬಿಟ್ಟಿದ್ದೇವೆ 30ನೇ ತಾರೀಖಿನವರೆಗೆ ಹಣವನ್ನು ಮಂಜೂರು ಮಾಡಬೇಕೆಂದು ನಾವು ಮಾಡಿರುವ ತ್ಯಾಗವನ್ನು ಇಲ್ಲಿ ಹೇಳುವುದಕ್ಕೆ ಅವಕಾಶವಿಲ್ಲದಿದ್ದರೆ ಹೇಗೆ ? ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ಇವತ್ತು ಉತ್ತರ ಕೊಡುವುದನ್ನು ನಾಳೆ ಕೊಡಲಿ.

MR. DEPUTY SPEAKER :—The instructions to me from the Hon. Speaker were that the demands must be put to vote today. That is why I have been trying to adjust the timings. What else can I do?

SRI KAGODU THIMMAPPA.—That is why we have sacrified the question hour tomorrow. Nobody is prepared to accept the sacrifice that we have made.

MR. DEPUTY SPEAKER :—I have to implement the decision that has already been taken in the matter.

SRI KAGODU THIMMAPPA :—It is up to the Treasury Bench to accept our suggestion.

MR. DEPUTY SPEAKER :—As a matter of fact these things have been decided in the Business Advisory Committee meeting. If any deviation is necessary, if a question is flung at me that the reply might be taken up tomorrow how is it possible to give a reply to that question? All that I can say is what the Speaker has told me, I must carry out.

SRI KAGODU THIMMAPPA —Our anxiety is to have the reply tomorrow morning.

SRI D. DEVARAJ URS :—Let us have four speakers in all two speakers from this side and two speakers from the opposite side. They may take 40 minutes in all. Atleast the reply can be commenced at 6-30 P. M. and go on till 7-30 P. M.

MR. DEPUTY SPEAKER :—I shall be extremely grateful if all the members were to co-operate with me.

SRI S. BANGARAPPA :—We are prepared to sit upto 6-30 P. M. If some more members are to participate, then let us have the reply tomorrow.

SRI D. DEVARAJ URS : The Hon. Leader of the Opposition has made an effective speech. Some of you can supplement to what he has already said. Let there be a kind of debate where you will have to highlight the failures of the Government. Here there is no question of asking for starting an industry. We have to discuss only the industrial policy of the Government. Even two members can speak effectively about the industrial policy of the Government. For want of time we have to adjust the timings in a manner to see that this debate is concluded today. Tomorrow Major Irrigation demand will come up. Everybody would like to speak on that

(Sri D. Devaraj Urs)

demand. If the time of that demand is taken by today's demand. again we will have to postpone that demand. It is therefore better to sit upto 7-30 P. M. today and complete today's demand.

‡ ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) :—ಉಪಾಧ್ಯಕ್ಷರೇ, ಕಾಲದ ಪರಿಮಿತಿಯನ್ನು ಚೆನ್ನಾಗಿ ಅರಿತು ಈ ದಿವಸ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸಿ ಒಂದೆರಡು ಸಲಹೆಗಳನ್ನು ಕೊಡಲು ಉದ್ಯುಕ್ತನಾಗಿದ್ದೇನೆ. ಅನೇಕ ವಿಷಯಗಳ ಮೇಲೆ ಚರ್ಚೆ ಮಾಡುವ ಸಾಮರ್ಥ್ಯ ನನಗೆ ಇದ್ದರೂ ಸಹ ಕಾಲದ ಸೀಮಿತವನ್ನು ಅರಿತು ಇವತ್ತು ನಾನು ಪ್ರಮುಖವಾಗಿ ರೇಷ್ಮೆ ಖಾತೆಯ ಮೇಲೆ ಮಾತನಾಡಲು ತುಂಬಾ ಕಾತುರನಾಗಿದ್ದೇನೆ. ನಾನು ಈ ಇಲಾಖೆಯಲ್ಲಿ ಕೆಲವು ದಿವಸ ಅಧಿಕಾರಿಗಳ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಹುಟ್ಟಿದಂದಿನಿಂದಲೂ ರೇಷ್ಮೆ ಬೇಸಾಯಗಾರನಾಗಿಯೂ ಬೆಳೆದಿದ್ದೇನೆ. ಈ ರೇಷ್ಮೆ ಬೇಸಾಯ ಕರ್ನಾಟಕದಲ್ಲಿ ನನ್ನ ಮಿತ್ರರಾದ ಮಾನ್ಯ ಶ್ರೀ ವೆಂಕಟಪ್ಪನವರು ಹೇಳಿದಂತೆ 25 ಲಕ್ಷ ಜನಗಳ ಒಂದು ದೊಡ್ಡ ಉದ್ಯೋಗ. ಈ ರೇಷ್ಮೆ ವ್ಯವಸಾಯ ಬರೀ ರೈತರಿಗೆ ದುಡ್ಡು ಕೊಡುವ ಒಂದು ಉದ್ದಿಮೆ ಮಾತ್ರವಲ್ಲ. ನಿರುದ್ಯೋಗ ನಿವಾರಣೆಯನ್ನು ಪ್ರಮುಖವಾಗಿ ಮಾಡುವಂಥಾದ್ದು ಹೌದು, ಈ ದೇಶದಲ್ಲಿ ನಿರುದ್ಯೋಗದ ಹಾವಳಿ ಎಲ್ಲಾ ಮನೆಗಳ ಮಾತಾಗಿರುವುದರಿಂದ ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಾದ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು ಮತ್ತು ಕೋಲಾರ ಮುಂತಾದ ಕಡೆಗಳಲ್ಲಿ ರೇಷ್ಮೆ ಬೇಸಾಯವೇ ಅತಿ ಪ್ರಾಮುಖ್ಯವಾದುದು. ಈ ಐದು ಜಿಲ್ಲೆಗಳಲ್ಲಿ ಸೇಕಡ 60 ರಿಂದ 70 ರಷ್ಟು ಸಂಸಾರಗಳು ಈ ಒಂದು ಉದ್ದಿಮೆಯಲ್ಲಿ ತೊಡಗಿವೆ. ಮೊಟ್ಟಮೊದಲನೆಯದಾಗಿ ನಾನು ಸರ್ಕಾರದಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಈ ಖಾತೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದಿರುವ ನಮ್ಮ ರಾಜ್ಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಬ್ಬರು. ದುರ್ದೈವವಶಾತ್ ಬೇರೆಯವರು ಈ ಇಲಾಖೆಯ ಮಂತ್ರಿಗಳಾಗಿದ್ದಾರೆ. ಅವರು ಈ ಇಲಾಖೆಯನ್ನು ಒಂದು ನಿಕೃಷ್ಟವಾದ ಇಲಾಖೆಯನ್ನಾಗಿ ಪರಿಗಣಿಸಿರತಕ್ಕದ್ದು ನನಗೆ ತುಂಬಾ ದುಃಖಕರವಾದ ವಿಷಯವಾಗಿದೆ. ಮಾನ್ಯ ಶ್ರೀ ದೇವರಾಜ ಅರಸ್ ಅವರು ಈ ಇಲಾಖೆಯನ್ನು ವಹಿಸಿಕೊಂಡಿದ್ದರೆ ಬಹಳ ಚೆನ್ನಾಗಿತ್ತು. ಇದರ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಹೊಂದಿರುವವರಲ್ಲಿ ಅವರು ಒಬ್ಬರೇ ಹೆಚ್ಚು ತಿಳಿದಂಥ ವ್ಯಕ್ತಿಗಳಾಗಿದ್ದಾರೆ. ಇದನ್ನು ಅವರು ಒಂದು ಸಂಶೋಧನ ಇಲಾಖೆಯಾಗಿ ಅವರ ಕ್ಯಾಬಿನೆಟ್‌ನಲ್ಲಿ ಏಕೆ ಮಾಡಿದರೋ ನನಗೆ ದುಃಖವಾಗಿದೆ. ನಿಜವಾಗಿಯೂ ನಾನು ಹೇಳಬೇಕಾದರೆ

ಕರ್ನಾಟಕದಲ್ಲಿ ನಿರುದ್ಯೋಗ ನಿವಾರಣೆ ಮಾಡಬೇಕಾದರೆ ಈ ಒಂದು ಖಾತೆಯನ್ನು ಬೆಳಸಬೇಕು. ಈ ಒಂದು ಕೈಗಾರಿಕೆಯನ್ನು ಬೆಳೆಸಬೇಕು. ನಿರುದ್ಯೋಗ ನಿವಾರಣೆಯ ಜೊತೆಗೆ ರೈತ ಸಂತೃಪ್ತನಾಗಿ ಬಾಳುವುದಕ್ಕೆ ಸಹಕಾರಿಯಾದಂಥ ಕೈಗಾರಿಕೆ ಇದು.

ರೇಷ್ಮೆ ಬೆಳೆ ಸಂತುಷ್ಟವಾಗಿ ದೇಶದಲ್ಲಿ ಬೆಳೆದರೆ ಆದರಿಂದ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಉತ್ಪಾದನೆ ಬರುತ್ತದೆ. ನೀವು ಮೂರು ವರ್ಷಗಳಿಂದ ಸತತವಾಗಿ ಕ್ರ್ಯಾಷ್ ಪ್ರೋಗ್ರಾಂ ಎಂದು 100 ಕೋಟಿ ರೂಪಾಯಿ ಪ್ರೋಗ್ರಾಮ್ ಹಾಕಿ 60 ಕೋಟಿ ರೂಪಾಯಿಯ ಕ್ರ್ಯಾಷ್ ಪ್ರೋಗ್ರಾಮ್ ಹಾಕಿಕೊಂಡು ಇದ್ದೀರಿ. ಅಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ ಅದು ಏನು ಎಂದರೆ ನಾನು ರೇಷ್ಮೆ ವ್ಯವಸಾಯಗಾರನ ಮಗನಾಗಿ ಪ್ರಾರ್ಥನೆ ಮಾಡುವುದು ಇಷ್ಟೆ ರೈತರಿಗೆ ರೋಗರಹಿತ ಮೊಟ್ಟೆಗಳನ್ನು ಕೊಡಬೇಕು 1928ರಲ್ಲಿ ಮೈಸೂರು ರಾಜ್ಯದಲ್ಲಿ ಇದು ಸ್ಥಾಪನೆ ಮಾಡುವಾಗ ಪ್ರಾಯಶಃ ಈ ಉದ್ಯೋಗ ಇಷ್ಟು ಅಭಿವೃದ್ಧಿಗೆ ಬರುತ್ತದೆ ಎಂದು ಸಂಪೂರ್ಣ ಗಮನ ಕೊಡುವಂತಹ ಕಾಲದಲ್ಲಿ ಜನರಿಗೆ ಇಷ್ಟು ನವೀನ ರೀತಿ ತಿಳಿದಿರಲಿಲ್ಲವೋ ಏನೋ ಆದರೆ ಈಗ ತಾವು ಈ ಖಾತೆಯನ್ನು ಯುವಕ ಮಂತ್ರಿಗಳಿಗೆ ವಹಿಸಿದ್ದೀರಿ ಆದರೆ ಅವರ ಸಾಮರ್ಥ್ಯವನ್ನು ಅಳೆಯುವುದಕ್ಕೆ ಹೋಗುವುದಿಲ್ಲ. ರೇಷ್ಮೆ ಇಲಾಖೆ ಬೆಳೆಯಬೇಕಾದರೆ ಕೇಂದ್ರೀಕೃತವಾದ ಕೈಗಾರಿಕೆಗಿಂತ ಈ ರೇಷ್ಮೆ ಕೈಗಾರಿಕೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ದೊರೆಯಬೇಕು. ಅಧಿಕಾರಿಗಳಲ್ಲಿ ದೌರ್ಬಲ್ಯ ಇರಕೂಡದು ಇದರ ಬಗ್ಗೆ ತಜ್ಞರ ತಂಡ ಏನು ಇದೆ ಅದು ಸಾಮರ್ಥ್ಯದಿಂದ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ದೋಷದ ಮೊಟ್ಟೆಗಳನ್ನು ರೈತರಿಗೆ ಹಂಚದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಇದನ್ನು ಉನ್ನತ ಸ್ಥಾನದಲ್ಲಿ ಇದಕ್ಕೆ ಪ್ರಾಧ್ಯಾನತೆ ಕೊಡಬೇಕು, ದೇಶದ ರೇಷ್ಮೆ ಇಲಾಖೆಯು ಉನ್ನತ ಸ್ಥಾನದಲ್ಲಿ ರಾಷ್ಟ್ರಮಟ್ಟದಲ್ಲಿ ಸೇವೆಮಾಡಿದ್ದೀರಿ, ಅನೇಕ ಸಾರಿ ಹೇಳಿದೇನೆ. ಅಧಿಕಾರಿಗಳು ಕೂಡ ದೋಷ ಮಾಡತಕ್ಕಂಥ ಜನ ಇಲ್ಲ. ನಾವು ನಿಮ್ಮ ಕಾಲನ್ನು ಹಿಡಿದು ಎಳೆಯುವಂತ ಜನ ನಾವು ಅಲ್ಲ. ಸ್ವಾಮಿ ಈ ವಿಚಾರದಲ್ಲಿ ತಮಗೆ ಅರಿವು ಇದೆ. ರೇಷ್ಮೆ ಬೆಳೆಗಾರನಿಗೆ ರೋಗರಹಿತ ಮೊಟ್ಟೆಯನ್ನು ಒದಗಿಸಿದರೆ ಸಾಕು ಅವನು ಬದುಕಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಯಾವುದೇ ರೀತಿಯ ತೆರಿಗೆಯನ್ನು ಹಾಕಿ ಸರಕಾರಕ್ಕೆ ಕೊಡಬೇಕೆಂದರೆ ಅವನು ಕೊಡುವುದಕ್ಕೆ ಹಿಂತೆಗೆಯುವುದಿಲ್ಲ. ಶ್ರೀಮಾನ್ ದೇವರಾಜ ಅರಸ್ ಅವರು ಖುದ್ದು ಅದೇ ಮನೆತನದಿಂದ ಬಂದಿದ್ದಾರೆ. ಅಧಿಕಾರಿಗಳು ಸಮರ್ಥರೇ ಆದರೆ ಇಂಥ ದುರ್ಬಲವಾದ ಇಲಾಖೆ ಬೇರೆ ಇದೆಯೇ ಸ್ವಾಮಿ? ಸುಮಾರು 21 ದಿವಸಗಳಿಂದ 28 ದಿವಸಗಳವರೆಗೆ ಸಾಕುವಂತಹ ರೇಷ್ಮೆ ವ್ಯವಸಾಯ ಏನಿದೆ ಇದನ್ನು ತೆಗೆದು ಕೊಂಡರೆ ಗ್ರಾಮಗಳಲ್ಲಿ ಜನರು ದೇವರು ಎನ್ನತಕ್ಕಂಥ ಪೂಜ್ಯ ಭಾವನೆಯನ್ನು ಚಂದ್ರಿಕೆಯ ವಿಷಯದಲ್ಲಿ ಇಟ್ಟುಕೊಂಡಿದ್ದಾರೆ. ಅವರಿಗೆ ಇರತಕ್ಕ ಸಂಕಟ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ವನ್ನು ಯಾರ ಜೊತೆಯಲ್ಲಿ ತೋಡಿಕೊಳ್ಳಬೇಕು ? ಈ ಸಂಸ್ಥೆಯನ್ನು ಮತ್ತು ಈ ಕ್ಷೇತ್ರವನ್ನು ತಾವು ಅಭಿವೃದ್ಧಿಪಡಿಸಿದರೆ ತಮಗೆ ಆ ಜನರು ಋಣಿಗಳಾಗಿರುತ್ತಾರೆ. ನಾನು ಕೇಳುವುದು ಇಷ್ಟೆ. ರೇಶ್ಮೆ ಬೆಳೆಗಾರರು ಬಾಳಬೇಕೆಂದು ಪ್ರಾರ್ಥನೆ ಮಾಡಿ ಕೆಲವು ಒಂದು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೇಶ್ಮೆ ಫಿಲೇಚರ್‌ಗಳು ನಮ್ಮ ರಾಜ್ಯದಲ್ಲಿ 7 ಸ್ಥಾಪನೆಯಾಗಿವೆ. ಅದರಲ್ಲಿ ಮೈಸೂರು ಜಿಲ್ಲೆಯಲ್ಲಿ 6 ಮತ್ತು ನಮ್ಮ ಬೆಂಗಳೂರು ಜಿಲ್ಲೆಯಲ್ಲಿ 1 ಇದೆ. ಎಲ್ಲಿ ನೀರಾವರಿಯಿಂದ ರೇಶ್ಮೆ ಗೂಡು ಉತ್ಪತ್ತಿಯಾಗುತ್ತದೆ ಅಲ್ಲಿ ಕ್ವಾಂಟಿಟಿ ಕಡಿಮೆ ಕೆಂಡಿಟಾ ಒಳ್ಳೆಯ ರೇಶ್ಮೆ ಬರತಕ್ಕಂಥಾದ್ದು ಇದೆ. ನಮ್ಮ ಮಿತ್ರರಾದಂಥ ಶ್ರೀಮಾನ್ ವೆಂಕಟಪ್ಪನವರು ಮೈಸೂರು ಜಿಲ್ಲೆಗೆ 6 ಫಿಲೇಚರ್‌ಗಳು ಹೋಗಿದ್ದರ ವಿಚಾರವಾಗಿ ಅಲ್ಲಿ ಒಂದು ರಾಜಕೀಯ ಒತ್ತಡದಿಂದ ಆಗಿದೆಯೆಂದು ಹೇಳಿದರು. ರೇಶ್ಮೆ ಫಿಲೇಚರ್ ಎಲ್ಲಿ ಹೆಚ್ಚು ಉತ್ಪಾದನೆಯಾಗಿದೆ ಎಂದರೆ ಕೋಲಾರ ಮತ್ತು ರಾಮನಗರಳಲ್ಲಿ ಪೆಟ್ರೋಲ್ ಲಾರಿಗಳಲ್ಲಿ ಡೀಸೆಲ್ ಗಾಡಿಗಳಲ್ಲಿ, ಟೋ ಗಾಡಿಗಳಲ್ಲಿ ಸಾಗಿಸುವುದರಿಂದ ರೇಶ್ಮೆ ಕಡಿಮೆಯಾಗುತ್ತದೆ. ಈ ರೀತಿ ಆಗುವುದನ್ನು ತಡೆಗಟ್ಟುವುದಕ್ಕೆ ಸಾಧ್ಯ. ಇದರಲ್ಲಿ ಎರಡು ವಿಧಗಳು ಇವೆ. ಉಬ್ಬೆಯಲ್ಲಿ ರೇಶ್ಮೆ ಹುಳುವನ್ನು ಸಾಯಿಸುವುದು ಒಂದು ಇನ್ನೊಂದು ಮುಂದುವರಿದಂತ ದೇಶಗಳಾದ ಜಪಾನ್ ಮುಂತಾದ ಅಭಿವೃದ್ಧಿ ರಾಷ್ಟ್ರಗಳಲ್ಲಿ ಬಿಸಿ ನೀರು ಉಪಯೋಗಿಸಿ ಅವುಗಳನ್ನು ಸಾಯಿಸುವುದರಿಂದ ತುಂಬಾ ದಿವಸಗಳು ಇಡುವುದಕ್ಕೆ ಸಾಧ್ಯವಿದೆ. ರಾಜ್ಯಸರ್ಕಾರಕ್ಕೆ ತಿಳಿಸುವುದೇನೆಂದರೆ ಒಂದು ಗೂಡನ್ನು ಉತ್ಪಾದನೆ ಮಾಡುವ ಸಂದರ್ಭದಲ್ಲಿ ಗುಂಡು ಬಿಸಿಯಿಂದ ಅದನ್ನು ತೆಗೆಯುವುದು ಒಳ್ಳೆಯದು ಎಂದು ತಿಳಿಸಲು ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಯುವಕರಿಗೆ ಈ ಇಲಾಖೆಯನ್ನು ನೇಮಿಸಿದ್ದೀರಿ ಆದ್ದರಿಂದ ಅವರನ್ನು ವಿದೇಶಗಳಿಗೆ ಕಳುಹಿಸಿ ಅಲ್ಲಿ ನವೀನ ರೀತಿನೀತಿಗಳನ್ನು ಅಧ್ಯಯನ ಮಾಡಿ ಬರಲು ಕಳುಹಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಹಿಂದೆ ರೇಶ್ಮೆ ಇಲಾಖೆಯನ್ನು ವಹಿಸಿದ್ದಂತಹ ಶ್ರೀಮಾನ್ ದಯಾನಂದ ಸಾಗರ್‌ರವರು ವಿದೇಶಗಳಿಗೆ ಹೋಗಿ ಬಂದರು. ಅದರಂತೆ ಇವರನ್ನು ಕಳುಹಿಸಿ ರೇಶ್ಮೆ ಬೇಸಾಯ ದಲ್ಲಿ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳಬೇಕು ಎಂದು ಹೇಳುತ್ತೇನೆ. ಇವುಗಳನ್ನು ಜಾಸ್ತಿ ದಿವಸಗಳು ಸ್ಟೋರ್ ಮಾಡಿದರೆ ನಮಗೆ ಬಹಳ ಹೆಚ್ಚು ರೇಶ್ಮೆ ಉತ್ಪಾದನೆಯಾಗುತ್ತದೆ ಎಂದು ಬಿನ್ನಹ ಮಾಡುತ್ತೇನೆ. ಇನ್ನು ರೇಶ್ಮೆಯಿಂದ ಉತ್ಪಾದಿಸಿದಂತಹ ಬಟ್ಟೆಗಳ ಮೇಲೆ 8–6 ಪರ್ಸೆಂಟ್ ಟ್ಯಾಕ್ಸ್ ಹಾಕಬೇಕೆಂದು ಮಾಡಿದ್ದೀರಿ ? ಇತ್ತೀಚೆಗೆ ಕರ್ನಾಟಕ ರಾಜ್ಯದಲ್ಲಿ ಅಂಕಿಅಂಶಗಳ ಪ್ರಕಾರ 22 ಲಕ್ಷ ರೂಪಾಯಿ ಗೂಡಿನಿಂದ 60–65 ಕೋಟಿ ರೂಪಾಯಿ ಆಗುತ್ತದೆ. ಶ್ರೀಮಾನ್ ನಾಗಣ್ಣನವರು ಹೇಳಿದರು ತಮ್ಮ ಹೆಸರನ್ನು ದುರುಪಯೋಗಿಸಿ

ಕೊಂಡು ಹಣ ವಸೂಲಿ ಮಾಡಿದ್ದಾರೆಂದು, ರೇಶ್ಮೆ ನೂಲಿನ ಮೇಲೆ ಸೇಕಡ 1 ಪರ್ಸೆಂಟ್ ಹಾಕಿದರೂ ನಮ್ಮ ರಾಜ್ಯಸರ್ಕಾರಕ್ಕೆ ಸುಮಾರು 60-70 ಲಕ್ಷ ರೂಪಾಯಿ ಉತ್ಪತ್ತಿ ಬರುತ್ತದೆ ಎಂದು ಹೇಳಿದರು. ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಕೇವಲ 25 ಭಾಗ ರಾಜ್ಯದಲ್ಲಿ ಉಪಯೋಗವಾಗುತ್ತದೆ. ಉಳಿದದ್ದು ಬೇರೆ ರಾಜ್ಯಗಳಲ್ಲಿ 45-50 ಲಕ್ಷ ರೂಪಾಯಿ ಟ್ಯಾಕ್ಸ್ ರೂಪದಲ್ಲಿ ಆಗುತ್ತದೆ. ಇನ್ನು ಫ್ಯಾಬ್ರಿಕ್ಸ್ ನೂಲಿನ ಮೇಲೆ ಟ್ಯಾಕ್ಸ್ ಹಾಕಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸ್ಟೇಟ್ ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿ ಬಗ್ಗೆ ಹೇಳಬೇಕು. ರೀಲರ್ ಉದ್ದಿಮೆ ಚೆನ್ನಾಗಿ ಅಭಿವೃದ್ಧಿಯಾಗಬೇಕಾದರೆ ರೀಲರ್ಸ್ ಇರಬೇಕು ಫಿಲೇಚರ್ ಇರಬೇಕು. ರೈತ ಬೆಳೆಯನ್ನು ಜಾಸ್ತಿ ಬೆಳೆಯಬೇಕಾದರೆ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಏನು ಇದೆ ಅದು ಅಚ್ಚುಕಟ್ಟಾಗಿ ಕೆಲಸ ಮಾಡಿದರೆ ದುರ್ವ್ಯವಹಾರ ಆಗ ಮಾಡುವುದಕ್ಕೆ ಸಾಧ್ಯವಿಲ್ಲ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಬೇಕು ಅವರಿಗೆ ಕೂಡಲೇ ಫಿಲೇಚರ್ ಕಳುಹಿಸಿರುವುದಿಲ್ಲ 18 ಪರ್ಸೆಂಟ್ ಹಣ ಬಡ್ಡಿ ತೆಗೆದು ಕೊಳ್ಳುತ್ತಾರೆ. ಇದರಿಂದ 70-80 ಲಕ್ಷ ರೂಪಾಯಿ ಕೊಟ್ಟರೆ ಸಕಾಲದಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ನಾನು ಪ್ರಾರ್ಥನೆ ಮಾಡು ತ್ತೇನೆ ಅಲ್ಲಿಗೆ ಸ್ಪೆಷಲ್ ಆಡಿಟ್ ಕಳುಹಿಸಿ ಅಲ್ಲಿ ನಡೆಯುವ ಅವ್ಯವಹಾರವನ್ನು ತಡೆಗಟ್ಟಬೇಕು ಎಂದು ಹೇಳುತ್ತೇನೆ.

ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊನೆಯದಾಗಿ ಪ್ರಾರ್ಥನೆ ಮಾಡುತ್ತೇನೆ. ಶ್ರೀಮಾನ್ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗಲೇ ಈ ಇಲಾಖೆಯನ್ನು ಬೆಳಸದೇ ಹೋದರೆ ಇನ್ನು ಯಾರು ಬಂದರೂ ಕೂಡ ಈ ಇಲಾಖೆಯನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ತಮಗೆ ಕೈಜೋಡಿಸಿ ಹೇಳುತ್ತೇನೆ, ದಯವಿಟ್ಟು ಈ ಇಲಾಖೆ ಕಡೆ ಗಮನ ಹರಿಸಿ. ಇಲ್ಲದೇ ಹೋದರೆ ರೈತ ಶಾಪ ಹಾಕುತ್ತಾನೆ. ಇವರ ಮನೆ ಹಾಳಾಗ ಎಂದು ಮತ್ತು ಈ ಇಲಾಖೆ ಯವರ ಮನೆ ಹಾಳಾಗ ಎಂದು ಶಾಪ ಹಾಕುತ್ತಾನೆ ಆದುದರಿಂದ ಅವರಿಗೆ ಸರಿಯಾದ ಮೊಟ್ಟೆಯನ್ನು ಒದಗಿಸಿಕೊಟ್ಟು ಅವನ ಶಾಪವನ್ನು ತಪ್ಪಿಸಿಕೊಳ್ಳುವಂತೆ ಅವಕಾಶ ಮಾಡಿಕೊಡಿ ಎಂದು ತಿಳಿಸಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸು ತ್ತೇನೆ.

6-00 P. M.

*ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ):— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈವೊತ್ತು ಏನು ಒಂದು ಬೇಡಿಕೆಯನ್ನು ಮಂಡಿಸಿದ್ದಾರೆ, ಅದನ್ನು ಸಂಪೂರ್ಣವಾಗಿ ಸಪೋರ್ಟ್ ಮಾಡುತ್ತಾ ಮೊಟ್ಟಮೊದಲನೆಯದಾಗಿ

(ಶ್ರೀ ಕೆ. ಎನ್. ವೀರಪ್ಪಗೌಡ)

ಲೆಜಿಸ್ಲೇಚರ್ ಸೆಕ್ರೇಟರಿಯೇಟ್ ಬಗ್ಗೆ ಹೇಳುತ್ತೇನೆ. ಈಗಾಗಲೇ ಈ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ಬಗ್ಗೆ ಮಾನ್ಯ ಹೆಚ್. ಡಿ. ದೇವೇಗೌಡರು ಮತ್ತು ಶ್ರೀಮತಿ ಮಡಿಮನ್ ಅವರು ಏನು ಮಾತನಾಡಿದ್ದಾರೆ ಅದನ್ನು ಸಪೋರ್ಟ್ ಮಾಡುತ್ತೇನೆ. ಈ ಕೈಗಾರಿಕಾ ವಿಷಯದಲ್ಲಿ ಸ್ವಲ್ಪ ವಿಷಯವನ್ನು ಮಾತ್ರ ಹೇಳುತ್ತೇನೆ. ಈ ಕೈಗಾರಿಕಾ ಬಗ್ಗೆ ಹೇಳುವುದಾದರೆ ಈ ಕೈಗಾರಿಕೆಗಳನ್ನೆಲ್ಲಾ ಒಂದೇ ಕಡೆ ಕ್ರೋಢೀಕರಿಸತ್ತಿದ್ದೀರಿ. ನಾವು ಈ ಬಗ್ಗೆ ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇವೆ. ಬೆಂಗಳೂರಿನಲ್ಲಿ ಜನಸಂದಣಿ ಜಾಸ್ತಿ ಇದೆ. ಅಲ್ಲಿಗೇನೇ ಹೆಚ್ಚು ಕೈಗಾರಿಕೆಗಳು ಬರುವುದರಿಂದ ಪ್ರಜಾ ಸಂಖ್ಯೆಗೆ ತಕ್ಕಂತೆ ಜನಗಳ ಜೀವನದ ಮಟ್ಟವೂ ಜಾಸ್ತಿಯಾಗಿ ಪ್ರತಿಯೊಂದಕ್ಕೂ ಕೂಡ ಮುಷ್ಕರ ಮತ್ತು ಗಲಭೆಗಳು ಆಗುವುದಕ್ಕೆ ಕಾರಣವಾಗಿದೆ. ಆದುದರಿಂದ ಎಲ್ಲಾ ಜಿಲ್ಲೆಯ ಮುಖ್ಯ ಕೇಂದ್ರಗಳಲ್ಲೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ಆಗ ಮಾತ್ರ ಅನ್‌ಎಂಪ್ಲಾಯ್‌ಮೆಂಟ್ ಸಾಲ್ವ್ ಮಾಡುವುದರಿಂದ ಇದರಿಂದ ಒಂದು ಹೆಚ್ಚಿನ ಅನುಕೂಲವಾಗುತ್ತದೆ ಎಂದು ನಾನು ಸಾರಿ ಸಾರಿ ಹೇಳಿದ್ದೇನೆ. ಆದರೆ ಸರ್ಕಾರದವರು ಇನ್ನೂ ಅನೇಕ ಕಾರ್ಖಾನೆಗಳನ್ನು ಬೆಂಗಳೂರಿನಲ್ಲೇ ಮುಖ್ಯ ಕೇಂದ್ರವನ್ನಾಗಿ ಮಾಡಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರ ಮೂಲಕ, ಜನಸಂಖ್ಯೆ ಜಾಸ್ತಿ ಮಾಡುವುದರ ಮೂಲಕ ಅವರ ಜೀವನ ಮಟ್ಟ ಏರಿಹೋಗಿ ಬೆಲೆ ಏರಿಕೆ ಆಗುವುದಕ್ಕೆ ಇದೂ ಒಂದು ಕಾರಣ ಎಂದು ನಾನು ಹೇಳಬೇಕಾಗಿದೆ. ಅದರಲ್ಲೂ ಕೂಡ ಒಂದೇ ಕಡೆ ಕೈಗಾರಿಕೆಯನ್ನು ಕ್ರೋಢೀಕರಿಸಿದರೆ ಲೇಬರ್ ಪ್ರಾಬ್ಲಮ್ಸ್ ಏನು ಇದೆ ಅದು ಹೆಚ್ಚಾಗಿ ಕೈಗಾರಿಕೆಗಳಲ್ಲಿ ಉತ್ಪನ್ನ ಕಡಿಮೆಯಾಗಿ ನಾನಾ ರೂಪದಲ್ಲಿ ಬೆಲೆಗಳ ಏರಿಕೆಯೂ ಆಗುವುದಕ್ಕೆ ಇದೂ ಒಂದು ಕಾರಣ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಇನ್ನು ಎಂಪ್ಲಾಯ್‌ಮೆಂಟ್ ವಿಷಯ ತೆಗೆದುಕೊಂಡರೆ ಸ್ವಾಭಾವಿಕವಾಗಿ ಎಲ್ಲಿ ನೋಡಿದರೂ ಕೂಡ ಅದು ಫ್ಯಾಮಿಲಿ ಎಂಪ್ಲಾಯ್‌ಮೆಂಟ್ ಆಗಿದೆ. ಯಾವುದೇ ಫ್ಯಾಕ್ಟರಿಯಲ್ಲಿ ಒಬ್ಬ ಮನುಷ್ಯ ಎಂಪ್ಲಾಯ್‌ಮೆಂಟ್‌ಗೆ ಸೇರಿದರೆ ಅವನು ಅದರ ಒಳಗಿರುವ ಅಧಿಕಾರಿಗಳನ್ನು ಹೇಗೋ ಸರಿಮಾಡಿಕೊಂಡು ತನ್ನ ಅಣ್ಣತಮ್ಮಂದಿರಿಗೆ ಮತ್ತು ಇನ್ನು ಇತರ ಬಂಧುಗಳಿಗೆ ಸೇರಿಸಿ ಬಿಡುತ್ತಾರೆ. ಹೀಗಾಗಿ ನಿಜವಾಗಿಯೂ ಅನ್‌ಎಂಪ್ಲಾಯ್ ಆಗಿರತಕ್ಕಂಥವರಿಗೆ ಎಂಪ್ಲಾಯ್‌ಮೆಂಟ್ ಸಿಗುವುದು ಕಡಿಮೆಯಾಗುತ್ತಾ ಬಂದಿದೆ. ಆದುದರಿಂದ ಈವೊತ್ತು ಕೈಗಾರಿಕೆಗಳು ಏನು ಸ್ಥಾಪನೆ ಮಾಡುತ್ತೀರೋ ಅದನ್ನು ಬೇರೆ ಬೇರೆ ಕಡೆ ಸ್ಥಾಪನೆ ಮಾಡಿ ಯಾರು ನಿಜವಾಗಿಯೂ ಅನ್‌ಎಂಪ್ಲಾಯ್ ಆಗಿದ್ದಾರೆ ಅವರಿಗೆ ಕೆಲಸ ಸಿಗುವ ಹಾಗೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಶ್ರೀಮತಿ ಇಂದಿರಾ ಗಾಂಧಿಯವರೂ ಸಹ ಅನೇಕ ಸಾರಿ ಹೇಳಿದ್ದಾರೆ.

ಒಂದು ಫ್ಯಾಮಿಲಿಗೆ ಒಂದು ಎಂಪ್ಲಾಯ್‌ಮೆಂಟ್ ಸಿಗುವಂತೆ ಆಗಬೇಕು ಅಂತ. ಈಗ ಏನಾಗಿದೆ ಎಂದರೆ ಎಲ್ಲಾ ಕಾರ್ಖಾನೆಗಳನ್ನೂ ಕೂಡ ಬೆಂಗಳೂರಿನಲ್ಲೇ ಸ್ಥಾಪನೆ ಮಾಡಿರುವುದರಿಂದ ಒಂದು ಮನಾಪಲಿ ಇದ್ದ ಹಾಗೆ ಒಂದು ಫ್ಯಾಮಿಲಿ ಯಲ್ಲಿ 4-5 ಜನ ಇದ್ದರೆ ಅವರೆಲ್ಲಾ ಕೆಲಸಕ್ಕೆ ಸೇರಿಕೊಂಡು 4-5ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ ಹೆಸರಿಗೆ ಮಾತ್ರ ಎನ್. ಜಿ. ಓ. ಗಳು. ಅವರು ಮಾಡತಕ್ಕಂಥ ಗಲಭೆಗಳು ನೋಡಿದರೆ ಹೀಗೆ. ಸಂದರ್ಭ ಉಪಯೋಗಿಸಿ ಕೊಂಡು ರಾಜಕೀಯ ಮುಖಂಡರನ್ನು ಉಪಯೋಗಿಸಿಕೊಂಡು ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಮಾನ್ಯ ಶ್ರೀಮಾನ್ ಟಿ. ಆರ್.ಶಾಮಣ್ಣ ನವರು ಮಾತನಾಡುವಾಗ ಹೇಳಿದರು ಈ ಕಾರ್ಮಿಕ ಮುಖಂಡರು ಏನು ಇದ್ದಾರೆ ಇದರಲ್ಲಿ ರಾಜಕೀಯ ಕೈವಾಡ ಏನು ಇದೆ ಅದನ್ನು ತಡೆಗಟ್ಟಬೇಕು ಮತ್ತು ಫ್ಯಾಕ್ಟರಿಗಳಲ್ಲಿ ಹೆಚ್ಚು ಪ್ರೊಡಕ್ಷನ್ ಆಗುವಂತೆ ದೇಶದ ಒಂದು ಆರ್ಥಿಕ ಸ್ಥಿತಿ ಉತ್ತಮ ಮಾಡಬೇಕು ಎಂದು. ಯಾರಾದರೂ ಆಗಲಿ ವಿರೋಧಪಕ್ಷದ ನಾಯಕರನ್ನು ಕಂಡು ಮುಷ್ಕರ ಹೂಡಿದರೆ ಅವರ ಮನಸ್ಸಿನಲ್ಲಿ ನನಗೆ ಸಪೋರ್ಟ್ ಮಾಡತಕ್ಕಂಥಾವರು ಅಲ್ಲಿ ಇದ್ದಾರೆ ಎಂದು ತಿಳಿದುಕೊಳ್ಳುತ್ತಾರೆ. ಈ ರೀತಿ ಯಾಗಿ ನಮ್ಮ ದೇಶದಲ್ಲಿ ಒಂದು ಕಡೆ ಎಂಪ್ಲಾಯ್‌ಮೆಂಟ್ ಸಿಗುತ್ತಾ ಇಲ್ಲ, ಎಂಪ್ಲಾಯ್‌ಮೆಂಟ್ ಸಿಕ್ಕದವರು ತಮಗೆ ಕೊಡುವುದು ಸಾಲದು ಎನ್ನುವುದು ಇನ್ನೊಂದು ಕಡೆ. ನಾನು ಊರಿಗೆ ಹೋಗಿದ್ದೆ. ಅಲ್ಲಿ ತಾಲ್ಲೂಕು ಆಫೀಸಿಗೆ ಹೋದರೆ ಎಲ್ಲರೂ ಡೇರಾ ಹಾಕಿಕೊಂಡು ಕೂತಿದ್ದಾರೆ. ನಮ್ಮ ದೇಶದಲ್ಲಿ ಸಾಕಷ್ಟು ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್‌ನ್ನು ಸಾಲ್ವ್ ಮಾಡಬೇಕು ಎನ್ನು ವುದಾದರೆ ಕೈಗಾರಿಕೆಗಳನ್ನು ಜಿಲ್ಲಾ ಕೇಂದ್ರಗಳಿಗೆ ಸ್ವಲ್ಪ ಮಟ್ಟಿದಾದರೂ ಷಾಸಿ ಮಾಡಿದರೆ ಅಲ್ಲಿರತಕ್ಕಂಥಾವರಿಗೆ ಸ್ವಲ್ಪ ಎಂಪ್ಲಾಯ್‌ಮೆಂಟ್ ಸಿಗುತ್ತದೆ. ಬೆಂಗ ಳೂರಿನಲ್ಲಿ ಹೆಚ್ಚು ಕೈಗಾರಿಕೆಗಳನ್ನು ಬೆಳೆಸುವುದನ್ನು ಕಡಿಮೆ ಮಾಡಿದರೆ ಬೆಲೆ ಏರಿಕೆಯೂ ಕಡಿಮೆಯಾಗುತ್ತದೆ. ಇನ್ನು ಹೆಚ್ಚು ಮಾತನಾಡಲು ಅವಕಾಶ ಇಲ್ಲವಾದ್ದರಿಂದ ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾ ವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಸಚಿವರ ಬೇಡಿಕೆಯನ್ನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊಟ್ಟಮೊದಲನೆಯದಾಗಿ ಶಾಸಕಾಂಗಕ್ಕೆ ಸಂಬಂಧಪಟ್ಟ ಪ್ರಶ್ನೆ ಹೇಳುತ್ತೇನೆ, ಹೋದ ವರ್ಷ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರು ಇದೇ ಬೇಡಿಕೆಗಳ ಬಗ್ಗೆ ಉತ್ತರ ಕೊಡುವಾಗ ವರದಿಗಾರರಿಗೆ ಒಂದು ವಿಶೇಷ ಸಂಬಳ ಕೊಡಬೇಕು ಎಂದು ಹೇಳಿದಾಗ ಅದರ ಬಗ್ಗೆ ಆಶ್ವಾಸನೆ ಕೊಟ್ಟಿ ದ್ದರು. ಅದರ ಬಗ್ಗೆ ಇದುವರೆಗೂ ಸರಕಾರದವರು ಏನು ಕ್ರಮವನ್ನೂ ತೆಗೆದು ಕೊಂಡಿಲ್ಲ. ದಯವಿಟ್ಟು ಈಗಲಾದರೂ ಅದನ್ನು ಈಡೇರಿಸಿಕೊಡಬೇಕು ಎಂದು

(ಶ್ರೀ ಕಾಗೋಡು ತಿಮ್ಮಪ್ಪ)

ಹೇಳುತ್ತೇನೆ. ಜೊತೆಗೆ ನಮ್ಮ ಶಾಸಕಾಂಗವನ್ನು ಪ್ರತ್ಯೇಕ ಮಾಡಬೇಕು ಎನ್ನತಕ್ಕಂಥಾದ್ದು ಹಿಂದೆ ಒತ್ತಾಯ ಮಾಡಿದ್ದೇವೆ ಮತ್ತು ಈಗಲೂ ಒತ್ತಾಯ ಮಾಡುತ್ತೇವೆ. ಈಗಲಾದರೂ ಕೂಡ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಆದಷ್ಟು ಶೀಘ್ರವಾಗಿ ಪ್ರತ್ಯೇಕ ವಿಂಗ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರು ಕೊನೆ ಘಳಿಗೆಯಲ್ಲಿ ತಮ್ಮ ಖಾತೆ ಬದಲಾವಣೆ ಆದಾಗ ನಮ್ಮ ಶಾಸಕರಿಗೆ ಬಾಡಿಗೆ ಜಾಸ್ತಿ ಮಾಡಿದ್ದಾರೆ. ಈ ಬಗ್ಗೆ ನಾನು ಹೇಳಬೇಕಾದರೆ ನಮಗೆ ಇಷ್ಟು ಸ್ಕ್ವೇರ್ ಫೀಟ್‌ಗೆ ಇಷ್ಟು ಕೊಡಬೇಕು ಅಂತ ಇಟ್ಟು ಹಾಗೆ ಮಂತ್ರಿಗಳ ಮನೆಗೂ ಕೂಡ ಇಷ್ಟು ಸ್ಕ್ವೇರ್ ಫೀಟ್‌ಗೆ ಇಷ್ಟು ಕೊಡಬೇಕು ಎಂದು ಇಟ್ಟುಬಿಡಿ. ನಾವು ಕೊಟ್ಟ ಹಾಗೆ ಅವರೂ ಕೊಡಲಿ. ಈ ಪ್ರಕಾರ ಕಾಂಪ್ರಮೈಸ್‌ಗೆ ಬರೋಣವೇ ?

ಶ್ರೀ ಡಿ. ದೇವರಾಜ ಅರಸ್ :—ಹಿಂದೆ ಪಾರ್ಲಿಮೆಂಟ್‌ನಲ್ಲಿ ಒಂದು ಬಿಲ್ ತಂದಿದ್ದರು ಏನಂತ ಅಂದರೆ ಅವರ ಸದಸ್ಯತ್ವವನ್ನು ಹೋಲ್ ಟೈಂ ಸದಸ್ಯತ್ವ ಮಾಡಿ ಅಂತ. ಯಾವಾಗಲೂ ಶಾಸಕರು ಶಾಸನ ಸಭೆ ಸೇರಿ ಕೆಲಸ ಮಾಡುತ್ತಾ ಇರುವಾಗ ಮಾತ್ರ ಅವರು ಬಾಡಿಗೆ ಕೊಡತ್ತಾ ಇಲ್ಲ. ಆದರೆ ಶಾಸಕರಾದವರು ಯಾವಾಗಲೂ ಇಲ್ಲೇ ಇರುವುದಕ್ಕೆ ಪ್ರಯತ್ನ ಪಡುತ್ತಾ ಇದ್ದಾರಲ್ಲಾ ಅವರು ಬಾಡಿಗೆ ಹೆಚ್ಚಾಗಿ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :—ಮಂತ್ರಿಗಳ ಮನೆ ಏನು ಇದೆ ಅಲ್ಲಿ ಅವರ ಮಹಡಿ ಮೇಲೆ ಇಬ್ಬಿಬ್ಬರು ಮಂತ್ರಿಗಳು ಇರಬಹುದಲ್ಲಾ.

ಶ್ರೀ ಹೆಚ್. ಡಿ. ದೇವೇಗೌಡ :—ಶಾಸಕರ ಅನುಭವ ಮಾನ್ಯ ಮುಖ್ಯ ಮಂತ್ರಿಗಳಿಗೆ ನಮಗಿಂತಲೂ ಹೆಚ್ಚಾಗಿ ಗೊತ್ತಿದೆ.

ಶ್ರೀ ಡಿ. ದೇವರಾಜ ಅರಸ್ :—ನಾವು ಶಾಸಕರಾಗಿದ್ದಾಗ ಬೆಂಗಳೂರಿಗೆ ಹೆಚ್ಚು ಕೆಲಸ ಇದ್ದರೆ ಮಾತ್ರ ಬರುತ್ತಿದ್ದೆವು. ಬಾಕಿ ಕಾಲದಲ್ಲಿ ಹಳ್ಳಿಯಲ್ಲೇ ಇರುತ್ತಿದ್ದೆವು. ಈಗ ಎಲ್ಲಾ ಶಾಸಕರೂ ಬೆಂಗಳೂರಿನಲ್ಲೇ ಇರುವುದಾದರೆ ಆವಾಗ ಏನು ಮಾಡುವುದು ?

ಶ್ರೀ ಕಾಗೋಡು ತಿಮ್ಮಪ್ಪ :- ಕೊನೇಪಕ್ಷ ಮಂತ್ರಿಗಳ ಮಹಡಿ ಬಿಟ್ಟು ಕೊಟ್ಟರೆ ಅಲ್ಲೂ ಇನ್ನೊಬ್ಬ ಮಂತ್ರಿಗಳು ಇರಬಹುದು. ನಾನು ನೋಡಿದ್ದೇನೆ.

ಶ್ರೀಮಾನ್ ಎಸ್. ಎಂ. ಕೃಷ್ಣ ಅವರ ಮನೆ, ಶ್ರೀಮಾನ್ ಪಾಟೀಲರ ಮನೆ, ಶ್ರೀಮಾನ್ ಎಸ್. ಹುಚ್ಚಮಾಸ್ತಿಗೌಡರ ಮನೆ ಈ ಮನೆಗಳು ಬಹಳ ದೊಡ್ಡದಾಗಿವೆ. ಇವರೆಲ್ಲಾ ಬಡತನ ಜೀವನ ಮಾಡುವುದಕ್ಕೆ ತಯಾರಾಗಿದ್ದರೆ ನಾವೂ ಕೂಡ ತಯಾರಾಗಿದ್ದೇವೆ.

ಶ್ರೀ ಡಿ. ದೇವರಾಜ ಅರಸ್ :—ಇವೇನೂ ನಮ್ಮ ಮನೆಗಳಲ್ಲ. ನಮ್ಮ ಮನೆಗಳನ್ನು ನೋಡಿದರೆ ಈವೊತ್ತು ಆ ಹಳ್ಳಿಯಲ್ಲಿ ಇರೋಣ ಅನಿಸುತ್ತೆ. ಇದು ಸರ್ಕಾರೀ ಮನೆ.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ತಾವು ಅಲಂಕಾರದ ಮನೆಗಳಲ್ಲಿ ಸುಖವನ್ನು ಎಷ್ಟು ಅನುಭವಿಸುತ್ತೀರಿ ಅಷ್ಟು ಬೇಡ, ತೀರಾ ಸಣ್ಣ ಪ್ರಮಾಣದಲ್ಲಿ ಆದರೂ ಮಾಡಿಕೊಡಿ.

ಶ್ರೀ ಡಿ. ದೇವರಾಜ ಅರಸ್.—ನನಗೆ ಸಿಮೆಂಟ್, ಗಾರೆ ಮನೆಗಳಲ್ಲಿ ಬೇಸಿಗೆ ಬಂದಿತು ಎಂದರೆ ಮಲಗಿಕೊಳ್ಳುವುದಕ್ಕೇ ಆಗುವುದಿಲ್ಲ. ನಮ್ಮ ಹಳ್ಳಿಗಳಲ್ಲಿ ಹಾಯಾಗಿ ನಿದ್ರೆಬರುತ್ತಿತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ನಮ್ಮ ಶಾಸಕಾಂಗದಲ್ಲಿ ಅನೇಕ ಮಸೂದೆಗಳು ಅಂಗೀಕಾರವಾಗುತ್ತವೆ. ನಮಗೆ ನಿಯಮಾವಳಿಗಳನ್ನು ಮಾಡತಕ್ಕ ಕಾರ್ಯ ಶಾಸನದ ವ್ಯಾಪ್ತಿಯಲ್ಲಿ ಇದೆ. ಆ ನಿಯಮಗಳು ರಚನೆಯಾದಾಗ ಅನೇಕ ಸಾರಿ ಅದನ್ನು ಪರಿಶೀಲನೆ ಮಾಡುವುದಕ್ಕೆ ಅಥವಾ ತಿದ್ದುಪಡಿ ಮಾಡುವುದಕ್ಕೆ ನಮ್ಮ ಶಾಸಕರಿಗೆ ಸಾಕಷ್ಟು ಅವಕಾಶವಿಲ್ಲ. ಆದುದರಿಂದ, ಅದಕ್ಕೆ ಅವಕಾಶ ಸಿಕ್ಕುವ ರೀತಿಯಲ್ಲಿ ಎಲ್ಲಾ ನಿಯಮಗಳನ್ನೂ ಸಕಾಲದಲ್ಲಿ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಕೈಗಾರಿಕೆಗೆ ಸಂಬಂಧಪಟ್ಟ ವಿಷಯ. ಸರಕಾರೀ ಕೈಗಾರಿಕಾ ಕ್ಷೇತ್ರದಲ್ಲಿ ಹೇರಳವಾಗಿ ಬಂಡವಾಳವನ್ನು ತೊಡಗಿಸಿ, ಕಾರ್ಖಾನೆಗಳನ್ನು ಮತ್ತು ಸಂಸ್ಥೆಗಳನ್ನು ನಡೆಸುತ್ತಿದ್ದಾರೆ, ಆ ಸಂಸ್ಥೆಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ದುರ್ಬಲ ವರ್ಗದವರನ್ನು ಬಹಳ ದೂರ ಇಟ್ಟಿದ್ದಾರೆ ಎಂದು ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಇತ್ತೀಚೆಗೆ ಕಮಿಟಿ ಆನ್ ದಿ ವೆಲ್‌ಫೇರ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ನಮ್ಮ ಕೈಗಾರಿಕಾ ಸಚಿವರಿಗೆ ಸಂಬಂಧಪಟ್ಟಂತೆ, ಕೆಲವು ಸಂಸ್ಥೆಗಳು ಇವೆ ಅದರಲ್ಲಿ ಎಷ್ಟು ಮಟ್ಟಿಗೆ ಹರಿಜನ-ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಟ್ಟಿದ್ದಾರೆ ಎಂದು ಈ ಸಂದರ್ಭದಲ್ಲಿ ಅವರನ್ನು ಕೇಳುತ್ತೇನೆ. ಇದರ ಬಗ್ಗೆ ನಾನು ಹಿಂದಿ

(ಶ್ರೀ ಕಾಗೋಡು ತಿಮ್ಮಪ್ಪ)

ನಿಂದಲೂ ಕೇಳುವುದು ಬೇಡ; ಕೇಳುವುದಕ್ಕೆ ಹೋದರೆ ಕೆಲವರಿಗೆ ಸಿಟ್ಟು ಬರುತ್ತದೆ. ರಾಜ್ಯಾಂಗಬದ್ಧವಾಗಿ, ಹರಿಜನ-ಗಿರಿಜನರಿಗೆ ಏನೇನು ಸೌಲಭ್ಯಗಳನ್ನು ಒದಗಿಸಿ ಕೊಡಬೇಕೋ, ಅವೆಲ್ಲ ಸೌಲಭ್ಯಗಳನ್ನೂ ಒದಗಿಸಿ ಕೊಡಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ. ಇದರ ಬಗ್ಗೆ ಸರಕಾರವನ್ನು ಹೊಣೆ ಮಾಡತಕ್ಕದ್ದಲ್ಲ ಮೊದಲಿನಿಂದಲೂ ನಡೆದುಕೊಂಡು ಬಂದ ಪರಂಪರೆ ಇದು. ಇದರ ಬಗ್ಗೆ ನಾನು ಒಂದೊಂದಾಗಿ ಹೇಳಬೇಕಾಗುತ್ತದೆ. ಅನೇಕ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸರಕಾರದ ಪ್ರತಿನಿಧಿಗಳು ನಮಗೆ ಸರಕಾರದಿಂದ ನಿಯಮಾವಳಿಗಳು ಬಂದಿಲ್ಲ, ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿಕೊಂಡಿಲ್ಲ, ಇನ್ನು ಮುಂದೆ ಮಾಡುತ್ತೇವೆ ಎನ್ನುವ ರಾಗವನ್ನೇ ಈ ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ.

Karnataka Finance Corporation :

"From the figures furnished to the Committee it is evident that the Corporation has not cared to give sufficient representation to the SC/ST and further the stat of affairs is very unsatisfactory."

Mysore Chrome Tanning Ltd :

"As seen from the above Table the percentage of representation for the SC/ST appears to be high but it is due to the workers belonging to the factory-side; but there is n representation at all in the administrative side "

Karnataka State Handicrafts Development Board :

"The Committee are unhappy to note that the representation for the SC/ST in the services of the Handicrafts Development Board is negligible. The Board should take note of this poor representation for the SC/ST in the services of the Corporation."

Mysore Iron & Steel :

"The Committee were informed by the employees that in many cases the management generally in

saying that the SC/*ST* candidates who appeared in the interview were not upto the mark. In this connection the Committee would like to point out that the Government of India has issued orders that thec ases of S /ST candidates should be considered even if the candidates are below the expected level."

ಹಾಗೆ ಎನ್.ಜಿ.ಇ ಎಫ್., ರೆಮ್ಕೋ, ಮೈಸೂರು ಸಕ್ಕರೆ ಕಾರ್ಖಾನೆ, ಸೆಂಟ್ರಲ್ ವರ್ಕ್‌ಶಾಪ್, ಗವರ್ನ್‌ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟ್ರಿ, ಸೋಪ್‌ಫ್ಯಾಕ್ಟರಿ ಖಾದಿ ಮಂಡಲಿ, ಕರ್ನಾಟಕ ಹ್ಯಾಂಡ್ ಕ್ರಾಫ್ಟ್—ಇವೆಲ್ಲಾ ನಮ್ಮ ಕೈಗಾರಿಕಾ ಸಚಿವರಿಗೆ ಸೇರಿರತಕ್ಕದ್ದಾಗಿದೆ. ಆದರೆ, ಇಷ್ಟರಲ್ಲೂ ಕೂಡ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಟ್ಟಿಲ್ಲ ಎಂದು ಹೇಳುತ್ತೇನೆ. ದೊಡ್ಡ ಪ್ರಮಾಣದ ಬಂಡವಾಳವನ್ನು ತೊಡಗಿಸಿ, ಸಮಾಜದ ಅತ್ಯಂತ ದುರ್ಬಲ ವರ್ಗದವರಿಗೆ ಈ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಕೊಡಲಿಲ್ಲ ಎಂದರೆ, ಯಾರ ಉದ್ಧಾರಕ್ಕಾಗಿ ಈ ಸಂಸ್ಥೆಗಳನ್ನು ಸ್ಥಾಪನೆ ಮಾಡಿದಿರಿ ಎಂದು ನಾನು ಕೇಳುತ್ತೇನೆ ಮಾನ್ಯ ವೀರಪ್ಪಗೌಡರು ಬಹಳ ಕಷ್ಟಪಟ್ಟು ಅವರ ಮಗನಿಗೆ ಒಂದು ರೆಪ್ರಜಂಟೇಷನ್ ಗಿಟ್ಟಿಸಿಕೊಂಡರು ಆದುದರಿಂದ, ಮಾನ್ಯ ಕೈಗಾರಿಕಾ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡುತ್ತಾ, ದಟ್ಟ ದಾರಿದ್ರ್ಯ ಸ್ಥಿತಿಯಲ್ಲಿರತಕ್ಕ ಈ ಹಿಂದುಳಿದ ವರ್ಗದವರಿಗೆ ಈ ಸಂಸ್ಥೆಗಳಲ್ಲಿ ಬಹಳ ನಿಷ್ಠೆಯಿಂದ ಅವರಿಗೆ ಅವಕಾಶ ಕಲ್ಪಿಸಿಕೊಡಿ ಎಂದು ಹೇಳುತ್ತೇನೆ. ಭದ್ರಾವತಿಯಲ್ಲಿ ಒಂದು ಐರನ್ ಮತ್ತು ಸಿಮೆಂಟ್ ಕಾರ್ಖಾನೆ ಇರುವುದರಿಂದ, ಶಿವಮೊಗ್ಗ ಜಿಲ್ಲೆಯನ್ನು ಕೈಗಾರಿಕೆಗಳಲ್ಲಿ ಹಿಂದುಳಿದ ಪ್ರದೇಶವೆಂದು ಮಾಡಿಲ್ಲ ಇವತ್ತಿನ ದಿವಸ ಸಾಗರ, ಸೊರಬ, ಹೊಸನಗರ ಮತ್ತು ತೀರ್ಥಹಳ್ಳಿ ಈ ಪ್ರದೇಶದಿಂದ ತಮ್ಮ ಕಬ್ಬಿಣ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ ಮತ್ತು ಕಾಗದದ ಕಾರ್ಖಾನೆಗಳಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವುದಾದರೆ, ಒಂದೊಂದು ತಾಲೂಕಿನಲ್ಲಿ ಸುಮಾರು ಹತ್ತು ಜನರಿಲ್ಲ. ಅಲ್ಲಿರತಕ್ಕವರಲ್ಲಿ ಮಂಡ್ಯಾ ಜಿಲ್ಲೆಯವರೇ ಹೆಚ್ಚು ಇದ್ದಾರೆ. ಭದ್ರಾವತಿಯವರೂ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ :—ನಾಗಮಂಗಲದಲ್ಲಿ 3-4 ವರ್ಷ ಮಳೆಯಾಗದೇ ಅಲ್ಲಿಗೆ ವಲಸೆ ಹೋದರು. ಆದರೆ, ಆ ಫ್ಯಾಕ್ಟರಿಯಲ್ಲಿ ಮಂಡ್ಯದವರೇ ತುಂಬಿದ್ದಾರೆ ಎಂದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ :—ಬೇಕಾದರೆ ಕಂಪೇರ್ ಮಾಡಿ. ನಮ್ಮ ಮಲೆನಾಡು ಪ್ರದೇಶ ಕೂಡ ಹಿಂದುಳಿದಿರತಕ್ಕದ್ದು; ಮಾನ್ಯ ಉಪಾಧ್ಯಕ್ಷರ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಜನರು ಇದರಲ್ಲಿ ಎಷ್ಟು ಇದ್ದಾರೆ? ಇದು ಹೇಗೆ ಆಗಿದೆ ಎಂದರೆ ಮಕ್ಕಳು ಹುಣಸೆ ಹುಳಿ ಹಿಂಡಿಕೊಂಡು ಇದ್ದರೆ, ದೂರದಲ್ಲಿರತಕ್ಕ ಮಕ್ಕಳು ಬಾ

ಶ್ರೀ ಕಾಗೋಡು ತಿಮ್ಮಪ್ಪ)

ಯಲ್ಲಿ ನೀರು ಸುರಿಸಿಕೊಂಡು ಕುಳಿತು ಇರುತ್ತಾರೆ. ಆ ರೀತಿ ಆಗಿದೆ. ಆದುದರಿಂದ, ಈ ಒಂದು ದೃಷ್ಟಿಯಿಂದ, ಹಿಂದುಳಿದಿರತಕ್ಕವರಿಗೆ ಅಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಕೊಡುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸ್ಟೋರ್ ಪರ್ಚೇಸ್‌ಗಳ ಸಂಬಂಧಪಟ್ಟ ವಿಷಯ ಹೇಳುವುದಾದರೆ, ಪೈಪ್ಸ್ ಮತ್ತು ಟ್ಯೂಬ್ಸ್ ಖರೀದಿಯಲ್ಲಿ ಬಿಗ್ ರ್ಯಾಕೆಟ್ ನಡೆದಿದೆ. ಸ್ಟೆವರ್ಡ್ ಅಂಡ್ ಲಾಯಡ್ಸ್, ಮದರಾಸಿನವರು 220 ರೂಪಾಯಿ ಕಡಿಮೆ ಬೆಲೆಗೆ ಕೊಡುತ್ತೇವೆ ಎಂದು ಹೇಳಿದರೂ ಕೂಡ 260 ರೂಪಾಯಿ ದರದಲ್ಲಿ ನೆಗೋಷಿಯೇಟ್ ಮಾಡಿ ಸದರ್ನ್ ಟ್ಯೂಬ್ಸ್ ಅಂಡ್ ಪೈಪ್ಸ್ ಕಂಪೆನಿಯಿಂದ ಲಕ್ಷಾಂತರ ರೂಪಾಯಿಗಳನ್ನು ಪಡೆದಿದ್ದಾರೆ. ಅಷ್ಟೇ ಅಲ್ಲದೆ, ಗುಲ್ಬರ್ಗಾದ ಎಕ್ಸಿಕ್ಯೂಟಿವ್ ಇಂಜಿನೀಯರ್ ಅದೇ ಪೈಪನ್ನು ಒಂದು ಮೀಟರ್‌ಗೆ 136 ರೂಪಾಯಿಗೆ ಕೊಡತಕ್ಕವರು ಬಂದಿದ್ದಾರೆ ಎಂದು ಹೇಳಿದಾಗ, ಅದನ್ನು ನೋಡದೆ, ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ತೋರಿಸದೆ, ಮೀಟರಿಗೆ 265 ರೂಪಾಯಿಗೆ ಕೊಡುವವರ ಹತ್ತಿರ ಕೊಂಡುಕೊಂಡಿದ್ದಾರೆ. ಇದರ ಬಗ್ಗೆ ಸರಕಾರದ ಕಾರ್ಯದರ್ಶಿಯವರೂ ಎಕ್ಸ್‌ಪ್ಲೇನೆಷನ್ ಕೇಳಿದರೂ ಕೂಡ, ಅದರ ಬಗ್ಗೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಈ ಪೈಪ್‌ಗಳ ವ್ಯವಹಾರದಲ್ಲಿ ಅವ್ಯವಹಾರ ನಡೆದಿದೆ; ಲಕ್ಷಾಂತರ ರೂಪಾಯಿ ದುರ್ವ್ಯಯವಾಗಿದೆ. ಇಬ್ಬರು 136 ರೂಪಾಯಿಗೆ ಕೊಡುತ್ತೇವೆ ಎಂದು ಮುಂದೆ ಬಂದಿದ್ದರೂ ಕೂಡ, 265 ರೂಪಾಯಿಗೆ ಕೊಡುವವರ ಹತ್ತಿರ ಕೊಂಡುಕೊಂಡಿರುವುದು ಸ್ಟೋರ್ ಪರ್ಚೇಸ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯುತ್ತಾ ಇರುವುದು ಅನ್ಯಾಯದ ಪರಮಾವಧಿ ಎಂದು ಹೇಳುತ್ತೇನೆ.

ಜೊತೆಗೆ ಸುಮಾರು 1500 ರೂಪಾಯಿಗಳ ಸ್ಟೇನ್‌ಲೆಸ್ ಸ್ಟೀಲ್‌ನ ಕೋಟಾವನ್ನು ಕೊಟ್ಟಿದ್ದಾರೆ. ಇದು 3 ವರ್ಷಗಳ ಅವಧಿಯಲ್ಲಿ ಕೊಟ್ಟಿರತಕ್ಕಂಥದ್ದು. ಇದನ್ನು ನಾವು ಕಳೆದ ಸಾರಿ ಪ್ರಸ್ತಾಪ ಮಾಡಿದ್ದೇವೆ ಮತ್ತು ಇದನ್ನು ವಿಚಾರ ಮಾಡಿ ಅದರ ವರದಿಯನ್ನು ಶಾಸನ ಸಭೆಯ ಮುಂದಿಡುವುದಾಗಿ ತಾವು ಭರವಸೆಯನ್ನು ಕೊಟ್ಟಿದ್ದೀರಿ. ಇವತ್ತಿನವರೆಗೂ ಆ ಒಂದು ವರದಿ ಬರಲಿಲ್ಲ. ಇವತ್ತು ನಾನು ಕೇಳುತ್ತೇನೆ, ತಾವು ಅದಕ್ಕೆ ಉತ್ತರವನ್ನು ಹೇಳಿಬಿಡಬಹುದು ಆದರೆ ಆ ವರದಿಯನ್ನು ಸಭೆಯ ಮುಂದಿಟ್ಟು ಚರ್ಚೆಗೆ ಅವಕಾಶವನ್ನು ಮಾಡಿ ಕೊಡಬೇಕು ಒಂದು ವೇಳೆ ಹಾಗೆ ಮಾಡದಿದ್ದರೆ ನಾವು ಈ ಶಾಸನ ಸಭೆಯನ್ನು ಬಿಟ್ಟು ಹೋಗುವುದಿಲ್ಲ. ತಾವು ಇದಕ್ಕೆ ಉತ್ತರವನ್ನು ಕೊಟ್ಟೇ ಮುಂದಕ್ಕೆ ಹೋಗಬೇಕು, ಇಲ್ಲದಿದ್ದರೆ ತಮಗೆ ಮುಂದಕ್ಕೆ ಹೋಗುವುದಕ್ಕೆ ಅವಕಾಶವನ್ನು ಮಾಡಿ ಕೊಡುವುದಿಲ್ಲ. ಇದರಲ್ಲಿ ಭಯಂಕರ ರಾಕೆಟ್ ಇದೆ. ನಮ್ಮ ಊರಿನಲ್ಲಿ ಆದಂಥ ಒಂದು

ಪ್ರಕರಣ ಹೇಳುತ್ತೇನೆ. ಒಬ್ಬ ತನಗೆ ಅಲಾಟ್ ಆಗಿದ್ದಂಥ ಕೋಟಾವನ್ನು ಮದ್ರಾಸ್‌ನಲ್ಲಿಯೇ ಮಾರಾಟ ಮಾಡಿಕೊಂಡು ಅಲ್ಲಿಗೆ ಬಂದಿದ್ದಾನೆ, ಅಕಸ್ಮಾತ್ ಆ ಒಂದು ಕವರ್ ನನಗೆ ತಲುಪಿಬಿಟ್ಟಿತ್ತು. ಇದರಿಂದ ಅವನಿಗೆ 75 ಸಾವಿರ ರೂಪಾಯಿಗಳ ಲಾಭವಾಗಿದೆ ಆದುದರಿಂದ ಇವತ್ತು ವರದಿಯನ್ನು ಅದರ ಬಗ್ಗೆ ನೀಡಬೇಕು. ಕಳೆದ ಸಾರಿ ಪೇಪರ್‌ನ ದರ ಏನಿತ್ತು ಅದು ಈಗ ಬಿದ್ದು ಹೋಗಿದೆ ತಾವು ಯಾರು ಯಾರಿಗೆ ಕಳೆದ ಸಾರಿ ಕೊಟ್ಟಿದ್ದೀರಿ, ಅದೇ ಪ್ರಮಾಣದಲ್ಲಿ ಅವರ ತಲೆಗೆ ಪೇಪರನ್ನು ಕಟ್ಟಬೇಕು. ಪೇಪರ್‌ನಿಂದ ಲಾಭ ಮಾಡಿಕೊಳ್ಳುವುದಕ್ಕೆ ಯಾರು ಯಾರು ತೆಗೆದುಕೊಂಡಿದ್ದರೋ, ಈಗ ಪೇಪರ್‌ನ ಬೆಲೆ ಕಡಿಮೆಯಾದಾಗ ಹೆಚ್ಚು ಮುತುವರ್ಜಿಯನ್ನು ವಹಿಸಲಿಲ್ಲವೋ ಅಂಥ 10 ಜನರ ತಲೆಗೂ ಕಟ್ಟಿ ದುಡ್ಡನ್ನು ವಸೂಲು ಮಾಡಬೇಕು. ಹಾಗೆಯೇ ಇವತ್ತು ಐರನ್. ಅಧ್ಯಕ್ಷರೇ, ಈ ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ ಹೆಚ್ಚು ಜನಕ್ಕೆ ಐರನ್ ಸ್ಟೀಲ್ ಕೊಟ್ಟಿದ್ದೀರಿ. ತಾವು ಬಂದ ಮೇಲೆ ಏನು ಹೇಳಿದಿರಿ ನಾವು ನಿರುದ್ಯೋಗಿ ವಿದ್ಯಾವಂತರಿಗೆ ಅವರಿಗೆ ಎಲ್ಲಾ ಸಹಾಯ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆಂದು ಹೇಳಿದಿರಿ. ಇವತ್ತು ಕಬ್ಬಿಣದ ದರ ಕಡಿಮೆಯಾದ ಕೂಡಲೇ ಯಾರು ತೆಗೆದುಕೊಳ್ಳಲು ಇಚ್ಛೆಪಡುತ್ತಿಲ್ಲವೋ, ಅದೇ ಹಿಂದೆ ಬೆಲೆ ಜಾಸ್ತಿ ಇದ್ದಾಗ ತೆಗೆದುಕೊಳ್ಳಲು ಇಚ್ಛೆಪಟ್ಟಿದ್ದರೋ ಅಂಥವರ ತಲೆಗೆ ಕಬ್ಬಿಣವನ್ನು ತಲೆಗೆ ಕಟ್ಟಿರಿ, ಇವತ್ತಿನ ದಿವಸ ಇದರಿಂದ ಲಕ್ಷಾಂತರ ರೂಪಾಯಿ ಹಾನಿಯಾಗುವುದನ್ನು ತಪ್ಪಿಸುವುದಕ್ಕಾಗಿ ಆ 10 ಜನರ ತಲೆಗೆ ಹಾಕಿ ಕಟ್ಟಿರಿ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ ಅದು ಲೋಕ ವಸ್ತ್ರ, ತಾವು ಈ ಲೋಕ ವಸ್ತ್ರಗಳ ಘಟಕದ ಉದ್ಘಾಟನೆ ಮಾಡುವುದಕ್ಕೆ ಹೋದಾಗ ಬಹಳ ಹೊಗಳಿ, ಲೋಕ ವಸ್ತ್ರಗಳ ಉದ್ಘಾಟನೆ ಮಾಡಿದ್ದೀರಿ. ಆದರೆ ತಾವು ಇದನ್ನು ಪ್ರತಿಯೊಂದು ಹಳ್ಳಿಯಲ್ಲೂ ಮಾಡಬೇಕು. ಹಾಗೆ ಮಾಡಬೇಕಾದರೆ 40 ಲಕ್ಷ ರೂಪಾಯಿಗಳ ಬಂಡವಾಳವೇನಿದೆ, ಅಷ್ಟರಿಂದಲೇ ಮಾಡಲು ಸಾಧ್ಯವೇ ಎಂಬುದನ್ನು ದಯವಿಟ್ಟು ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ಇವತ್ತು ಲೋಕ ವಸ್ತ್ರದ ಘಟಕದಲ್ಲಿ ಚರಕಗಳು ಏನಿವೆ, ಹೊಸದಾಗಿ ಡಿಸೈನ್ ಮಾಡಿದ್ದಾರೆ, ಅವು ಬಹಳ ಉತ್ತಮವಾಗಿವೆ. ಆದುದರಿಂದ ಅವನ್ನು ಪ್ರತಿಯೊಂದು ಗ್ರಾಮ ಪಂಚಾಯಿತಿಗಳ ಬಳಿಯಲ್ಲೂ ಕೂಡ ಈ ಸಣ್ಣ ಬಂಡವಾಳವನ್ನು ಹಾಕಿ ಉದಾಹರಣೆಗೆ 5 ಸಾವಿರನೋ 10 ಸಾವಿರನೋ ಇಂಥಿಂಥ ಕಡೆಗೆ ಹಾಕಿ ಮಾಡುವುದಕ್ಕೆ ಯೋಚನೆ ಮಾಡಬೇಕೇ ವಿನಹ ಲೋಕ ವಸ್ತ್ರ ಎಂದು ಹೇಳಿ 40 ಲಕ್ಷ ರೂ ಗಳ ಒಂದೇ ಘಟಕ ಮಾಡುವುದರಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ಅಂಥ 10 ಘಟಕಗಳನ್ನು ಮಾಡಬೇಕಾದರೆ 10 ವರ್ಷಗಳೇ ಬೇಕಾದೀತು. ಇಂಥದ್ದನ್ನು ಮಾಡದನೇ ಇವತ್ತು ಏನೂ ಇಲ್ಲದೇ ಇರತಕ್ಕಂಥ ಒಬ್ಬ ದಟ್ಟ ದಾರಿದ್ರ್ಯನಾಗಿರತಕ್ಕಂಥವನು 1 ರೂಪಾಯಿ ದುಡಿದು ಜೀವನ ಮಾಡತಕ್ಕಂಥವನ ಮಟ್ಟಿಗಾದರೂ ಇಂಥ ಸಣ್ಣ ಘಟಕಗಳಿಂದ ಉದ್ಯೋಗವನ್ನು ಒದಗಿಸಬೇಕು ಎಂದು ಪೂಜ್ಯ

(ಶ್ರೀ ಕಾಗೋಡು ತಿಮ್ಮಪ್ಪ)

ಮಹಾತ್ಮಾ ಗಾಂಧಿಯವರೇ ಹೇಳಿದ್ದಾರೆ. ಇಂಥ ಸಣ್ಣ ಘಟಕಗಳನ್ನು, ಕೈಗಾರಿಕೆಗಳನ್ನು ವಿಸ್ತರಣ ಮಾಡುವುದಕ್ಕೆ ಒಂದು ವಿಶೇಷವಾದಂಥ ವ್ಯವಸ್ಥೆಯನ್ನು ಕೈಗೊಳ್ಳಲು ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಂಡು, ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಆರ್. ರಾಚೇಗೌಡ (ಹನೂರು).—ಸನ್ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳ ಬಗ್ಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಈ ರೇಷ್ಮೆ ಕೈಗಾರಿಕೆಗಳ ಬಗ್ಗೆ ಮಾತ್ರ ನಾನು ನನ್ನ ಮಾತನ್ನು ಸೀಮಿತಗೊಳಿಸಲಿಚ್ಛಿಸುತ್ತೇನೆ. ಈಗಾಗಲೇ ಮಾನ್ಯ ಮಿತ್ರರಾದಂಥ ಶ್ರೀಮಾನ್ ವೆಂಕಟಪ್ಪನವರು ಮತ್ತು ಶ್ರೀ ಪುಟ್ಟಸ್ವಾಮಿ ಗೌಡರು ಕೂಡ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನಾದರೂ ಹೇಳತಕ್ಕಂಥ ವಿಷಯವಿಷ್ಟೇ ಸುಮಾರು 20ಲಕ್ಷ ಜನ ಈ ಕೈಗಾರಿಕೆಯಲ್ಲಿ ನಿರತರಾಗಿರತಕ್ಕಂಥವರಿದ್ದರೂ ಕೂಡ ಸಾಕಷ್ಟು ಇದರ ಬಗ್ಗೆ ಸರ್ಕಾರ ಗಮನವನ್ನು ಹರಿಸಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಕಾರಣವೇನೆಂದರೆ ಬಹುಶಃ ನಮ್ಮ ಮಾನ್ಯ ಮಂತ್ರಿಗಳವರಿಗೂ ಇದು ಸಾಮಾನ್ಯವಾಗಿ ಗೊತ್ತಾಗಿದೆ ಈ ಬೆಲೆಗಳ ಏರುಪೇರುಗಳಿಂದ ರೈತರಿಗೆ ಆಗಿರತಕ್ಕಂಥ ಅನ್ಯಾಯ ಏನು ಎನ್ನುವುದು ಸಾಕಷ್ಟು ಅನುಭವವಾಗಿದೆ ಎಂದು ನನಗಾದರೂ ಅನ್ನಿಸುತ್ತದೆ. ಬಹುಶಃ ರೈತನಿಗೆ ಮತ್ತು ರೇಷ್ಮೆ ಬೆಳೆಯುತಕ್ಕಂಥವನಿಗೆ ಮತ್ತು ನೂಲು ತೆಗೆಯುತಕ್ಕಂಥವನಿಗೆ ಏನಾದರೂ ನಾವು ಉಪಕಾರ ಮಾಡಬೇಕಾದರೆ ಈ ಬೆಲೆಗಳನ್ನು ಸೀಮಿತಗೊಳಿಸತಕ್ಕಂಥದ್ದು ನಿಗದಿ ಮಾಡತಕ್ಕಂಥದ್ದು ಒಳ್ಳೆಯದೆಂದು ನನಗನ್ನಿಸುತ್ತದೆ. ಈ ಸೀಮಿತ ಬೆಲೆಗಳನ್ನು ಸರಿಯಾದ ರೀತಿಯಲ್ಲಿ ನಿಗಧಿ ಮಾಡದೇ ಹೋದರೆ ರೈತನಿಗೆ ಕಷ್ಟವಾಗುತ್ತದೆ. ರೇಷ್ಮೆ ಬೆಳೆಯುತಕ್ಕಂಥವನಿಗೂ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅವನಿಗೂ ಬಹಳ ತೊಂದರೆಯಾಗುತ್ತದೆ. ಈ ಬೆಲೆಗಳ ಏರುಪೇರುಗಳಿಂದ ಆಗತಕ್ಕಂಥ ಅನುಕೂಲ ಯಾರಿಗೇದರೆ ಈ ಮಧ್ಯವರ್ತಿಗಳು ಬೆಂಗಳೂರು ನಗರದಲ್ಲಿ ಕೋಠಿಗಳನ್ನು ಇಟ್ಟುಕೊಂಡಿರತಕ್ಕಂಥವರಿಗೆ ಪ್ರಯೋಜನವಾಗುತ್ತಿದೆಯೇ ಹೊರತು, ಈ ರೇಷ್ಮೆ ಬಿತ್ತನೆ ಮಾಡತಕ್ಕಂಥವನಿಗೆ, ರೇಷ್ಮೆ ಬೆಳೆಗಾರನಿಗೆ ಬಹಳ ಅನಾನುಕೂಲವಾಗುತ್ತದೆ ಇದನ್ನು ತಾವು ಗಮನಿಸಬೇಕು ಹಾಗೂ ಈ ಬಗ್ಗೆ ತೀವ್ರ ಗಮನವನ್ನು ಕೊಡಬೇಕು. ಬೆಲೆಗಳನ್ನು ನಿಗಧಿ ಮಾಡಿ ಇನ್ನು ಹೆಚ್ಚಿನ ರೇಟನ್ನು ಅವರಿಗೆ ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಈ ಕ್ರಾಶ ಪ್ರೋಗ್ರಾಮ್ ಬಗ್ಗೆ ಈಗಾಗಲೇ ಮಾನ್ಯ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಈ ಕ್ರಾಶ್ ಪ್ರೋಗ್ರಾಮ್ ನಿಂತಲ್ಲಿಯೇ ನಿಂತಿದೆಯೇ ವಿನಹ ಒಂದು ಅಡಿ ಸಹ

ಮೇಲಕ್ಕೆ ಬಂದಿಲ್ಲ, ಸರ್ಕಾರದವರು 80 ಕೋಟಿ ಕೊಟ್ಟಿದ್ದೇವೆಂದು ಹಿಂದೆ ಹೇಳಿದರು ಆ ಮೇಲೆ 67 ಕೋಟಿ ಕೊಟ್ಟಿದ್ದೇವೆಂದು ಹೇಳಿದರು, ಅದು ಕೆಳಕ್ಕೆ ಇಳಿಯಿತು. ಇಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಸಹ ಏನೂ ಪ್ರಯೋಜನವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಈ ರಿಜರ್ವ್ ಬ್ಯಾಂಕ್‌ಗೆ 3 ಪ್ರಾಜೆಕ್ಟ್‌ನ್ನು ನಮ್ಮ ಸರ್ಕಾರದಿಂದ ಕಳುಹಿಸಿ ಕೊಟ್ಟಿತ್ತು, ಅದನ್ನು ಕಳುಹಿಸಿ 2—3 ವರ್ಷಗಳಾಗುತ್ತಾ ಬಂದಿದೆ ಎಂದು ತಿಳಿದು ಬಂತು. ಈ ಪ್ರಾಜೆಕ್ಟ್‌ಗಳಿಗೆ ರಿಸರ್ವ್ ಬ್ಯಾಂಕಿನಿಂದ ಒಪ್ಪಿಗೆ ಕೊಡದೇ ಇರುವುದರಿಂದ ಕ್ರಾಸ್ ಪ್ರೋಗ್ರಾಮ್ ಹೋಗಿ ಕ್ರಾಶ್ ಆಗುತ್ತದೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಇದಕ್ಕೆ ಮೇಲ್ಮಟ್ಟದಲ್ಲಿ ಎಂದರೆ ಮಂತ್ರಿಗಳ ಮಟ್ಟದಲ್ಲಿ ರಿಸರ್ವ್ ಬ್ಯಾಂಕ್‌ನವರು ಜೊತೆಯಲ್ಲಿ ವ್ಯವಹಾರ ಮಾಡಿ ಆ ಹಣ ಬರುವ ರೀತಿಯಲ್ಲಿ ಏನಾದರೂ ವ್ಯವಸ್ಥೆ ಮಾಡಿದರೆ ಸಾಧ್ಯವಾಗುತ್ತದೆ ಇಲ್ಲದೆ ಹೋದರೆ, ಅಧಿಕಾರಿಗಳ ಮಟ್ಟದಲ್ಲಿ ವ್ಯವಹಾರ ಮಾಡಿದರೆ ರಿಸರ್ವ್ ಬ್ಯಾಂಕ್‌ನಿಂದ ಹೆಚ್ಚಿನ ಮಾಹಿತಿಯನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಆದುದರಿಂದ ಮಾನ್ಯ ಮಂತ್ರಿಗಳವರು ಯುವಕರು ಆಗಿದ್ದಾರೆ ಅವರು ಈ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

6-30 P. M.

ಹಿಪ್ಪುನೇರಳೆ ಅಭಿವೃದ್ಧಿ ಬಗ್ಗೆ ಒಂದು ಸಲಹೆ ಕೊಡಲು ಇಚ್ಛೆಪಡುತ್ತೇನೆ. ಹಿಪ್ಪುನೇರಳೆ ಬೆಳೆಯನ್ನು ಹೆಚ್ಚು ಮಾಡಬೇಕೆಂದು ಒಂದು ರೀತಿಯಾದ ಹೊಸ ತಳಿಯನ್ನು ತಂದು ಇಲ್ಲಿ ಇಂಟ್ರಡ್ಯೂಸು ಮಾಡಿದ್ದಾರೆ. ಆದರೆ ಇದರ ಪ್ರಯೋಜನ ಹೆಚ್ಚು ಜನರಿಗೆ ಆಗುತ್ತಿಲ್ಲ. ಇದನ್ನು ಸರಿಯಾಗಿ ಮಾಡಿ ಇದರ ಕ್ವಾಲಿಟಿಯನ್ನೂ ಇಂಪ್ರೂವ್ ಮಾಡದೆ ಇದ್ದರೆ ಇದರಿಂದ ಜಾಸ್ತಿ ಬೆಳೆ ತೆಗೆದರೂ ಅನುಕೂಲವಾಗುವುದಿಲ್ಲ. ಮೈಸೂರು ಜಿಲ್ಲೆಯಲ್ಲಿ ಹಿಪ್ಪುನೇರಳೆ ವ್ಯವಸಾಯ ಜಾಸ್ತಿಯಾಗಿ ಆಗುತ್ತಿದೆ. ಇದರಲ್ಲಿ ಸರಕಾರದವರು ಬಾವಿಗಳನ್ನು ತೆಗೆಸಿಕೊಳ್ಳುವುದಕ್ಕಾಗಿ ರೈತರಿಗೆ ಐವತ್ತರಷ್ಟು ಸಾಲವಾಗಿ ಮತ್ತು ಐವತ್ತರಷ್ಟು ಸಬ್‌ಸಿಡಿಯಾಗಿ ಬಾವಿಗಳನ್ನು ತೆಗೆಸಲು ಪ್ರಯತ್ನ ಮಾಡಿ ಇಲ್ಲಿನ ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿರುವ ತೋಟಗಳನ್ನು ಹೆಚ್ಚು ಅಭಿವೃದ್ಧಿ ಮಾಡಿಲ್ಲ. ಒಳ್ಳೆಯ ತಳಿ ಇರುವ ಸಸಿಗಳನ್ನು ಕೊಟ್ಟು ಇಲ್ಲಿನ ತೋಟಗಳನ್ನು ಅಭಿವೃದ್ಧಿ ಮಾಡಲು ಸಾಕಷ್ಟು ಗಮನ ಕೊಡಬೇಕು ಎಂದು ಹೇಳುತ್ತೇನೆ. ಇನ್ನು ಬಾಕಿ ಸೆಂಟರುಗಳ ಬಗ್ಗೆ ಒಂದು ಸಲಹೆ ಕೊಡಬೇಕಾಗಿದೆ. ರೈತರು ಅವರು ಬೆಳೆ ಮಾಡುವ ಹಿಪ್ಪುನೇರಳೆ ತಳಿಗಳನ್ನು ಸರಿಯಾಗಿ ಬೆಳೆಯುತ್ತಿದ್ದಾರೆಯೇ ಇಲ್ಲವೇ ಎನ್ನುವುದನ್ನು ಇಲಾಖೆಯವರು ನೋಡಿ ರೈತರಿಗೆ ಸಹಾಯ ಮಾಡಬೇಕು. ಆದರೆ ಬಾಕಿ ಸೆಂಟರುಗಳನ್ನು ಮಾಡಿರುವುದನ್ನು ನೋಡಿದರೆ ಇದರಿಂದ ರೈತ ಸೋಮಾರಿಯಾಗಲು

(ಶ್ರೀ ಆರ್ ರಾಚೇಗೌಡ)

ಅವಕಾಶ ಮಾಡಿದಂತಾಗಿದೆ. ಚಾಕಿ ಸೆಂಟರುಗಳು ಸರಿಯಾದ ಕಂಟ್ರೋಲ್ನು ಇಟ್ಟುಕೊಂಡು ರೈತ ಚೆನ್ನಾಗಿ ಕೆಲಸ ಮಾಡಬೇಕೆಂದು ಮತ್ತು ಒಳ್ಳೆಯ ರೋಗ ರಹಿತವಾದ ಹುಳಗಳನ್ನು ರೈತರಿಗೆ ಕೊಟ್ಟು ಉತ್ಪಾದನೆ ಹೆಚ್ಚು ಬರುವಂತೆ ಮಾಡಬೇಕು.

ಇನ್ನು ಗ್ರೇನೆಜುಗಳ ಬಗ್ಗೆ ಹೇಳುವುದಾದರೆ ಸರಕಾರದ ಗ್ರೇನೇಜುಗಳೂ ಇವೆ ಮತ್ತು ಖಾಸಗಿಯುವರ ಗ್ರೇನೇಜುಗಳು ಇವೆ. ಇವುಗಳಲ್ಲಿ ಸರಕಾರದ ಗ್ರೇನೇಜುಗಳು ಬಹುತೇಕ ಡಿಫಂಕ್ಟ್ ಆಗಿವೆ. ಇದರ ಬಗ್ಗೆ ಸರಿಯಾದ ಕಂಟ್ರೋಲನ್ನು ಇಟ್ಟುಕೊಂಡು ಮಿಶ್ರತಳಿಗಳು ವೃದ್ಧಿಯಾಗುವಂತೆ ಮಾಡಲು ತಕ್ಕ ಯೋಜನೆ ಮಾಡಿದರೆ ರೈತರು ಇದರಲ್ಲಿ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇದರ ಕಡೆಗೆ ಸರಕಾರ ವಿಶೇಷ ಗಮನ ಕೊಡುವುದು ಅಗತ್ಯ ಎಂದು ಹೇಳುತ್ತೇನೆ. ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

‡ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ) :—ಮಾನ್ಯ ಅಧ್ಯಕ್ಷರೇ, ರೇಷ್ಮೆ ಬೆಳೆಯನ್ನು ಕಾಪಾಡುವುದರ ಬಗ್ಗೆ ಜನಗಳಿಗೆ ಬಹಳ ಕಷ್ಟವಾಗುತ್ತಿದೆ. ಇದರ ಬಗ್ಗೆ ಸರಿಯಾದ ಯೋಜನೆ ಹಾಕಿಕೊಂಡು ಮಾಡುತ್ತಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. ನಮ್ಮ ತಾಲ್ಲೂಕಿನಲ್ಲಿ ನಾಟಿ ಬಿತ್ತನೆ ಗೂಡುಗಳಿವೆ. ಇವನ್ನು ಮಾರ್ಕೆಟ್ಟಿಗೆ ಮಾರಲು ತೆಗೆದುಕೊಂಡು ಹೋದರೆ ಸರಕಾರದವರು ತನಗೆ ಬೇಕಾದ್ದನ್ನು ಮಾತ್ರ ಆಯ್ದುಕೊಂಡು ಉಳಿಕೆಯ ಗೂಡುಗಳನ್ನು ಮಾರುವುದರ ಬಗ್ಗೆ ರೈತರಿಗೆ ಸಹಾಯ ಮಾಡುತ್ತಿಲ್ಲ. ನೂರು ಗೂಡುಗಳನ್ನು ರೈತರಿಂದ ತೆಗೆದುಕೊಂಡರೆ ಸುಮಾರು 200 ಇಲ್ಲವೇ ಮುನ್ನೂರು ರೂಪಾಯಿಗಳ ಆದಾಯ ಬರುತ್ತದೆ. ಆದರೆ ಸರಕಾರ ತೆಗೆದುಕೊಂಡು ಉಳಿದ ಗೂಡುಗಳನ್ನು ಬೇರೆ ಕಡೆ ಮಾರಲು ಹೋದರೆ ಅವಕ್ಕೆ 25 ರೂಪಾಯಿ ಕೂಡ ಸಿಗುವುದಿಲ್ಲ. ಇನ್ನು ಮಿಶ್ರತಳಿ ಪ್ರಯೋಗ ನಮ್ಮ ಭಾಗದಲ್ಲಿ ಹೆಚ್ಚು ಆಗುತ್ತಿಲ್ಲ. ಇದರಿಂದಾಗಿ ನಮ್ಮ ರೈತರು ಬೆಳೆಯುವ ತಳಿಗಳು ನಾಶವಾಗುತ್ತಿವೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ರೈತರಿಂದ ತರುವ ಗೂಡುಗಳಿಗೆ ಮಾರ್ಕೆಟ್ಟುಗಳಲ್ಲಿ ಕೂಡ ಸರಿಯಾದ ಬೆಲೆ ಕೊಡುವುದಿಲ್ಲ. ರೇಷ್ಮೆ ವ್ಯವಸಾಯ ಅಭಿವೃದ್ಧಿ ಮಾಡಲು ನಮ್ಮ ತಾಲ್ಲೂಕಿಗೆ ಸರಿಯಾದ ವ್ಯವಸ್ಥೆ ಮಾಡುತ್ತಿಲ್ಲ. ರೈತರಿಗೆ ಸಾಕಷ್ಟು ಸಹಾಯ ಒದಗಿಸಿಕೊಟ್ಟು ಇದರ ಬೆಳೆ ಬೆಳೆಯಲು ಅನುಕೂಲ ಮಾಡಿಕೊಡಬೇಕು. ಇದಕ್ಕೆ ಬಾವಿಗಳನ್ನು ಮಾಡಬೇಕಾಗಿದೆ ಮತ್ತು ಒಳ್ಳೆ ತಳಿಗಳನ್ನು ನಮ್ಮ ತಾಲ್ಲೂಕಿನ ರೈತರಿಗೆ ಕೊಟ್ಟು ಒಳ್ಳೆಯ ರೋಗರಹಿತವಾದ ಮೊಟ್ಟೆ ಹಂಚುವ ವ್ಯವಸ್ಥೆ

ಮಾಡಬೇಕು. ಇದಕ್ಕಾಗಿ ರೇಷ್ಮೆ ಫಾರಂ ಅಭಿವೃದ್ಧಿ ಮಾಡಿದರೆ ಇದರಿಂದ ಸರಿಯಾದ ಪ್ರತಿಫಲ ದೊರೆಯುತ್ತದೆ ಇದರ ಕಡೆಗೆ ಸರಕಾರ ಹೆಚ್ಚು ಗಮನ ಹರಿಸುವುದು ಬಹು ಅಗತ್ಯ.

ಇನ್ನು ಕೈಗಾರಿಕೆಗಳ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಕೊಡಲು ಇಚ್ಛಿಪಡುತ್ತೇನೆ. ನಮ್ಮ ಸರಕಾರ ಎಲ್ಲ ಕೈಗಾರಿಕೆಗಳನ್ನೂ ಪಟ್ಟಣಗಳಲ್ಲೇ ಕೇಂದ್ರೀಕೃತವಾಗಿ ಮಾಡಿದ್ದಾರೆ. ಇದಕ್ಕೆ ಕಾರಣ ಹೆಚ್ಚಿನ ಆದಾಯ ಬರುತ್ತದೆ ಎಂದು ಇರಬಹುದು. ಇದಕ್ಕೆ ಬದಲು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಒಂದೊಂದು ಕೈಗಾರಿಕಾ ಘಟಕವನ್ನು ಸ್ಥಾಪನೆ ಮಾಡಲು ಪ್ರಯತ್ನ ಮಾಡಬೇಕು. ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ರೀತಿಯಾದ ಕೈಗಾರಿಕೆಗಳನ್ನು ಮಾಡಲು ಸಾಧ್ಯ ಎನ್ನುವ ಒಂದು ಸರ್ವೆಮಾಡಿ ಅಲ್ಲಿ ಒಂದು ಫ್ಯಾಕ್ಟರಿ ಆಗುವಂತೆ ಮಾಡಲು ಪ್ರಯತ್ನ ಮಾಡಬೇಕು. ಇದರಿಂದ ಅಯಾ ಪ್ರದೇಶದಲ್ಲಿರುವ ಜನರಿಗೆ ಕೆಲಸಗಳೂ ಸಿಕ್ಕಲು ಸಹಾಯವಾಗುತ್ತದೆ ಮತ್ತು ಇದರಿಂದ ಸ್ವಲ್ಪಮಟ್ಟಿಗಾದರೂ ನಿರುದ್ಯೋಗದ ಸಮಸ್ಯೆಯನ್ನು ಪರಿಹಾರ ಮಾಡಲು ಸಾಧ್ಯವಾಗುತ್ತದೆ. ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು ಬರೀ ಬೆಂಗಳೂರಿನಲ್ಲೇ ಎಲ್ಲ ಕೈಗಾರಿಕೆಗಳನ್ನೂ ಕೇಂದ್ರೀಕೃತವಾಗಿ ಮಾಡುವುದರ ಬದಲು ಪ್ರತಿಯೊಂದು ಜಿಲ್ಲೆ ಇಲ್ಲವೇ ತಾಲ್ಲೂಕಾ ಹೆಡ್ ಕ್ವಾರ್ಟರುಗಳಲ್ಲಿ ಒಂದೊಂದು ಕೈಗಾರಿಕೆ ಮಾಡಲು ಪ್ರಯತ್ನ ಮಾಡಬೇಕು. ಅದರಂತೆ ನಮ್ಮ ತಾಲ್ಲೂಕಿನಲ್ಲಿ ಇದುವರೆಗೆ ಒಂದೂ ಫ್ಯಾಕ್ಟರಿ ಇಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು. ನಮ್ಮ ಊರಿನ ರೈತರಿಗೆ ಬೇಸಾಯ ಮಾಡಲು ನೀರೂ ಕೂಡ ಸಿಗುತ್ತಿಲ್ಲ. ಕಣ್ವ ನೀರು ಚನ್ನಪಟ್ಟಣ ತಾಲ್ಲೂಕಿಗೆ ವ್ಯವಸಾಯಕ್ಕೆ ಬೇಕೆಂದು ಅಲ್ಲಿಗೆ ಒದಗಿಸುತ್ತಾರೆ. ಬೆಂಗಳೂರಿಗೆ ಇಲ್ಲಿಂದ ನೀರು ಬೇಕೆಂದು ತಿಪ್ಪಗುಂಡನ ಹಳ್ಳಿ ಮೂಲಕ ಒದಗಿಸುತ್ತಿದ್ದಾರೆ. ಹೀಗಾಗಿ ಇಲ್ಲಿ ಯಾವ ನೀರಾವರಿ ಪ್ರಾಜೆಕ್ಟು ಕೂಡ ಇಲ್ಲ. ವ್ಯವಸಾಯ ಮಾಡಲು ಅಲ್ಲಲ್ಲಿ ಬಾವಿಗಳನ್ನು ತೋಡಿಸಿ ಕೊಡಬಹುದು. ಇದರಿಂದ ಇಲ್ಲೂ ಯಾವ ಕೈಗಾರಿಕೆಗಳೂ ಇಲ್ಲದುದರಿಂದ ಯಾವುದಾದರೂ ಕೈಗಾರಿಕೆ ಸ್ಥಾಪನೆ ಯಾಗಲು ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇಲ್ಲಿ ಒಂದು ರೀತಿಯಾದ ಮಿನಿ ಸ್ಟೀಲ್ ಪ್ಲಾಂಟು ಮಾಡಲು ಅನುಕೂಲ ಇದೆ. ಇವರಿಂದ ರಾಮನಗರ ಹಾಗೂ ಇದರ ಸುತ್ತಮುತ್ತಲ ವಿಭಾಗದ ಜನತೆಗೆ ಸ್ವಲ್ಪಮಟ್ಟಿನ ಕೆಲಸಗಳೂ ಸಿಗಲು ಸಹಾಯವಾಗುತ್ತದೆ. ಇದರ ಬಗ್ಗೆ ಸರಕಾರ ಕೂಲಂಕುಷವಾಗಿ ವಿಚಾರ ಮಾಡಬೇಕೆಂದು ಹೇಳಿ, ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನೂ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಭಂಗಿ (ಜಮಖಂಡಿ) :—ಮಾನ್ಯ ಅಧ್ಯಕ್ಷರೇ, ನಮ್ಮ ಬಡ್ಜೆಟ್ಟಿನ ಮೇಲೆ ಕೈಗಾರಿಕಾ ಡಿಮ್ಯಾಂಡು ಬಗ್ಗೆ ಮಾತನಾಡುತ್ತ ಕೆಲವಾರು ವಿಚಾರಗಳನ್ನು ನಮ್ಮ ಸ್ನೇಹಿತರು ಇಲ್ಲಿ ಮಾತಾಡಿದ್ದಾರೆ. ಯಾರೂ ನೇಕಾರರ ಬಗ್ಗೆ ಇದುವರೆಗೆ ಮಾತಾಡಲಿಲ್ಲ. ನಾನು ನೇಕಾರರ ಬಗ್ಗೆ ಒಂದೆರಡು ವಿಚಾರ ಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ 518 ನೇಕಾರರು ಗಳ ಸೊಸೈಟಿಗಳಿವೆ ಇವುಗಳಲ್ಲಿ 298 ಸೊಸೈಟಿಗಳು ಡಿಫಂಕ್ಟು ಆಗಿವೆ, ಇನ್ನುಳಿದಿರತಕ್ಕ ಸೊಸೈಟಿಗಳಲ್ಲಿ ಯಾವ ಸೊಸೈಟಿಗಳೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮತ್ತು ಇವುಗಳ ಲೆಕ್ಕಗಳನ್ನೂ ಸರಿಯಾಗಿ ಅಡಿಟ್ಟು ಮಾಡುತ್ತಿಲ್ಲ. ಯಾವತ್ತೂ ಸೊಸೈಟಿಗಳು ಸಹಕಾರ ಇಲಾಖೆ ಮೂಲಕ ನಡೆಯುತ್ತಿವೆ ಇವನ್ನು ಸರಿಯಾಗಿ ಆಡಿಟ್ಟು ಮಾಡುತ್ತಾರೋ ಇಲ್ಲವೋ ನಮಗೆ ಸರಿಯಾಗಿ ತಿಳಿಯುತ್ತಿಲ್ಲ. ನಮ್ಮ ಸರಕಾರ ಇದರ ಕಡೆಗೆ ಹೆಚ್ಚು ಗಮನ ಹರಿಸಿ ಸರಕಾರದ ಆಡಿಟ್ಟು ಇಲಾಖೆ ಯವರು ಬಗಿಯಾಗಿ ತನಿಖೆ ಮಾಡಿ ನಷ್ಟವಾಗುತ್ತಿರುವ ಸೊಸೈಟಿಗಳನ್ನು ಸರಿ ಪಡಿಸಲು ಸಾಕಷ್ಟು ಗಮನ ಕೊಡುವುದು ಅಗತ್ಯ. ನಾವು ಕೂಡ ಸರಕಾರಕ್ಕೆ ಆಗಾಗ್ಗೆ ಇಂತಹ ಸೊಸೈಟಿಗಳನ್ನು ದುರಸ್ತು ಪಡಿಸಬೇಕೆಂದು ಸರಕಾರದವರನ್ನು ಕೇಳಿದಾಗ ಇವನ್ನು ಸರಿಪಡಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟರು. ಆದರೆ ಇದುವರೆಗೂ ಇವುಗಳನ್ನು ಸರಿಪಡಿಸಲು ತಕ್ಕ ಕ್ರಮವನ್ನು ಕೈಗೊಳ್ಳಲಿಲ್ಲ. ನಮ್ಮಲ್ಲಿ ಸುಮಾರು ಐದು ಲಕ್ಷ ಜನರು ನೇಕಾರರಾಗಿ ಕೆಲಸ ಮಾಡುತ್ತಿದ್ದರೂ ಇವರಿಗೆ ಸಾಕಷ್ಟು ನೆರವು ಸರಕಾರದಿಂದ ದೊರೆಯುತ್ತಿಲ್ಲ. ಇವರಿಗೆ ಸರಕಾರ ಪರಿಹಾರ ಕೊಡದಿದ್ದರೆ ಇವರು ತಮ್ಮ ವೃತ್ತಿ ನಡೆಸುವುದು ಕಷ್ಟವಾಗುತ್ತದೆ. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿರುವ ನೇಕಾರರಿಗೆ, ಸರಕಾರದವರು, ಸಾಕಷ್ಟು ಪರಿಹಾರಗಳನ್ನು ಕೊಟ್ಟು, ಅಲ್ಲಿರುವ ಸುಮಾರ ಮೂವತ್ತು ಲಕ್ಷ ಜನ ನೇಕಾರರು ಉಪಜೀವನ ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ನಾನು ನಮ್ಮ ರಾಜ್ಯಮಂತ್ರಿಗಳಾದ ಶ್ರೀ ಮೊಯ್ಲಿಯವರು, ನಮ್ಮ ಕೈಗಾರಿಕಾ ಇಲಾಖೆಯ ಕೆಲವು ಅಧಿಕಾರಿಗಳು, ಒಂದು ಸ್ಟಡೀ ಟೀಂ ನ್ನು ಅಂತಾ ಮದ್ರಾಸಿಗೆ ಹೋಗಿ ಅಲ್ಲಿ, ತಮಿಳನಾಡು ಸರಕಾರ ಯಾವರೀತಿ ನೇಕಾರರುಗಳಿಗೆ ಯೋಜನೆ ಗಳನ್ನು ಮಾಡಿ ಸಹಾಯ ಮಾಡಿದ್ದಾರೆ ಎನ್ನುವುದನ್ನು ಖುದ್ದಾಗಿ ನೋಡಿ, ಅಲ್ಲಿನ ಅಧಿಕಾರಿಗಳೊಡನೆ ವಿಚಾರ ವಿನಿಮಯ ಮಾಡಿ ಬಂದಿದ್ದೇವೆ. ಇಲ್ಲೂ ಕೂಡ ಅಂತಹ ಕಾರ್ಯಕ್ರಮ ತೆಗೆದುಕೊಳ್ಳುವುದರ ಕಡೆಗೆ ಗಮನ ಕೊಡಬಹುದು. ಅವಶ್ಯವಿದೆ. ನಮ್ಮ ಸರಕಾರದಲ್ಲೂ ಕೂಡ ರಿಜಿಸ್ಟ್ರಾರ್‌ರವರು, ಜಾಯಿಂಟು ರಿಜಿಸ್ಟ್ರಾರ್‌ರವರು ಹಾಗೂ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರು ಇಂತಹ ಅಧಿಕಾರಿ ಗಳಿದ್ದಾರೆ. ಇವರುಗಳು ಇದುವರೆಗೆ ನೇಕಾರರನ್ನು ಯಾವ ರೀತಿ ಡೆವಲಪ್ಪು ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತಿಲ್ಲ.

ಇವೊತ್ತು ತಮಿಳನಾಡು ರಾಜ್ಯದಲ್ಲಿ 7 ಸರ್ಕಲ್‌ಗಳನ್ನು ಮಾಡಿ ಪ್ರತಿಯೊಂದು ಸರ್ಕಲ್ಲಿಗೂ ಅಸಿಸ್ಟಂಟ ಡಾಯರೆಕ್ಟರಿಗೆ, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರ ಅಧಿಕಾರ ಕೊಟ್ಟಿದ್ದಾರೆ. ಅವರ ಕೈಕೆಳಗೆ ಕೊ. ಆಫೀಸರ ಇರುವರು. ಅವರಿಗೆ ಸಹಾಯ ಮಾಡಲು ಕೋ. ಇನ್ಸಪೆಕ್ಟರರು ಇರುವರು. ಅವರು ಸೊಸೈಟಿಗಳನ್ನು ಇನ್‌ಸ್ಪೆಕ್ಷನ್ ಮಾಡಿ ಅವುಗಳ ಮೇಲೆ ಸಾಕಷ್ಟು ಹತೋಟಿಯನ್ನು ಇಟ್ಟುಕೊಂಡಿದ್ದಾರೆ. ಇದರಿಂದಾಗಿ ಅವು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಾಗಿದೆ. ಪ್ರೈಮರಿ ಸೊಸೈಟಿಗಳು ಕೋಟಿಗಟ್ಟಲೆ ಹಣವನ್ನು ಕೊಟ್ಟು ನೇಕಾರರಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ 500 ಸೊಸೈಟಿಗಳು ಇವೆ. ಅವುಗಳೆಲ್ಲಾ ಹಾಳಾಗಿ ಹೋಗಿವೆ. ನಮ್ಮ ಸರ್ಕಾರದವರು ಇವುಗಳಲ್ಲಿ ವ್ಯವಸ್ಥೆಯನ್ನು ಸರಿಯಾಗಿ ಮಾಡಿಲ್ಲ. ನಮ್ಮ ಸರ್ಕಾರದವರು ಸ್ಟ್ಯಾಚ್ಯೂಟರಿ ಕಮಿಟಿಯನ್ನು ಮಾಡುತ್ತೇವೆ, ಸ್ಟ್ಯಾಚುಟರಿ ಬೋರ್ಡ ಮಾಡುತ್ತೇವೆ ಎಂದು ಹೇಳುತ್ತಾರೆ. ಯಾವುದೂ ಮಾಡಿಲ್ಲ. ಕೇಂದ್ರ ಸರ್ಕಾರದವರು ಶಿವರಾಮ ಸಮಿತಿಯವರಿಂದ ನೇಕಾರರ ಸ್ಥಿತಿಯನ್ನು ಉತ್ತಮಪಡಿಸುವ ಬಗ್ಗೆ ವರದಿಯನ್ನು ತರಿಸಿಕೊಂಡಿದ್ದಾರೆ. ನಮ್ಮ ಕೈಗಾರಿಕಾ ಮಂತ್ರಿಗಳು ದೆಹಲಿಗೆ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿಮಾಡಿ ಶಿವರಾಮ ಸಮಿತಿಯವರ ಶಿಫಾರಸ್ಸಿನಂತೆ ನೇಕಾರರಿಗೆ ಕೊಡಬೇಕಾದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಬೇಕಾದ ಸಹಾಯವನ್ನು ಕೇಂದ್ರದಿಂದ ಪಡೆದುಕೊಂಡು ಬರುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ. ಶಿವರಾಮ ಸಮಿತಿಯವರ ಶಿಫಾರಸ್ಸಿನಂತೆ ನೇಕಾರರಿಗೆ ಮಗ್ಗಗಳನ್ನು ಒದಗಿಸಿಕೊಡಬೇಕಾಗಿದೆ ಮತ್ತು ಈ ಸಮಿತಿಯವರ ಶಿಫಾರಸ್ಸಿನಂತೆ ಯಾವ ಯಾವ ರಾಜ್ಯದಲ್ಲಿ 5 ಸಾವಿರಕ್ಕಿಂತ ಹೆಚ್ಚು ಮಗ್ಗಗಳು ಇವೆ ಅಂಥವರ ಬಗ್ಗೆ ಒಂದು ಯೋಜನೆಯನ್ನು ಮಾಡಿ ನೇಕಾರರಿಗೆ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ ಶಿಫಾರಸು ಮಾಡಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದವರೂ ಒಪ್ಪಿಗೆಯನ್ನು ಕೊಡುವ ಕುರಿತು ಪರಿಶೀಲನೆ ಮಾಡಲು ಒಂದು ಸಬ್ ಕಮಿಟಿ ನೇಮಿಸಿದ್ದಾರೆ. ಹಿಂದೂಸ್ತಾನದಲ್ಲಿರುವಂತಹ ಒಂದು ಕೋಟಿ ನೇಕಾರರಿಗೆ ಸಹಾಯ ಮಾಡುವಂತಹ ಒಂದು ಯೋಜನೆ ಮಾಡಲು ಕೇಂದ್ರದಲ್ಲಿ ವಿಚಾರ ನಡೆದಿದೆ. ನಮ್ಮ ರಾಜ್ಯದಲ್ಲಿರತಕ್ಕ ನೇಕಾರರ ಸೊಸೈಟಿಗಳಿಗೆ, 6 ಲಕ್ಷ ರೂಪಾಯಿಗಳ ರಿಬೇಟ್ ಕೊಡಬೇಕಾಗಿದೆ. ಅದರೂ ಸಹ ಆ ರೀತಿ ರಿಬೇಟ್ ಕೊಡುವಂಥಾದ್ದು ನಮ್ಮ ರಾಜ್ಯದ ನೇಕಾರರಿಗೆ ಮುಟ್ಟಿಲ್ಲ. ಕೇಂದ್ರ ಸರ್ಕಾರದವರು ಯಾವುದೇ ಸಹಾಯವನ್ನು ನೇಕಾರರಿಗೆ ಕೂಡ ಮಾಡಿದರೂ ಅದನ್ನು ಪಡೆದುಕೊಂಡು ಬಂದು ನೇಕಾರರಿಗೆ ಸಹಾಯ ಮಾಡಬೇಕು. ರಾಜ್ಯ ಸರ್ಕಾರದವರು ಮಾಡಬೇಕಾದ ಸಹಾಯವನ್ನು ಮಾಡಿ. ದಯಮಾಡಿ ಮಾನ್ಯ ಮಂತ್ರಿಗಳು ಈ ಬಗ್ಗೆ ಲಕ್ಷ್ಯ ಕೊಟ್ಟು ನೇಕಾರರಿಗೆ ದೊರೆಯಬೇಕಾದ

(ಶ್ರೀ ಪಿ. ಎಂ. ಭಂಗಿ)

ಸಹಾಯ ಸೌಲಭ್ಯವನ್ನು ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮೊನ್ನೆ ಶೈಮೊಗ್ಗದಿಂದ ತಯಾರು ಮಾಡಿದ ರೇಷ್ಮೆ ಸೀರೆಗಳಿಗೆ ಸರ್ಕಾರದವರು 8 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕಿದ್ದರು. ಆ ಮೇಲೆ ಶೈಮಗ್ಗದ ರೇಷ್ಮೆ ಸೀರೆಗಳಿಗೆ ಸೇಲ್ಸ್ ಟ್ಯಾಕ್ಸ್ ಹಾಕಬಾರದೆಂದು, ಸಹಾಯಕ ಕೈಗಾರಿಕಾ ಮಂತ್ರಿಗಳು ಹೇಳಿದ ಮೇಲೆ ಮಾನ್ಯ ಅರ್ಥಿಕ ಮಂತ್ರಿಗಳು ಒಪ್ಪಿಕೊಂಡರು. ಅದಕ್ಕಾಗಿ ಮಾನ್ಯ ಅರ್ಥ ಮಂತ್ರಿಗಳಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಶೈಮಗ್ಗದ ಉದ್ಯಮಕ್ಕೆ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕು. ನೇಕಾರರಿಗೆ ಸಹಾಯ ಸೌಲಭ್ಯಗಳನ್ನು ಒದಗಿಸಬೇಕು. ಅವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಹಾಯ ಮಾಡಬೇಕು. ನೇಕಾರರಿಗೆ ಸಪರೇಟ್ ಡೈರೆಕ್ಟೋರೇಟ್ ಮಾಡುತ್ತೇವೆ ಬೋರ್ಡ್ ಮಾಡುತ್ತೇವೆ, ಕಾರ್ಪೋರೇಷನ್ ಮಾಡುತ್ತೇವೆ, ಸ್ಟ್ಯಾಚ್ಯೂಟರಿ ಬೋರ್ಡ್ ಮಾಡುತ್ತೇವೆ ಎಂದು ಸುಮ್ಮನೆ ಸರಕಾರದವರು ಆಶ್ವಾಸನೆಯನು ಕೊಡುತ್ತಾರೆ. ಆದರೆ ಅವು ಕಾರ್ಯಗತವಾಗದೆ ಹಾಗೆಯೇ ಉಳಿದು ಹೋಗುತ್ತವೆ ಈ ಶೈಮಗ್ಗದ ಕೈಗಾರಿಕೆಗೆ ಸ್ವತಂತ್ರ ಡಾಯರೆಕ್ಟರ ನೇಮಿಸಿ ನೇಕಾರರಿಗೆ. ಅನುಕೂಲ ಮಾಡಿಕೊಡತ್ತೇವೆ ಎಂದು ಕೈಗಾರಿಕಾ ಮಂತ್ರಿಗಳು ಹೇಳಿದ್ದರು ಕಳೆದ ವರುಷ ಬಜೆಟಿನಲ್ಲಿ 5 ಲಕ್ಷ ರೂಪಾಯಿ Separate Dircetor ಬಗ್ಗೆ ತೋರಿಸಿದರು. ಈ ಸಲ 5 ಲಕ್ಷ ರೂಪಾಯಿಗಳೂ ಇಲ್ಲ. 5 ರೂಪಾಯಿಗಳೂ ಇಲ್ಲ. ಇದಕ್ಕೆ ಜೀರೋ ಸಂಖ್ಯೆ ಹಾಕಿದ್ದಾರೆ. ಈ ಪ್ರಕಾರ ಈಗಿನ ಡೈರೆಕ್ಟರ ಸಲಹೆ ಕೇಳಬೇಡಿ ನೇಕಾರರನ್ನು ಉಳಿಸಿ. ಸರ್ಕಾರಿ ಅಧಿಕಾರಿಗಳು ಶೈಮಗ್ಗದ ಬಟ್ಟೆಯನ್ನು ಧರಿಸುವಂತೆ ಹೇಳಬೇಕು. ಎಲ್ಲರೂ ಹ್ಯಾಂಡ್ಲೂಮ್ ಬಟ್ಟೆಯನ್ನು ಧರಿಸುವ ಬಗ್ಗೆ ಎಲ್ಲ ಮಂತ್ರಿಗಳು ಪ್ರಚಾರ ಮಾಡಬೇಕು. ಮಂತ್ರಿಗಳು ತಮ್ಮ ತಮ್ಮ ಜಿಲ್ಲೆಯೊಳಗೆ ಈ ಎಲ್ಲರೂ ಹ್ಯಾಂಡ್ಲೂಮ್ ಬಟ್ಟೆಯನ್ನು ದರಿಸುವ ಬಗ್ಗೆ ಪ್ರಚಾರ ಮಾಡಬೇಕು. ನೇಕಾರ ಉದ್ಧಾರವಾದರೆ ರಾಜ್ಯ ಉದ್ಧಾರವಾಗುತ್ತದೆ ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಸಿ. ಬೈರೇಗೌಡ (ವೇಮಗಲ್):—ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡಬೇಕು ಎಂದು ನಿಂತಿದ್ದೇನೆ. ಮೊದಲನೆಯದಾಗಿ ಇವೊತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ 11 ಜಿಲ್ಲೆಗಳನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಎಂದು ಮಾಡಿದ್ದಾರೆ. ಉಳಿದ ಜಿಲ್ಲೆಗಳನ್ನು ಇಂಡಸ್ಟ್ರಿಯಲ್

ಫಾರ್‌ವರ್ಡ್ ಎಂದು ಮಾಡಿದ್ದಾರೆ. ಯಾವ ಆಧಾರದ ಮೇಲೆ ಈ ರೀತಿ ಕೆಲವು ಜಿಲ್ಲೆಗಳನ್ನು ಇಂಡಸ್ಟ್ರಿಯಲಿ ಬ್ಯಾಕ್‌ವರ್ಡ್ ಎಂತಲೂ, ಕೆಲವು ಜಿಲ್ಲೆಗಳನ್ನು ಇಂಪಸ್ಟ್ರಿಯಲ್ ಫಾರ್‌ವರ್ಡ್ ಎಂತಲೂ ಮಾಡಿದ್ದಾರೆ? ಕೇಂದ್ರ ಸರ್ಕಾರದವರು ಈ ರೀತಿ ನಿರ್ಣಯ ಮಾಡಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ಇವೊತ್ತಿನ ದಿವಸ ಇಲ್ಲಿ ಇರತಕ್ಕವುಗಳು ಎರಡು ದೊಡ್ಡ ಉದ್ಯಮಗಳು. ಒಂದು ಚಿನ್ನದ ಗಣಿ ಉದ್ಯಮ, ಇನ್ನೊಂದು ಭಾರತ ಅರ್ತ್ ಮೂವರ್ಸ್. ಈ ಎರಡು ಉದ್ಯಮಗಳು ಅಲ್ಲಿವೆ. ಕೋಲಾರ ಜಿಲ್ಲೆಯ ಕೈಗಾರಿಕೆಯ ಅಂಕಿ ಅಂಶಗಳನ್ನು ತಗೆದುಕೊಂಡು ನೋಡುವುದಾದರೆ ಅಲ್ಲಿ ಶೇಕಡಾ 1 ಪರ್ಸೆಂಟಿಗಿಂತ ಹೆಚ್ಚು ಕೈಗಾರಿಕೆಗಳು ಇಲ್ಲ. ಇಂಥಾ ಒಂದು ಪರಿಸ್ಥಿತಿ ಅಲ್ಲಿರುವಾಗ ಕೋಲಾರ ಜಿಲ್ಲೆ ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಆಗಿಲ್ಲ ಎಂದು ಹೇಳುವುದಾದರೆ ಅಲ್ಲಿ ಚಿನ್ನದ ಗಣಿ ಇರುವುದರ ಮಹತ್ವ ಎಂದು ಹೇಳಬೇಕಾಗಿದೆ. ಈ ವಿಚಾರದಲ್ಲಿ ನಮ್ಮ ಕೋಲಾರ ಜಿಲ್ಲೆಗೆ ಅನ್ಯಾಯ ಆಗ್ಗಿದೆ. ಆದ್ದರಿಂದ ರಾಜ್ಯ ಸರ್ಕಾರದವರು ಕೇಂದ್ರಕ್ಕೆ ಒತ್ತಾಯ ಮಾಡಿ ಈಗ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ರೇಷ್ಮೆ ಉದ್ಯಮಕ್ಕೆ ಸಂಬಂಧಪಟ್ಟ ಹಾಗೆ, ರೇಶ್ಮೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಅನೇಕ ಮಿತ್ರರು ಹೇಳಿದ್ದಾರೆ ನಾನೂ ಕೂಡ ಒಬ್ಬ ರೇಷ್ಮೆ ಬೆಳೆಗಾರನಾಗಿದ್ದೇನೆ. ಮತ್ತು ರೇಷ್ಮೆಯನ್ನು ಯಥೇಚ್ಛವಾಗಿ ಬೆಳೆಯತಕ್ಕ ಜಿಲ್ಲೆಯಿಂದ ಬರತಕ್ಕವನಾಗಿದ್ದೇನೆ. ರಾಜ್ಯದಲ್ಲಿ ಇವೊತ್ತಿನ ದಿವಸ ಸುಮಾರು 2.5 ಲಕ್ಷ ಎಕರೆಯಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೆ. ಇದರಲ್ಲಿ ಉತ್ಪತ್ತಿಯಾಗಿತಕ್ಕ ರೇಷ್ಮೆ ಎಷ್ಟು ಲಕ್ಷ ಕೆ.ಜಿ. ಎಂದರೆ 22 ಲಕ್ಷ ಕೆ.ಜಿ. ರೇಷ್ಮೆ ಉತ್ಪಾದನೆಯಾಗಿದೆ ಸುಮಾರು 20 ಲಕ್ಷ ಜನ ಇವೊತ್ತು ಈ ಒಂದು ಉದ್ಯವ ವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಈ ರೇಷ್ಮೆ ಇಲಾಖೆಗ ಸಾಕಷ್ಟು ಹಣವನ್ನು ಒದಗಿಸುವುದಿಲ್ಲ. ಮತ್ತು ಈ ಇಲಾಖೆಗೆ ರೇಷ್ಮೆ ವ್ಯವಸಾಯದಲ್ಲಿ ಅನುಭವ ಇಲ್ಲದೇ ಇರುವವರನ್ನೇ ತಂದು ಕೂಡಿಸುತ್ತಾರೆ. ಇದು ಸರಿಯಲ್ಲ ಸ್ವಲ್ಪ ಮಟ್ಟಿಗೆ ರೇಷ್ಮೆ ವ್ಯವಸಾಯದ ಬಗ್ಗೆ ಅನುಭವ ಇರುವವರನ್ನು ಈ ಇಲಾಖೆಗೆ ನೇಮಕ ಮಾಡಿದರೆ ಒಳ್ಳೆಯದು. ಏತಕ್ಕೆಂದರೆ ಈ ಒಂದು ರೇಷ್ಮೆ ಉದ್ಯಮವನ್ನು ನಮ್ಮ ರಾಜ್ಯದಲ್ಲಿ ಸುಮಾರು 20 ಲಕ್ಷ ಜನ ಅವಲಂಬಿಸಿಕೊಂಡಿದ್ದಾರೆ. ಇದರಿಂದ ಅವರು ಜೀವನ ಮಾಡುತ್ತಾರೆ. ಆದರೂ ಕೂಡ ಸರ್ಕಾರದವರು ಇದಕ್ಕೆ ಸಾಕಷ್ಟು ಗಮನ ಕೊಟ್ಟಿಲ್ಲ. ಇದಕ್ಕೆ ಖರ್ಚು ಮಾಡತಕ್ಕ ಹಣ ಕೇವಲ ಕಡಿಮೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಈ ಇಲಾಖೆಯಿಂದ, ಈ ಉದ್ಯಮದಿಂದ ನಮ್ಮ ದೇಶಕ್ಕೆ ಸಂಪತ್ತು

(ಶ್ರೀ ಸಿ. ಬೈರೇಗೌಡ)

ಉತ್ಪಾದನೆಯಾಗುತ್ತದೆ. ಆದರೂ ಕೂಡ ಈ ರೇಷ್ಮೆ ಇಲಾಖೆಯನ್ನು ನಮ್ಮ ಸರ್ಕಾರದವರು ಕಡೆಗಣಿಸುತ್ತಾ ಬಂದಿರುವುದು ಘೋರ ಅನ್ಯಾಯ. ಈ ರೀತಿ ಈ ಇಲಾಖೆಗೆ ಅನ್ಯಾಯ ಮಾಡಿರುವುದು ಖಂಡಿತ ಖಂಡನೀಯ. ಮತ್ತು ವಿಷಾದನೀಯ. ಈ ಕೈಗಾರಿಕೆಯನ್ನು ಉತ್ತಮಪಡಿಸುವ ದೃಷ್ಟಿಯಿಂದ 80 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಹಿಂದೆ ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಅದು ಪೇಪರ್‌ನಲ್ಲಿದೆಯೋ ಹೊರತು. ಆದರೆ ಅದರಿಂದ ವಾಸ್ತವವಾಗಿ ಪ್ರಯೋಜನ ಆಗಿಲ್ಲ. ಕ್ರ್ಯಾಷ್ ಪ್ರೋಗ್ರಾಂ ಎಲ್ಲಿ ಮಾಡಬೇಕೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ರೇಷ್ಮೆ ಮಾರ್ಕೆಟ್ ವಿಚಾರವಾಗಿ ಇದುವರೆಗೂ ಯಾರೂ ಹೇಳಲಿಲ್ಲ 24 ಮಾರ್ಕೆಟ್‌ಗಳಲ್ಲಿ ರೇಷ್ಮೆ ಗೂಡುಗಳನ್ನು ಮಾಡತಕ್ಕ ಸರ್ಕಾರಿ ಮಾರ್ಕೆಟ್‌ಗಳನ್ನು ಮಾಡಿದ್ದಾರೆ. ಅಲ್ಲಿ ನಡೆಯುತ್ತಾ ಇರುವ ವ್ಯವಹಾರ ರೀತಿ ನೀತಿ, ಅನ್ಯಾಯಗಳು ಮತ್ತೆ ಎಲ್ಲಿಯೂ ನಡೆಯುತ್ತಾ ಇಲ್ಲ. ಇಂತಹ ಮಾರ್ಕೆಟಿನಲ್ಲಿ ರೈತರಿಗೆ ಬಹಳವಾಗಿ ಅನ್ಯಾಯಗಳು ಆಗುತ್ತಿವೆ. ಅಲ್ಲಿ ಯಾವ ರೀತಿಯಲ್ಲಿಯೂ ಸರಿಯಾಗಿ ಗೂಡು ಆಗುತ್ತಾ ಇಲ್ಲ. ಇವತ್ತಿನ ದಿವಸ ಅವೆಲ್ಲಾ ಕಸು ಆಗುತ್ತಿದೆ. ಇದರ ಬಗ್ಗೆ ರೈತರಿಗೆ ಒಂದು ಚೀಟಿಯನ್ನೂ ಸಹ ಕೊಡುತ್ತಿಲ್ಲ. ಅವನು ಕೊಡತಕ್ಕ ರೇಷ್ಮೆ ಗೂಡಿಗೆ ಒಂದು ಆಧಾರವಿಲ್ಲ ಈ ರೇಷ್ಮೆ ಬಗ್ಗೆ ಸಾಕಷ್ಟು ಅನುಭವ ಇಲ್ಲದೇ ಇರತಕ್ಕ ಅಧಿಕಾರಿಗಳು ಬಂದರೆ ರೇಷ್ಮೆ ಗೂಡು ಒಂದಲ್ಲ ಒಂದು ರೀತಿಯಲ್ಲಿ ಕೆಡುವ ಸಂದರ್ಭಗಳೂ ಉಂಟು. ಗೂಡು ಹರಾಜು ಮಾಡಿದಮೇಲೆ ರೈತರಿಗೆ ಚೀಟಿ ಕೊಡುತ್ತಾರೆ. ಚೀಟಿ ಅಂದರೇನು? ಕಾನೂನಿನಲ್ಲಿ ರೇಷ್ಮೆ ಖರೀದಿ ಆದ ತಕ್ಷಣ ಹಣ ಕೊಡಬೇಕೆಂದಿದೆ. ಶೇಕಡ 95 ಭಾಗದಷ್ಟು ಸಂದರ್ಭಗಳಲ್ಲಿ ಅಲ್ಲಿ ಗೂಡು ಮಾರಾಟ ಆದ ತಕ್ಷಣ ಹಣವನ್ನು ಕೊಡುತ್ತಾ ಇಲ್ಲ. ಬರೀ ಚೀಟಿ ಮಾತ್ರ ಕೊಡುತ್ತಾರೆ. ಚೀಟಿ ತೆಗೆದುಕೊಂಡು ಹೋಗಿ 10-15 ದಿವಸಗಳಾದ ಮೇಲೆ ದುಡ್ಡು ತೆಗೆದುಕೊಂಡು ಹೋಗುವುದಕ್ಕೆ ಬರಬೇಕೆಂದು ಹೇಳುತ್ತಾರೆ. ಅವನು ಒಂದು ತಿಂಗಳು ಕಷ್ಟಪಟ್ಟು ಬೆಳೆದಂಥ ಗೂಡಿಗೆ ಕುಂಟು ನೆಪವನ್ನು ತೋರಿಸಿ ಸ್ಥಳಾವಕಾಶವಿಲ್ಲವೆಂದು ಹೇಳುತ್ತಾರೆ. 24 ಮಾರ್ಕೆಟ್‌ಗಳಲ್ಲಿ ಒಂದನ್ನು ಬಿಟ್ಟರೆ ಬೇರೆ ಕಡೆಗಳಲ್ಲಿ ಎಲ್ಲಿಯೂ ಅಂತಹ ಅವಕಾಶವಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ನಾನು ಒಂದು ಸೂಚನೆಯನ್ನು ಕೊಡುತ್ತೇನೆ. ಮಳೆಗಾಲದಲ್ಲಿ ದಯವಿಟ್ಟು ಈ ಎಲ್ಲ ಮಾರ್ಕೆಟ್‌ಗಳಲ್ಲಿ ಏನು ಪರಿಸ್ಥಿತಿ ಇದೆಯೆಂಬುದನ್ನು ಮಾನ್ಯ ಮಂತ್ರಿಗಳು ಕಣ್ಣಾರೆ ನೋಡಬೇಕು. ಅಲ್ಲಿನ ವ್ಯಾಪಾರಕ್ಕೆ ಕೊಟ್ಟಿರತಕ್ಕ ಸ್ಕೇಲುಗಳು ಒಂದೊಂದು ರೀತಿಯಲ್ಲಿರುತ್ತವೆ. ಎಲ್ಲ ಮಾರ್ಕೆಟ್‌ಗಳಿಗೂ ಯೂನಿಫಾರಂ ಸ್ಕೇಲುಗಳನ್ನು ಕೊಡಬೇಕೆಂದು ಹೇಳಿ, ಆ

ಮಾರ್ಕೆಟ್‌ಗಳನ್ನು ಎಲ್ಲ ರೀತಿಯಲ್ಲಿಯೂ ಅಭಿವೃದ್ಧಿಪಡಿಸಬೇಕೆಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ) :—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಕೈಗಾರಿಕೆಯ ಮಂತ್ರಿಗಳು ತಂದಿರತಕ್ಕ ಬೇಡಿಕೆಯನ್ನು ನಾನು ಸಂತೋಷದಿಂದ ಒಪ್ಪಿ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಆಡಬೇಕೆಂದಿಚ್ಛಿಸುತ್ತೇನೆ. ರೇಷ್ಮೆ ಕೈಗಾರಿಕೆಯ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ಮೊಟ್ಟಮೊದಲನೆಯದಾಗಿ ಸರ್ಕಾರದವರು ರೇಷ್ಮೆ ಹಿಪ್ಪಲಿ ಫಾರಂಗಳನ್ನು ಮಾಡಿದ್ದಾರೆ. ಅವು ಈಗ ಯಾವ ಮಟ್ಟಕ್ಕೆ ಇಳಿದಿವೆ, ಎಷ್ಟು ಹಣ ಅಂದರೆ ಎಷ್ಟು ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತಿವೆ, ಎಷ್ಟು ಜನ ಲೇಬರ್‌ಗಳನ್ನು ಇಟ್ಟುಕೊಂಡಿದ್ದಾರೆಂಬುದನ್ನು ನೋಡಿದರೆ, ಅಲ್ಲಿ ಎರಡು ಸಾವಿರ, ಮೂರು ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಯಾವ ವಿಧವಾದ ಸೌಲಭ್ಯವನ್ನೂ ಸಹ ಕೊಡಲಿಲ್ಲ. ಕೂಲಿ ಸುಮಾರು ಎರಡು ಕಾಲು ಅಥವಾ ಎರಡು ಮುಕ್ಕಾಲು ರೂಪಾಯಿಗಳನ್ನು ಕೊಡುತ್ತಾ ಇರುವುದರಿಂದ ಅವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಫಾರಂ ಬಹಳ ಹೀನಸ್ಥಿತಿಯಲ್ಲಿದೆ. ಈಗಾಗಲೇ ಆ ಫಾರಂಗಳನ್ನು ನೋಡುವುದಕ್ಕೆ ಬಹಳ ಅಸಹ್ಯವಾಗಿದೆ. ಲೇಬರರ್‌ಗೆ ಜಾಸ್ತಿ ಸಂಬಳ ಕೊಟ್ಟು ಅವರ ಸ್ಥಿತಿಗತಿಗಳನ್ನು ಇಂಪ್ರೂವ್ ಮಾಡಿದರೆ ಫಾರಂಗಳು ಇನ್ನೂ ಅನುಕೂಲ ಸ್ಥಿತಿಗೆ ಬರುತ್ತವೆ. ರೋಗರಹಿತವಾದ ಮೊಟ್ಟೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈಗ ಆ ಕಾರ್ಯ ನಿಂತು ಹೋಗಿದೆ. ರೋಗರಹಿತವಾದ ಮೊಟ್ಟೆ ಮಾಡುವಾಗ ಒಂದು ರೇಟನ್ನು ಸರ್ಕಾರದವರು ನಿಗದಿ ಮಾಡುತ್ತಾರೆ. ಗೂಡು ತೆಗೆದುಕೊಂಡು ಮೊಟ್ಟೆ ಮಾಡಿದಾಗೂ ಅಲ್ಲಿನ ಅಧಿಕಾರಿಗಳು ಕೆಲವರು ಸೇರಿಕೊಂಡು ಅದನ್ನು ಕೆಲವು ಸಂದರ್ಭಗಳಲ್ಲಿ ಬೇರೆಯವರಿಗೆ ಮಾರಿರುವ ಸಂದರ್ಭಗಳೂ ಉಂಟು. ಕೆಲವು ಕಡೆಗಳಲ್ಲಿ ಅವೇನೂ ಖರ್ಚಾಗಲಿಲ್ಲ, ಇಷ್ಟೇ ಹಾಕಿದ್ದಾರೆಂದು ರಿಪೋರ್ಟ್ ಮಾಡಿರುವುದೂ ಉಂಟು. ಅದು ತಮ್ಮ ಗಮನಕ್ಕೆ ಬಂದಿದೆಯೇ? ಅಂತಹ ಪರಿಸ್ಥಿತಿಯನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ತಾವು ಅದನ್ನು ಗಮನಿಸಿ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು

ಎರಡನೆಯದಾಗಿ ಫಿಲೇಚರ್ ವಿಷಯ. ಈಗ ಸರ್ಕಾರದವರು ಹಾಕಿರುವ ಮಾರ್ಕೆಟ್ ನಿಯಮ ಏನಿದೆಯೋ ಅದನ್ನು ಯಾರೂ ಸಮಂಜಸವೆಂದು ಒಪ್ಪಿಕೊಳ್ಳುತ್ತಾ ಇಲ್ಲ. ಮಾರ್ಕೆಟ್ಟಿನಲ್ಲಿ 8 ರೂಪಾಯಿಗಳು ಗೂಡು ಇದ್ದರೆ ಒಂದೇ ವರ್ಷದಲ್ಲಿ 10 ರೂಪಾಯಿಗಳು ಆಗುತ್ತದೆ. ಒಂದುವೇಳೆ ಮಾರ್ಕೆಟ್ಟಿನಲ್ಲಿ ದಳ್ಳಾಳಿಗಳು ಅಥವಾ ದೊಡ್ಡ ದೊಡ್ಡ ವ್ಯಾಪಾರಸ್ಥರು ಇದ್ದರೆ ಒಂದೊಂದು ಸಾರಿ ಅದರ

(ಶ್ರೀ ಎಂ. ಸಿದ್ದಮಾದಯ್ಯ)

ಬೆಲೆ 30-50 ರೂಪಾಯಿಗಳಿಗೆ ಏರಿಸುತ್ತಾರೆ. ಇದರಿಂದ ದುಡ್ಡನ್ನು ಅಧಿಕವಾಗಿ ಪಡೆಯಬೇಕೆಂಬ ಅಧಿಕಾರಿಗಳು ಇದರಲ್ಲಿ ಮಿಳಿತರಾಗಿದ್ದಾರೆಂದು ನನಗೆ ಅನೇಕ ದೂರುಗಳು ಬಂದಿವೆ. ಆದ್ದರಿಂದ ಸರ್ಕಾರದವರು ಯಾವ್ಯಾವ ಫಿಲೇಚರ್ ನೊಳಗೆ ಯಾವ್ಯಾವ ರೀಲ್‌ಗಳಿಗೆ ಎಷ್ಟೆಷ್ಟು ಕೊಡಬೇಕೆಂಬುದನ್ನು ತಿಳಿದು ಎಷ್ಟು ಅವರಿಗೆ ಸಪ್ಲೈ ಮಾಡಿದರೆ ಅವರಿಂದ ಲಾಭ ಬರುತ್ತದೆ, ಯಾವ್ಯಾವ ರೀಲ್ಸ್‌ನಿಂದ ಎಷ್ಟು ಲಾಭ ಬರುತ್ತದೆಂಬ ಬಗ್ಗೆ ಹೊಸದಾಗಿ ಕಾನೂನು ಮಾಡಿ ಕಾರ್ಯಗತ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಯವರಿಗೆ ಹೇಳುತ್ತೇನೆ ಅದನ್ನು ಮಾಡದ ಹೊರತು ಈ ವ್ಯಾಪಾರ ಸರಿಯಾಗಿ ನಡೆಯುವುದಿಲ್ಲ ದುಷ್ಟರ ವಶಕ್ಕೆ ಹೋಗುತ್ತದೆ. ಯಾರೋ ಒಬ್ಬ ದಳ್ಳಾಳಿ ಕೈಗೆ ಹೋಗುತ್ತದೆ. ಹಿಂದಿನ ಸರ್ಕಾರದವರು ಈ ಒಂದು ಮಾರ್ಗವನ್ನು ತಪ್ಪಿಸಬೇಕೆಂಬ ಕ್ರಮವನ್ನು ಹಾಕಿಕೊಂಡು ಅದನ್ನು ತಪ್ಪಿಸುವುದಕ್ಕೆ ಒಂದು ಹೊಸ ಕಾನೂನು ತಂದು ಸೂಕ್ತ ವ್ಯವಸ್ಥೆ ಮಾಡದೇ ಹೋದರೆ ಇದರಿಂದ ಆ ಕೈಗಾರಿಕೆ ಉಳಿಯುವುದಿಲ್ಲ ಇದನ್ನು ತಾವು ಗಮನದಲ್ಲಿಟ್ಟುಕೊಳ್ಳದೇ ಹೋದರೆ ಮುಂದೆ ವಿಪರೀತ ಕಷ್ಟವಾಗುತ್ತದೆ. ಚಿನ್ನವೂ ಒಂದೇ ಇದೂ ಒಂದೇ ತೂಕ ಹಾಕಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದನ್ನು ಒಂದು ಸರಿಯಾದ ಕಾನೂನು ರೀತ್ಯ ವ್ಯವಸ್ಥೆ ಮಾಡದೇ ಹೋದರೆ ಬಹಳ ಭಯವಾಗುತ್ತದೆ. ಲಕ್ಷಾಂತರ ಜನರಿಗೆ ಜೀವನ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ ಮಧ್ಯಮ ವರ್ತಿಗಳು ಇದರಿಂದ ಹೆಚ್ಚಿಗೆ ಲಾಭ ಸಂಪಾದನೆ ಮಾಡುತ್ತಿದ್ದಾರೆ. ನಾನೂ ಸಹ ಮಾಡುತ್ತಿದ್ದೇನೆ. ಇದರಲ್ಲಿ ಬೆಲೆಯಲ್ಲಿ ಏರಿಳಿತಗಳು ಆಗುತ್ತಾ ಇರುತ್ತವೆ. 8 ಸಾವಿರ ರೂಪಾಯಿಗಳನ್ನು ನಷ್ಟ ಮಾಡಿಕೊಂಡಿರುವ ನಿದರ್ಶನವೂ ಇದೆ. ಈ ವ್ಯಾಪಾರ ಸರಿ ಹೊಂದಿಸಿಕೊಳ್ಳಬೇಕಾದರೆ ಇದರ ಬಗ್ಗೆ ಒಂದು ಸರಿಯಾದ ಕಂಡೀಷನ್ ತರದೇ ಹೋದಾಗ ನಿಜವಾಗಿಯೂ ಈ ವ್ಯಾಪಾರ ಕುಲಗೆಟ್ಟು ಹೋಗಿ ಹದಗೆಡುತ್ತದೆ. ಅದ್ದರಿಂದ ದಯವಿಟ್ಟು ಇದನ್ನು ಸರ್ಕಾರದವರು ನಿಗದಿಮಾಡಿದಂಥ ದರದ ಬೇಸಿಸ್ ಮೇಲೆ ರೀಲ್ ವ್ಯಾಲ್ಯುಯೇಷನ್ ಇಟ್ಟುಕೊಂಡು ಕೋಅಪರೇಟಿವ್ ಮಾರ್ಕೆಟ್ಟಿನಲ್ಲಿ ಆಕ್ಷನ್ ಆಗಬೇಕು. ಆಗ ಅದು ಅಭಿವೃದ್ಧಿಯಾಗುತ್ತದೆ ಇಲ್ಲದೇ ಹೋದರೆ ಇದರಲ್ಲಿ ಕಟುವಾದ ವ್ಯಾಪಾರವಾಗಿ ವರ್ತನ ಮಂಡಲಿಯಲ್ಲಿ ಒಂದು ಗುಂಪು ಉಂಟಾಗಿ ಅವರಿಗೆ ಹೆಚ್ಚು ಲಾಭ ಸಂಪಾದನೆ ಯಾಗುವುದಕ್ಕೆ ಅವಕಾಶವಾಗುತ್ತದೆ. ದರವನ್ನು ನಿಗದಿಮಾಡುವುದರಲ್ಲಿ ತಪ್ಪುಮಾಡಿದರೆ ಆಗ ಈ ವ್ಯಾಪಾರಕ್ಕೆ ಉಳಿಗಾಲ ಸಿಗದೆ ಹೋಗುತ್ತದೆ. ಇಲ್ಲದೇ ಹೋದರೆ ಬೇರೆಯವರ ಕೈಗೆ ಹೋಗಿ ಈ ಕೈಗಾರಿಕೆಯೇ ನಾಶವಾಗುತ್ತದೆ. ಆಗ ಮೊಟ್ಟೆ ಮಾಡುವ ವಿಷಯದಲ್ಲಿ ಬಹಳ ತೊಂದರೆ ಯಾಗುತ್ತದೆ. ಹಿಂದೆ ಇದರ ಬಗ್ಗೆ ಸರ್ಕಾರದವರು

ಒಂದು ಹಿಡಿತವನ್ನು ಇಟ್ಟುಕೊಂಡಿದ್ದರು. ಆದ್ದರಿಂದ ಈ ವರ್ಷದಲ್ಲಿ ಹೇಗೆ ಆ ಮೊಟ್ಟೆಯನ್ನು ಪರೀಕ್ಷೆ ಮಾಡಿ ಅದನ್ನು ರೈತರಿಗೆ ಹಂಚುತ್ತಿದ್ದಾರೆಂಬುದು ಗೊತ್ತಿಲ್ಲ. ಯಾವ್ಯಾವ ಗ್ರೇಡಿನಲ್ಲಿ ಯ್ಯಾರ್ಯಾರು ಎಷ್ಟೆಷ್ಟು ಮೊಟ್ಟೆಗಳನ್ನು ಮಾಡುತ್ತಾರೆ, ಯಾರ್ಯಾರಿಗೆ ಲೈಸೆನ್ಸ್ ಇದೆಯೆಂಬುದನ್ನು ಅರಿತು, ಇನ್ನೂ ಯ್ಯಾರ್ಯಾರಿಗೆ ಲೈಸೆನ್ಸ್ ಕೊಟ್ಟಿಲ್ಲವೆಂಬ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಿ, ಯಾರು ಈ ಉದ್ಯಮದಲ್ಲಿ ತೊಡಗುತ್ತಾರೋ ಅಂತಹವರಿಗೆ ಕೂಡಲೇ ಲೈಸೆನ್ಸ್ ಕೊಟ್ಟರೆ ಆಗ ರೈತರು ನಿಜವಾಗಿ ಉದ್ಧಾರವಾಗುತ್ತಾರೆ.

ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡು ವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಕೆ. ಸಿದ್ಧಯ್ಯ (ಸಂತೇಮಾರನಹಳ್ಳಿ) :— ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಪೂರ್ಣವಾಗಿ ಅನುಮೋದಿಸುತ್ತಾ ತಮ್ಮ ಮೂಲಕ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಡಿ-ಲಿಮಿಟೇಷನ್ ಆಫ್ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಲೆಜಿಸ್ಲೇಚರ್ ಕಾನ್‌ಸ್ಟಿಟ್ಯೂಯನ್ಸಿ ಪ್ರಕಾರ ನಮ್ಮ ಒಂದು ಜಿಲ್ಲೆಯನ್ನು ಈಗ ಬಿಟ್ಟಿದ್ದಾರೆ. ಹೋದಸಾರಿ ಅದು ಇತ್ತು. ಈಗ ಅದು ಇಲ್ಲ. ಅದೇನು ಕಾರಣವೋ ಗೊತ್ತಿಲ್ಲ. ಡಿ-ಲಿಮಿಟೇಷನ್ ಆಕ್ಟ್ ಪ್ರಕಾರ ಒಂದು ರೆವಿನ್ಯೂ ಡಿವಿಷನ್ನಿಗೆ ಕೊಡಬೇಕು. ಒಂದು ಜಿಲ್ಲೆಯನ್ನು ಬಿಟ್ಟಿದ್ದಾರೆ. ಹೋದಸಾರಿ ಇತ್ತು. ಈ ಸಾರಿ ಇಲ್ಲ. ಆದೇನಾದರೂ ವ್ಯೆಗ್ರೇಷನ್ ಆಗಿದೆಯೋ ಅಥವಾ ಆದರ ಪಾಪ್ಯುಲೇಷನ್ ಏನಾದರೂ ಇನ್ನೊಂದು ಕಡೆಯಲ್ಲಿ ಇನ್‌ಕ್ಲೂಡ್ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು.

ಇನ್ನು ಸಿಲ್ಕ್ ಫಿಲೇಚರ್ ವಿಷಯವಾಗಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಇವತ್ತಿನ ದಿವಸ ಸಿಲ್ಕ್ ಮಾರ್ಕೆಟ್ಟಿನಲ್ಲಿ ಬಹಳಮಟ್ಟಿಗೆ ಪ್ರೋಗ್ರೆಸ್ ಆಗುತ್ತಿದೆಯೆಂದು ನಾನು ಹೇಳಿದ್ದೇನೆ ಹಿಂದೆ ಈ ಕೈಗಾರಿಕೆಯನ್ನು ತೆಗೆದುಕೊಂಡರೆ ಅವರಿಗೆ ಕೂಪನ್‌ಗಳನ್ನು ಸರ್ಕಾರದವರೇ ಕೊಟ್ಟು ಪ್ರೋತ್ಸಾಹ ಕೊಡುತ್ತಿದ್ದರು. ಈಗ ಅದನ್ನು ಗ್ರೋಯರ್ಸ್ ತೆಗೆದುಕೊಂಡು ಹೋಗುವುದರಿಂದ ಮತ್ತು ಅಂತಹ ಒಂದು ಪದ್ಧತಿಯನ್ನು ಇಂಟ್ರಡ್ಯೂಸ್ ಮಾಡಿರುವುದರಿಂದ ಅವರಿಗೆ ಬೋನಸ್ ಸಹ ಸಿಗುತ್ತಿದೆ. ಒಳ್ಳೆಯ ಮಾರ್ಕೆಟಿಂಗ್ ಸಹ ಈಗ ನಮ್ಮ ರೈತರಿಗೆ ಸಿಗುತ್ತಿದೆ. ಅಲ್ಲಿ ಈಗ ಎಂತಹ ಕೈವಾಡವೂ ಸಹ ನಡೆಯುವುದಿಲ್ಲ

(ಶ್ರೀ ಕೆ. ಸಿದ್ದಯ್ಯ)

7-00 P. M.

ಬ್ಯಾಂಕುಗಳಿಂದ ಗ್ರೋಯರ್ಸ್‌ಗೆ ಸಾಲದ ರೂಪದಲ್ಲಿ ಫ್ರೀ ಆಫ್ ಇಂಟರೆಸ್ಟ್ 90 ಪರ್ಸೆಂಟ್ ಹಣ ಕೊಟ್ಟರೆ ಇನ್ನು ಹೆಚ್ಚಿನ ಸಹಾಯವಾಗುತ್ತದೆ ಎಂದು ಸೂಚನೆ ಮಾಡುತ್ತೇನೆ. ಸಿಲ್ಕ್ ಫ್ಯಾಕ್ಟರಿ ಸರ್ಕಾರದ್ದೇ. ಆದರೆ ಅಗ ಲಾಭದಾಯಕವಾಗಿ ತೋರಿಸುವುದಕ್ಕೆ ಆಗುವುದಿಲ್ಲ. ಮತ್ತು ಸರ್ಕಾರದವರಿಗೆ ನಷ್ಟವಾಗುವುದಕ್ಕೂ ಕೂಡ ಕಾರಣವಿಲ್ಲ ಎಂಬುವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಇನ್ನು ಸಿಲ್ಕ್ ಪ್ರೊಡ್ಯೂಸರ್ಸ್ ಏನು ಇದ್ದಾರೆ ಅವರು ತಮಗೆ ಬಂದಂತ ಹಣದಲ್ಲಿ ಸರ್ಟನ್ ಪರ್ಸೆಂಟೇಜ್ ಅಡ್ವಾನ್ಸ್ ಆಗಿ ಕೊಟ್ಟುಬಿಡುತ್ತಾರೆ ಮತ್ತು ಇನ್ನಷ್ಟು ಹಣವನ್ನು ಉದ್ಯಮದಲ್ಲಿ ಇನ್‌ವೆಸ್ಟ್ ಮಾಡಿ ನಿಂತುಹೋಗುತ್ತದೆ. ಇದರಿಂದ ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಬಹಳ ತೊಂದರೆಯಾಗುತ್ತದೆ ಆದ್ದರಿಂದ ಸರ್ಕಾರ ಇದನ್ನು ಪರ್ಯಾಲೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಸಿಲ್ಕ್ ಫಿಲೇಚರ್‌ಗಳಲ್ಲಿ ಚರಕಗಳು ನಿಂತುಹೋಗಿದೆ. ಅವು ನಿಂತುಹೋಗಿರುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಸರ್ಕಾರದ ಇಂಡಸ್ಟ್ರೀಸ್ ಬಗ್ಗೆ ಮಾತನಾಡುತ್ತಾ ಮಾನ್ಯ ಮಿತ್ರರಾದ ಶ್ರೀಮಾನ್ ತಿಮ್ಮಪ್ಪನವರು ಇಂಡಸ್ಟ್ರೀಸ್ ಅಭಿವೃದ್ಧಿ ಮಾಡತಕ್ಕಂಥ ಅವಕಾಶನವ್ನೂ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಸರ್ಕಾರದವರು ಕೊಟ್ಟಿರುವುದಿಲ್ಲ, ಇದರಲ್ಲಿ ಜಾತೀಯ ಕೈವಾಡ ಇದೆಯೆಂದು ಹೇಳಿದರು. ಸರ್ಕಾರದವರು ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಬೇಕು. ಇದರ ಬಗ್ಗೆ ದೇಶದ ಮುಂದೆ, ಜನತೆಯ ಮುಂದೆ ತಪ್ಪು ಅಭಿಪ್ರಾಯವಿದೆ, ಹಿಂದುಳಿದಂತಹ ಜನರಿಗೆ ಅವಕಾಶ ಇಲ್ಲದೆ ಹೋದರೆ ಏನು ಪ್ರಯೋಜನ? ಇದರಲ್ಲಿ ಇಂಡಸ್ಟ್ರೀಸ್ ಬಗ್ಗೆ ಕೊಟ್ಟರತಕ್ಕಂಥ 50 ಪರ್ಸೆಂಟ್ ಸಾಲದ ಯಾವ ಒಂದು ಸೌಲಭ್ಯ ಇದೆ ಅದರಲ್ಲಿ ಹರಿಜನರಿಗೆ ರಿಸರ್‌ವೇಷನ್ ಇಲ್ಲದಂತಾಗುತ್ತದೆ. ಇಂತಹ ದೌರ್ಬಲ್ಯವಾದಂತಹ ಜನಾಂಗ ಏನು ಇದೆ ಅವರಿಗೆ ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಸರ್ಕಾರಿ ಉದ್ಯಮಗಳಲ್ಲಿ ದೊಡ್ಡ ನೌಕರರು ರಿಟೈರ್ ಆದಮೇಲೆ ಅವರ ಮನೆಯವರಲ್ಲಿ ಯಾರಿಗಾದರೂ ಕೆಲಸವನ್ನು ಕೊಡಬೇಕೆಂದು ಹೇಳುತ್ತಾರೆ. ಇದು ಹೆರಿಡಿಟರಿ ಆದಹಾಗೆ ಆಗುತ್ತದೆ. ಹಾಗೆ ಅಗಬಾರದು ಎಂದು ಹೇಳುತ್ತೇನೆ.

MR. DEPUTY SPEAKER :—Now the House will rise and will meet at 12 noon tomorrow.

The House adjourned at Six Minutes past Seven of the Clock to meet again at Twelve of the Clock on Tuesday, the 25th March, 1975.

WD—058—GBPC—550—30-7-75.